# 6 ರಿಂದ 8 ನೆಯ ತರಗತಿಗಳ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಆಯ್ಕೆಗಾಗಿ ನಡೆಯುವ ಸಾಮಾನ್ಯ ಕನ್ನಡ ಸ್ಪರ್ಧಾತ್ಮಕ ಪರೀಕ್ಷೆಗಾಗಿ



# ಕನ್ನಡ ವ್ಯಾಕರಣ


**ಬಿ. ರವೀಶ್ ಕುಮಾರ್**

**ನಿವೃತ್ತ ಕನ್ನಡ ಭಾಷಾ ಶಿಕ್ಷಕರು**

**ರಾಜ್ಯ ಸಂಪನ್ಮೂಲ ವ್ಯಕ್ತಿಗಳು.**

**# 2905, ಹೊನ್ನಸಿರಿ, 3 ನೆಯ ಕ್ರಾಸ್,**

**'ಎಫ್' ಬ್ಲಾಕ್, ಕನಕದಾಸ ನಗರ.**

**ದಟ್ಟಗಳ್ಳಿ 3 ನೆಯ ಹಂತ, ಮೈಸೂರು – 570033**

**ಅಲೆಯುಲಿ ಎಣಿಕೆ : 94489 58498**

# ಸಾಮಾನ್ಯ ಕನ್ನಡ ಪತ್ರಿಕೆ – 1 ಪಠ್ಯವಸ್ತು

1. ಕನ್ನಡ ವರ್ಣಮಾಲೆ
2. ಗುಣಿತಾಕ್ಷರಗಳು ಮತ್ತು ಸಂಯುಕ್ತಾಕ್ಷರಗಳು
3. ನಾಮಪದ ಮತ್ತು ಅದರ ಬಗೆಗಳು – ಸರ್ವನಾಮ, ಪ್ರಶ್ನಾರ್ಥಕ ಸರ್ವನಾಮ, ಆತ್ಮಾರ್ಥಕ ಸರ್ವನಾಮ, ಭಾವನಾಮ ಇತ್ಯಾದಿ.
4. ಕ್ರಿಯಾಪದ – ಅಕರ್ಮಕ – ಸಕರ್ಮಕ, ಕ್ರಿಯಾರ್ಥಕ ರೂಪಗಳು, ಕಾಲಗಳು, ಆಖ್ಯಾತ ಪ್ರತ್ಯಯಗಳು, ಕಾಲಪಲ್ಲಟ.
5. ಲಿಂಗ – ವಚನ
6. ವಿಭಕ್ತಿ ಪ್ರತ್ಯಯ ಮತ್ತು ಅದರ ಕಾರಕಾರ್ಥಗಳು (ಹಳಗನ್ನಡ ಮತ್ತು ಹೊಸಗನ್ನಡ)
7. ಸಂಧಿಗಳು (ಕನ್ನಡ ಮತ್ತು ಸಂಸ್ಕೃತ)
8. ಸಮಾಸಗಳು
9. ಕೃದಂತಗಳು ಮತ್ತು ತದ್ಧಿತಾಂತಗಳು
10. ದ್ವಿರುಕ್ತಿ, ಜೋಡುನುಡಿ, ಪಡನುಡಿ, ನುಡಿಗಟ್ಟುಗಳು
11. ಅವ್ಯಯಗಳು ಮತ್ತು ಅದರ ಪ್ರಕಾರಗಳು
12. ವಾಕ್ಯ ಮತ್ತು ವಾಕ್ಯದ ವಿಧಗಳು
13. ಲೇಖನ ಚಿಹ್ನೆಗಳು
14. ಪದಗಳ ಅರ್ಥ, ಸಮಾನಾರ್ಥಕಗಳು, ನಾನಾರ್ಥಕಗಳು, ವಿರುದ್ಧಾರ್ಥಕಗಳು, ಪದಗಳ ಶುದ್ಧರೂಪ.
15. ತತ್ಸಮ – ತದ್ಭವ ಮತ್ತು ಅನ್ಯದೇಶೀಯ ಪದಗಳು
16. ಗ್ರಾಮ್ಯ ಮತ್ತು ಗ್ರಾಂಥಿಕ ರೂಪಗಳು
17. ಗಾದೆಗಳು
18. ಛಂದಸ್ಸು ಮತ್ತು ಅಲಂಕಾರಗಳು
19. ಹಳಗನ್ನಡ (ಕವಿ, ಕಾಲ, ಸ್ಥಳ, ಆಶ್ರಯ, ಬಿರುದು, ಕಾವ್ಯ) ಮತ್ತು ಹೊಸಗನ್ನಡ ಸಾಹಿತ್ಯ ಚರಿತ್ರೆ (ಕವಿ, ಕಾಲ, ಸ್ಥಳ, ಕಾವ್ಯ, ಪ್ರಶಸ್ತಿಗಳು)

# ಪರಾಮರ್ಶನ ಗ್ರಂಥಗಳು


1. ಕರ್ನಾಟಕ ಪಠ್ಯಪುಸ್ತಕ ಸಂಘವು ಪ್ರಕಟಿಸಿರುವ ಪ್ರಸ್ತುತ 6 ರಿಂದ 10 ನೇ ತರಗತಿವರೆಗಿನ ಪ್ರಥಮ, ದ್ವಿತೀಯ, ತೃತೀಯ ಭಾಷೆ ಕನ್ನಡ ಪಠ್ಯಪುಸ್ತಕಗಳು.
2. ಕನ್ನಡ ಮಧ್ಯಮ ವ್ಯಾಕರಣ – ತೀ.ನಂ. ಶ್ರೀಕಂಠಯ್ಯ
3. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ
4. ಕನ್ನಡ ಸಾಹಿತ್ಯ ಚರಿತ್ರೆ – ತ.ಸು. ಶಾಮರಾಯ
5. ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ – ಪರಿಷ್ಕೃತ ಮುದ್ರಣದ ಸಂಪಾದಕರು ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ – ಸಾಹಿತ್ಯ ಪರಿಷತ್ತು ಪ್ರಕಟಣೆ
6. ಕನ್ನಡ ಛಂದೋವಿಕಾಸ – ಡಾ. ಡಿ.ಎಸ್. ಕರ್ಕಿ
7. ಹೊಸಗನ್ನಡ ಸಾಹಿತ್ಯ ಚರಿತ್ರೆ – ಎಲ್. ಎಸ್. ಶೇಷಗಿರಿರಾವ್
8. ಹೊಸಗನ್ನಡ ವ್ಯಾಕರಣ, ಛಂದಸ್ಸು ಮತ್ತು ವ್ಯಾವಹಾರಿಕ ಕನ್ನಡ – ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಡಾ. ಕೆ. ಆರ್. ಗಣೇಶ್, ಪ್ರೊ. ಅಶ್ವತ್ಥನಾರಾಯಣ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ
9. ಕನ್ನಡ ಕೈಪಿಡಿ ಸಂಪುಟ –1 ಪ್ರಕಟಣೆ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಮೈಸೂರು
10. ಕನ್ನಡ ರತ್ನಕೋಶ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ
11. ಯುಗಧರ್ಮ ಮತ್ತು ಸಾಹಿತ್ಯ ದರ್ಶನ – ಡಾ. ಕೀರ್ತಿನಾಥ ಕುರ್ತಕೋಟಿ
12. ಕನ್ನಡ ಭಾಷಾ ಶಾಸ್ತ್ರ – ರಾ.ಯ. ಧಾರವಾಡಕರ್
13. ಕನ್ನಡ ಭಾಷೆಯ ಚರಿತ್ರೆ – ಡಾ. ಸಾ.ಶಿ. ಮರುಳಯ್ಯ

# ಪತ್ರಿಕೆ – 1 ಪ್ರಶ್ನಪತ್ರಿಕೆ
## ವಿಷಯ : ಸಾಮಾನ್ಯ ಕನ್ನಡ
## (ಹುದ್ದೆ : 6ರಿಂದ 8 ನೆಯ ತರಗತಿಗಳ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು)

---

**ಅಂಕಗಳು : 25**

**1. ಕನ್ನಡ ವರ್ಣಮಾಲೆಯಲ್ಲಿನ ಮಹಾಪ್ರಾಣಾಕ್ಷರಗಳ ಸಂಖ್ಯೆ:**

(1) 13 (2) 10
(3) 25 (4) 9

**ಉತ್ತರ : (2) 10**

**2. ಅಷ್ಟು ದೊಡ್ಡ ಮರವನ್ನು ಹೇಗೆ ಕಡಿದರು ? ಈ ವಾಕ್ಯದಲ್ಲಿರುವ 'ಅಷ್ಟು' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ:**

(1) ಸಂಖ್ಯಾವಾಚಕ (2) ಗುಣವಾಚಕ
(3) ದಿಗ್ವಾಚಕ (4) ಪರಿಮಾಣವಾಚಕ

**ಉತ್ತರ : (4) ಪರಿಮಾಣವಾಚಕ**

**3. ಈ ಪದಗಳು ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಗಳಾಗಿವೆ:**

(1) ತಾನು, ತಾವು (2) ಯಾರು, ಯಾವುದು
(3) ನಾನು, ನಾವು (4) ಅದು, ಅವು

**ಉತ್ತರ : (1) ತಾನು, ತಾವು**

**4. 'ಮೊತ್ತಮೊದಲು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ:**

(1) ಜೋಡಿ ಪದ (2) ದ್ವಿರುಕ್ತಿ
(3) ನುಡಿಗಟ್ಟು (4) ಅನುಕರಣಾವ್ಯಯ

**ಉತ್ತರ : (2) ದ್ವಿರುಕ್ತಿ**

**5. 'ಸಾವಿತ್ರಿಯನ್ನು' ಪದದಲ್ಲಿರುವ ವಿಭಕ್ತಿ:**

(1) ತೃತೀಯ (2) ಚತುರ್ಥಿ
(3) ದ್ವಿತೀಯ (4) ಪಂಚಮಿ

**ಉತ್ತರ : (3) ದ್ವಿತೀಯ**

**6. ದೇವರು ನಿಮಗೆ ಒಳ್ಳೆಯದನ್ನು ಮಾಡಲಿ. ಇಲ್ಲಿ 'ಮಾಡಲಿ' ಪದದಲ್ಲಿರುವ ಕ್ರಿಯಾರೂಪ:**

(1) ವಿಧ್ಯರ್ಥಕ (2) ನಿಷೇಧಾರ್ಥಕ
(3) ಪ್ರಶ್ನಾರ್ಥಕ (4) ಸಂಭಾವನಾರ್ಥಕ

**ಉತ್ತರ : (1) ವಿಧ್ಯರ್ಥಕ**

**7. 'ದೇವೇಂದ್ರ' ಪದದಲ್ಲಾಗಿರುವ ಸಂಧಿ:**

(1) ಸವರ್ಣದೀರ್ಘ (2) ಗುಣ
(3) ಯಣ್ (4) ವೃದ್ಧಿ

**ಉತ್ತರ : (2) ಗುಣ**

**8. 'ಹೊಸಗನ್ನಡ' ಪದದಲ್ಲಾಗಿರುವ ಸಮಾಸ:**

(1) ಕರ್ಮಧಾರಯ (2) ಬಹುವ್ರೀಹಿ
(3) ದ್ವಿಗು (4) ದ್ವಂದ್ವ

**ಉತ್ತರ : (1) ಕರ್ಮಧಾರಯ**

**9. ಇವುಗಳಲ್ಲಿ ಜೋಡುನುಡಿಗೆ ಉದಾಹರಣೆಯಾಗಿರುವುದು:**

(1) ಬಟ್ಟಬಯಲು (2) ಕೆನೆಮೊಸರು

(3) ಜುಳುಜುಳು (4) ಪದೇಪದೇ

**ಉತ್ತರ : (2) ಕೆನೆಮೊಸರು**

**10. 'ಧಗಧಗ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ:**

(1) ದ್ವಿರುಕ್ತಿ (2) ಜೋಡುನುಡಿ

(3) ನುಡಿಗಟ್ಟು (4) ಅನುಕರಣಾವ್ಯಯ

**ಉತ್ತರ : (4) ಅನುಕರಣಾವ್ಯಯ**

**11. 'ಟೋಪಿ ಹಾಕು' ನುಡಿಗಟ್ಟಿನ ಅರ್ಥ:**

(1) ತಲೆಯನ್ನು ಮುಚ್ಚಿಕೋ (2) ಮೋಸಮಾಡು

(3) ಸಹಾಯ ಮಾಡು (4) ಸುಳ್ಳು ಹೇಳು

**ಉತ್ತರ : (2) ಮೋಸಮಾಡು**

**12. 'ವಂಧ್ಯಾ' ಪದದ ತದ್ಭವ ರೂಪ:**

(1) ಬಂಜೆ (2) ಸಂಜೆ

(3) ವಿದ್ಯೆ (4) ವಂದನೆ

**ಉತ್ತರ : (1) ಬಂಜೆ**

**13. 'ರಸೀದಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ:**

(1) ಅರಬ್ಬೀ (2) ಹಿಂದೂಸ್ಥಾನಿ

(3) ಪೋರ್ಚುಗೀಸ್ (4) ಉರ್ದು

**ಉತ್ತರ : (3) ಪೋರ್ಚುಗೀಸ್**

**14. 'ತಕ್ಕೊಂಡು' ಪದದ ಗ್ರಾಂಥಿಕ ರೂಪ:**

(1) ತಗೊ (2) ತಂದುಕೊಡು

(3) ತನಗೆ ಕೊಡು (4) ತೆಗೆದುಕೊಂಡು

**ಉತ್ತರ : (4) ತೆಗೆದುಕೊಂಡು**

**15. "ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು." – ಈ ವಾಕ್ಯದಲ್ಲಿರುವ ಅಲಂಕಾರ:**

(1) ರೂಪಕ (2) ದೃಷ್ಟಾಂತ

(3) ಉಪಮಾ (4) ಉತ್ಪ್ರೇಕ್ಷೆ

**ಉತ್ತರ : (3) ಉಪಮಾ**

**16. ಕಂದಪದ್ಯದಲ್ಲಿರುವ ಒಟ್ಟು ಸಾಲುಗಳ ಸಂಖ್ಯೆ:**

(1) ನಾಲ್ಕು (2) ಆರು

(3) ಮೂರು (4) ಹದಿನಾಲ್ಕು

**ಉತ್ತರ : (1) ನಾಲ್ಕು**

**17. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಆ ವಾಕ್ಯವು:**

(1) ಮಿಶ್ರವಾಕ್ಯ (2) ಸಾಮಾನ್ಯವಾಕ್ಯ

(3) ಪ್ರಶ್ನಾರ್ಥಕ ವಾಕ್ಯ (4) ಸಂಯೋಜಿತ ವಾಕ್ಯ

**ಉತ್ತರ : (1) ಮಿಶ್ರವಾಕ್ಯ**

**18.** **ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು:**

(1) ಉದ್ಧರಣ (2) ವಿವರಣಾತ್ಮಕ
(3) ಪ್ರಶ್ನಾರ್ಥಕ (4) ಭಾವಸೂಚಕ

**ಉತ್ತರ : (4) ಭಾವಸೂಚಕ**

**19.** **'ಜ್ಞಾನ' ಪದದ ವಿರುದ್ಧಾರ್ಥಕ ಪದ:**

(1) ವಿಜ್ಞಾನ (2) ಸುಜ್ಞಾನ
(3) ಅಜ್ಞಾನ (4) ಬಿನ್ನಾಣ

**ಉತ್ತರ : (3) ಅಜ್ಞಾನ**

**20.** **'ಮಾತ್ಸರ್ಯ' ಪದದ ಸಮಾನಾರ್ಥಕ ರೂಪ;**

(1) ಹೊಟ್ಟೆಕಿಚ್ಚು (2) ಅಹಂಕಾರ
(3) ದುರಾಸೆ (4) ಮೋಹ

**ಉತ್ತರ : (1) ಹೊಟ್ಟೆಕಿಚ್ಚು**

**21.** **ಕನ್ನಡದ ಮೊದಲ ರಾಷ್ಟ್ರಕವಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು;**

(1) ಕುವೆಂಪು (2) ಎಂ. ಗೋವಿಂದ ಪೈ
(3) ದ. ರಾ. ಬೇಂದ್ರೆ (4) ಜಿ. ಎಸ್. ಶಿವರುದ್ರಪ್ಪ

**ಉತ್ತರ : (2) ಎಂ. ಗೋವಿಂದ ಪೈ**

**22.** **ತದ್ಧಿತಾಂತ ನಾಮಕ್ಕೆ ಉದಾಹರಣೆಯಾಗಿದೆ;**

(1) ಜಾಣತನ (2) ಚಂದ್ರನಂತೆ
(3) ಹಿರಿಮೆ (4) ಬಳೆಗಾರ

**ಉತ್ತರ : (4) ಬಳೆಗಾರ**

**23.** **ತೃತೀಯ ವಿಭಕ್ತಿ ಕಾರಕಾರ್ಥ;**

(1) ಕರ್ತ್ರಾರ್ಥ (2) ಸಂಬಂಧ
(3) ಅಧಿಕರಣ (4) ಕರಣಾರ್ಥ

**ಉತ್ತರ : (4) ಕರಣಾರ್ಥ**

**24.** **"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ ಸತ್ಯವ ನುಡಿವುದೇ ದೇವಲೋಕ" – ಈ ವಚನದ ರಚನಾಕಾರರು;**

(1) ಬಸವಣ್ಣ (2) ಅಲ್ಲಮಪ್ರಭು
(3) ಚೆನ್ನಬಸವಣ್ಣ (4) ಅಕ್ಕಮಹಾದೇವಿ

**ಉತ್ತರ : (1) ಬಸವಣ್ಣ**

**25.** **'ಕರ್ನಾಟಕ ಸಂಗೀತ ಪಿತಾಮಹ' ಎನಿಸಿದ ಪುರಂದರದಾಸರ ಕೀರ್ತನೆಗಳ ಅಂಕಿತ ಇದು;**

(1) ವಿಜಯ ವಿಠಲ (2) ಪುರಂದರ ವಿಠಲ
(3) ಗೋಪಾಲ ವಿಠಲ (4) ರಂಗ ವಿಠಲ

**ಉತ್ತರ : (2) ಪುರಂದರ ವಿಠಲ**

**ಪತ್ರಿಕೆ – 3 ಕನ್ನಡ**

**ವಿಷಯ ಭಾಷಾ ಸಾಮರ್ಥ್ಯ (ವಿವರಣಾತ್ಮಕ ಪರೀಕ್ಷೆ)**

**(ಹುದ್ದೆ : 6ರಿಂದ 8 ನೆಯ ತರಗತಿಗಳ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು)**

**ಗರಿಷ್ಠ ಅಂಕಗಳು : 100** **ಗರಿಷ್ಠ ಅವಧಿಗಳು 2–00 ಗಂಟೆಗಳು**

---

**I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.** 5*1=5

1. ಶುಶ್ರೂಷೆ = **ಸೇವೆ / ಉಪಚಾರ**
2. ಕದ = **ಬಾಗಿಲು**
3. ಪಾಶ = **ಹಗ್ಗ / ಬಂಧನ / ನೇಣು**
4. ಅಂಧಕಾರ = **ದಟ್ಟವಾದ ಕತ್ತಲೆ**
5. ಹಸುಳೆ = **ಹಸುಗೂಸು / ಶಿಶು**

**ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ** 5*1=5

6. ಆಯಾಸ X **ಅನಾಯಾಸ**
7. ಪುಣ್ಯ X **ಪಾಪ**
8. ಕಹಿ X **ಸಿಹಿ**
9. ಉತ್ಸಾಹ X **ನಿರುತ್ಸಾಹ**
10. ಶಾಂತಿ X **ಅಶಾಂತಿ**

**ಕೊಟ್ಟಿರುವ ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ.** 5*1=5

11. ಕಿಡಿಕಾರು = **ಸಿಟ್ಟಿಗೇಳು / ಉರಿದುಬೀಳು**
12. ಬೇರೂರು = **ಸ್ಥಾಪನೆಗೊಳ್ಳು / ಬಲವಾಗಿ ನೆಲೆಯಾಗು**
13. ನೀರಿಗೆ ಹಾಕು = **ವ್ಯರ್ಥಮಾಡು**
14. ಮುಖ ಅರಳು = **ಸಂತೋಷದಿಂದ ಹಿಗ್ಗು**
15. ಎತ್ತಿದ ಕೈ = **ಪ್ರವೀಣ**

**ಕೊಟ್ಟಿರುವ ಗಾದೆಗಳನ್ನು ಪೂರ್ಣಗೊಳಿಸಿ.** 5*1=5

16. ತುಂಬಿದ ಕೊಡ **ತುಳುಕುವುದಿಲ್ಲ.**
17. ಮಾತು ಬಲ್ಲವನಿಗೆ ಜಗಳವಿಲ್ಲ; **ಊಟಬಲ್ಲವನಿಗೆ ರೋಗವಿಲ್ಲ.**
18. ತಾಳಿದವನು **ಬಾಳಿಯಾನು.**
19. ಕೂತು ತಿಂದರೆ **ಕುಡಿಕೆ ಹೊನ್ನು ಸಾಲದು.**
20. ಗಿಡವಾಗಿ ಬಗ್ಗದ್ದು **ಮರವಾಗಿ ಬಗ್ಗೀತೇ**

**II. ಕೊಟ್ಟಿರುವ ಪದಗಳಿಗೆ ನೀಡಿರುವ ಸೂಚನೆಯಂತೆ ಉತ್ತರ ಬರೆಯಿರಿ.**

**21.** . ಕೊಟ್ಟಿರುವ ಪದಗಳು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿವೆ ತಿಳಿಸಿ. 2*1=2

(ಅ) ಕಾರ್ಖಾನೆ > **ಹಿಂದೂಸ್ಥಾನಿ**

(ಆ) ಸಾಬೂನು > **ಪೋರ್ಚುಗೀಸ್**

**22.** ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ. 2*1=2

(ಅ) ಇವನೊಬ್ಬ = **ಇವನು + ಒಬ್ಬ – ಲೋಪ ಸಂಧಿ**

(ಆ) ಹಳ್ಳಿಯಲ್ಲಿ = **ಹಳ್ಳಿ + ಅಲ್ಲಿ – ಆಗಮ ಸಂಧಿ**

**23. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸವನ್ನು ಹೆಸರಿಸಿ.** **2*1=2**

(ಅ) ನಾಲ್ದೆಸೆ = **ನಾಲ್ಕು + ದೆಸೆ – ದ್ವಿಗು ಸಮಾಸ**

(ಆ) ಹೆಮ್ಮರ = **ಹಿರಿದಾದ + ಮರ – ಕರ್ಮಧಾರಯ ಸಮಾಸ**

**24. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯವನ್ನು ಮಾಡಿ ಬರೆಯಿರಿ.** **2*1=2**

(ಅ) ಕಕ್ಕಾಬಿಕ್ಕಿ : **ಪೊಲೀಸರನ್ನು ಕಂಡು ಕಳ್ಳರು ಕಕ್ಕಾಬಿಕ್ಕಿಯಾದರು.**

(ಆ) ಪ್ರಯತ್ನ : **ಪ್ರಯತ್ನ ಮಾಡಿರೆ ಫಲ ಖಂಡಿತ ದೊರೆಯುತ್ತದೆ.**

**25. ಕೊಟ್ಟಿರುವ ಹೇಳಿಕೆಗಳಿಗೆ ಸೂಕ್ತವಾದ ಪದವನ್ನು ಬರೆಯಿರಿ.** **2*1=2**

(ಅ) ಹಾವನ್ನು ಆಡಿಸುವವನು = **ಹಾವಾಡಿಗ**

(ಆ) ನೇತ್ರಗಳನ್ನು ದಾನ ಮಾಡಿದವನು = **ನೇತ್ರದಾನಿ**

**26. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ವಿಭಕ್ತಿ ಹೆಸರಿಸಿ.** **2*1=2**

(ಅ) ತಾಯಿಯನ್ನು = **ತಾಯಿ + ಅನ್ನು – ದ್ವಿತೀಯ ವಿಭಕ್ತಿ**

(ಆ) ಮರದಲ್ಲಿ = **ಮರ + ಅಲ್ಲಿ – ಸಪ್ತಮಿ ವಿಭಕ್ತಿ**

**27. ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಸರ್ವನಾಮ ಪದವನ್ನು ಆರಿಸಿ ಬರೆಯಿರಿ.** **2*1=2**

(ಅ) ಗೌರಿ ನನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು. = **ನನ್ನ**

(ಆ) ನೀವು ಆದಷ್ಟು ಬೇಗ ಬನ್ನಿ. = **ನೀವು**

**28. ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಅವ್ಯಯ ಪದವನ್ನು ಆರಿಸಿ ಬರೆಯಿರಿ.** **2*1=2**

(ಅ) ರಾಧೆಯು ಸೊಗಸಾಗಿ ಹಾಡಿದಳು. = **ಸೊಗಸಾಗಿ**

(ಆ) ಕಾಡಿನಲ್ಲಿ ಬೆಂಕಿಯು ಧಗಧಗನೆ ಉರಿಯುತ್ತಿತ್ತು. = **ಧಗಧಗನೆ**

**29. ಕೊಟ್ಟಿರುವ ವಾಕ್ಯಗಳ ವಚನವನ್ನು ಬದಲಿಸಿ ಬರೆಯಿರಿ.** **2*1=2**

(ಅ) ಹುಡುಗರು ಆಟವನ್ನು ಆಡಿದರು.

**ಹುಡುಗನು ಆಟವನ್ನು ಆಡಿದನು.**

(ಆ) ನದಿಯು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ.

**ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ.**

**30. ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು ಗುರುತಿಸಿ, ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ.** **2*1=2**

(ಅ) ನಾಲ್ಕನೆಯ : ಸಂಖ್ಯೇಯ ವಾಚಕ : : ಮೂಡಣ : **ದಿಗ್ವಾಚಕ**

(ಆ) ನೆನಪಿಲ್ಲ : ಲೋಪಸಂಧಿ : : ದೇವಾಲಯ : **ಸವರ್ಣದೀರ್ಘ ಸಂಧಿ**

**31. ಕೊಟ್ಟಿರುವ ವಾಕ್ಯಗಳನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ ಬರೆಯಿರಿ.** **2*1=2**

(ಅ) ಸುರೇಶನು ಕತೆಯನ್ನು ಹೇಳಿದನು.

**ಸುರೇಶನು ಕತೆಯನ್ನು ಹೇಳುತ್ತಾನೆ.**

(ಆ) ವಿದ್ಯಾರ್ಥಿಗಳು ವ್ಯಾಯಾಮವನ್ನು ಮಾಡಿದರು.

**ವಿದ್ಯಾರ್ಥಿಗಳು ವ್ಯಾಯಾಮವನ್ನು ಮಾಡುತ್ತಾರೆ.**

**32. ಕೊಟ್ಟಿರುವ ಪದಗಳಿಗೆ ತತ್ಸಮ – ತದ್ಭವಗಳನ್ನು ಬರೆಯಿರಿ.** **2*1=2**

(ಅ) ಪ್ರಾಣ > **ಹರಣ**

(ಆ) ಸಿರಿ > **ಶ್ರೀ**

**33. ಕೊಟ್ಟಿರುವ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಹಾಕಿ ಬರೆಯಿರಿ.** **2*1=2**

(ಅ) ವಿಶ್ವೇಶ್ವರಯ್ಯನವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ಅವರಿಗೆ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು

**ವಿಶ್ವೇಶ್ವರಯ್ಯನವರ ಸಾಧನೆಯನ್ನು ಗುರುತಿಸಿ, ಭಾರತ ಸರ್ಕಾರ ಅವರಿಗೆ 'ಭಾರತರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿತು.**

(ಆ) ಆಹಾ ಗುಲಾಬಿ ಹೂವು ಬಹಳ ಸುಂದರವಾಗಿದೆ

**ಆಹಾ! ಗುಲಾಬಿ ಹೂವು ಬಹಳ ಸುಂದರವಾಗಿದೆ.**

**34. ಕೊಟ್ಟಿರುವ ಪದಗಳಿಗೆ ಗ್ರಾಂಥಿಕ ರೂಪವನ್ನು ಬರೆಯಿರಿ.** **2*1=2**

(ಅ) ಮ್ಯಾಗ = **ಮೇಲೆ**

(ಆ) ಇಲ್ಲದ್ದಂಗ = **ಇಲ್ಲದಹಾಗೆ**

**35. ಕೊಟ್ಟಿರುವ ವಾಕ್ಯಗಳಲ್ಲಿರುವ ಜೋಡುನುಡಿ / ದ್ವಿರುಕ್ತಿಗಳನ್ನು ಗುರುತಿಸಿ ಬರೆಯಿರಿ.** **2*1=2**

(ಅ) ಮಳೆ ಬರುವ ಸೂಚನೆ ಕಂಡು ಜನರು ಬೇಗಬೇಗ ಮನೆಗಳಿಗೆ ಹೊರಟರು. = **ಬೇಗಬೇಗ**

(ಆ) ಮನೆಯ ಮಕ್ಕಳುಮರಿಗಳಿಂದ ತುಂಬಿತ್ತು. = **ಮಕ್ಕಳುಮರಿ**

## III. ಕೊಟ್ಟಿರುವ ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅವುಗಳ ಮುಂದೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**36. ಗದ್ಯ ಭಾಗ – 1.** **5*1=5**

**ಸಾಮಾನ್ಯವಾಗಿ ಆಹಾರ, ಅರಿವೆ, ಆಸರೆ ಈ ಮೂರನ್ನು ಮಾತ್ರ ಮಾನವನ ಮೂಲಭೂತ ಆವಶ್ಯಕತೆಗಳೆಂದು ಗುರುತಿಸಲಾಗುತ್ತದೆಯಾದರೂ ಅರಿವು ಕೂಡ ಮಾನವನ ಜೀವನಕ್ಕೆ ಅಷ್ಟೇ ಅವಶ್ಯವಾದಂತಹ ಒಂದು ಸಾಧನ. ಮಾನವನನ್ನು ಪ್ರಾಣಿ ಸ್ಥಿತಿಯಿಂದ ಮೇಲೆತ್ತುವುದೇ ಜ್ಞಾನಾರ್ಜನೆ. ತನ್ನ ಸುತ್ತಮುತ್ತಣ ಪ್ರಪಂಚದ ಬಗ್ಗೆ ಮಾನವ ಶಿಶು ಅರಿವನ್ನು ಪಡೆಯುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಕರೆಯುತ್ತಾರೆ. ಶಿಕ್ಷಣ ಈ ಸಾಮಾಜೀಕರಣದ ಪ್ರಮುಖ ಸಾಧನಗಳಲ್ಲಿ ಒಂದು. ಶಿಕ್ಷಣದ ಪ್ರಕ್ರಿಯೆಯ ಮೂಲಕ ವ್ಯಕ್ತಿಗಳೆಲ್ಲ ಆಯಾ ಸಮಾಜದಲ್ಲಿ ಜಾರಿಯಲ್ಲಿರುವಂತಹ ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ತಿಳಿವಳಿಕೆಯನ್ನು ಪಡೆಯುತ್ತಾರೆ. ಕಲಿಕೆಯ ಪ್ರಕ್ರಿಯೆಯಲ್ಲಿಯೇ ಜೀವನವನ್ನು ಕುರಿತು ದೃಷ್ಟಿಕೋನಗಳನ್ನು ವ್ಯಕ್ತಿಗಳು ಬೆಳೆಸಿಕೊಳ್ಳುತ್ತಾರೆ. ಸಮಾಜದ ಇತಿಹಾಸ, ಸಾಧನೆಗಳು, ಧರ್ಮ, ಭಾಷೆ, ಮೌಲ್ಯಗಳು, ಸಾಹಿತ್ಯ, ಕಲೆ, ತಾಂತ್ರಿಕ ಜ್ಞಾನ, ಇವೇ ಮುಂತಾದ ಸಂಸ್ಕೃತಿಯ ಎಲ್ಲಾ ಅಂಶಗಳನ್ನು ಶಿಕ್ಷಣ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸುತ್ತದೆ.**

**ಪ್ರಶ್ನೆಗಳು :**

(ಅ) ಸಾಮಾನ್ಯವಾಗಿ ಗುರುತಿಸಲಾಗುವ ಮಾನವನ ಮೂಲಭೂತ ಆವಶ್ಯಕತೆಗಳು ಯಾವುವು?

**ಸಾಮಾನ್ಯವಾಗಿ ಗುರುತಿಸಲಾಗುವ ಮಾನವನ ಮೂಲಭೂತ ಆವಶ್ಯಕತೆಗಳು ಆಹಾರ, ಅರಿವೆ ಮತ್ತು ಆಸರೆ.**

(ಆ) ಮಾನವನನ್ನು ಪ್ರಾಣಿ ಸ್ಥಿತಿಯಿಂದ ಮೇಲೆತ್ತುವುದು ಯಾವುದು?

**ಮಾನವನನ್ನು ಪ್ರಾಣಿ ಸ್ಥಿತಿಯಿಂದ ಮೇಲೆತ್ತುವುದು ಜ್ಞಾನಾರ್ಜನೆ.**

(ಇ) ಸಾಮಾಜೀಕರಣ ಎಂದರೇನು?

**ತನ್ನ ಸುತ್ತಮುತ್ತಣ ಪ್ರಪಂಚದ ಬಗ್ಗೆ ಮಾನವ ಶಿಶು ಅರಿವನ್ನು ಪಡೆಯುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಕರೆಯುತ್ತಾರೆ.**

(ಈ) ವ್ಯಕ್ತಿಗಳು ಯಾವುದರ ಮೂಲಕ ಸಾಂಸ್ಕೃತಿಕ ಮೌಲ್ಯಗಳ ತಿಳಿವಳಿಕೆ ಪಡೆಯುತ್ತಾರೆ?

**ವ್ಯಕ್ತಿಗಳು ಶಿಕ್ಷಣದ ಮೂಲಕ ಸಾಂಸ್ಕೃತಿಕ ಮೌಲ್ಯಗಳ ತಿಳಿವಳಿಕೆ ಪಡೆಯುತ್ತಾರೆ.**

(ಉ) ಸಂಸ್ಕೃತಿಯ ಅಂಶಗಳನ್ನು ಶಿಕ್ಷಣವು ಹೇಗೆ ವರ್ಗಾಯಿಸುತ್ತದೆ?

**ಸಮಾಜದ ಇತಿಹಾಸ, ಸಾಧನೆಗಳು, ಧರ್ಮ, ಭಾಷೆ, ಮೌಲ್ಯಗಳು, ಸಾಹಿತ್ಯ, ಕಲೆ, ತಾಂತ್ರಿಕ ಜ್ಞಾನ ಮೊದಲಾದ ಸಂಸ್ಕೃತಿಯ ಅಂಶಗಳನ್ನು ಶಿಕ್ಷಣವು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸುತ್ತದೆ.**

**37. ಗದ್ಯ ಭಾಗ – 2** **5*1=5**

ಹಳೇಬೀಡಿನಲ್ಲಿ ಹೊಯ್ಸಳೇಶ್ವರ ದೇವಾಲಯ ಹಾಗೂ ಬೇಲೂರಿನಲ್ಲಿ ಚೆನ್ನಕೇಶವ ದೇವಾಲಯಗಳೆಂಬ ಪ್ರಸಿದ್ಧ ದೇವಸ್ಥಾನಗಳಿವೆ. ಬೇಲೂರು ದೇವಸ್ಥಾನವನ್ನು ಕಟ್ಟಿಸಿದ ರಾಜನ ಹೆಸರು ವಿಷ್ಣುವರ್ಧನ. ಇವನು ರಾಜ್ಯಭಾರ ಮಾಡುತ್ತಾ ಇದ್ದ ಕಾಲದಲ್ಲಿ ಕರ್ನಾಟಕ ಶಿಲ್ಪಕಲೆಯಲ್ಲಿ ಸುವರ್ಣಯುಗವನ್ನು ಕಂಡಿತ್ತು. ವಿಷ್ಣುವರ್ಧನನ ಹೆಂಡತಿ ಶಾಂತಲಾದೇವಿ 'ನಾಟ್ಯರಾಣಿ' ಎಂಬ ಬಿರುದು ಪಡೆದವಳು. ಇವಳು ನಾಟ್ಯ ಕಲೆಗೆ ಸಲ್ಲಿಸಿದ ಕಾಣಿಕೆ ಅಪಾರ. ಹಳೇಬೀಡು ದೇವಸ್ಥಾನ ಕಟ್ಟಿಸಿದವನು ಕೇತುಮಲ್ಲ. ಅವನು ವಿಷ್ಣುವರ್ಧನನ ದಂಡನಾಯಕನಾಗಿದ್ದ. ಹಿಂದೆ ಹಳೇಬೀಡಿಗೆ ಇದ್ದ ಹೆಸರು ದ್ವಾರಸಮುದ್ರ ಎಂದು. ಹೊಯ್ಸಳರ ರಾಜಧಾನಿಯಾಗಿದ್ದ ದ್ವಾರಸಮುದ್ರ ಮೊಘಲರ ಆಕ್ರಮಣದಿಂದ ಹಾಳಾಯಿತು. ಹಾಳಾದ ಊರಿಗೆ ಹಳೇಬೀಡು ಎಂದು ಹೆಸರು ಬಂತು. 'ವೇಲಾಪುರ' ಎಂದು ಪುರಾಣಗಳಲ್ಲಿ ಪ್ರಸಿದ್ಧವಾದ ಪ್ರದೇಶ ಈಗ ಬೇಲೂರು ಎಂದಾಗಿದೆ.

**ಪ್ರಶ್ನೆಗಳು :**

(ಅ) ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದವರು ಯಾರು?

**ರಾಜ ವಿಷ್ಣುವರ್ಧನನು ಬೇಲೂರು ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದನು.**

(ಆ) ನಾಟ್ಯರಾಣಿ ಎಂಬ ಬಿರುದು ಯಾರಿಗಿತ್ತು?

**ವಿಷ್ಣುವರ್ಧನನ ಹೆಂಡತಿ ಶಾಂತಲಾದೇವಿಗೆ 'ನಾಟ್ಯರಾಣಿ' ಎಂಬ ಬಿರುದು ಇತ್ತು.**

(ಇ) ರಾಜ ವಿಷ್ಣುವರ್ಧನನ ದಂಡನಾಯಕ ಯಾರು?

**ರಾಜ ವಿಷ್ಣುವರ್ಧನನ ದಂಡನಾಯಕ ಕೇತುಮಲ್ಲ.**

(ಈ) ಹೊಯ್ಸಳರ ರಾಜಧಾನಿ ಯಾವುದು?

**ಹೊಯ್ಸಳರ ರಾಜಧಾನಿ ದ್ವಾರಸಮುದ್ರ.**

(ಉ) ಪುರಾಣಗಳಲ್ಲಿ ಬೇಲೂರಿಗೆ ಯಾವ ಹೆಸರು ಇದೆ?

**ಪುರಾಣಗಳಲ್ಲಿ ಬೇಲೂರಿಗೆ 'ವೇಲಾಪುರಿ' ಎಂಬ ಹೆಸರು ಇದೆ.**

**38. ಗದ್ಯ ಭಾಗ – 3** **5*1=5**

ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಕೇಂದ್ರ. ಬಿಳಿಯರು ಆಡಳಿತ ನಡೆಸುತ್ತಿದ್ದ ತಮ್ಮ ತಾಯ್ನಾಡಿನಲ್ಲಿ ಅವರ ವರ್ಣದ್ವೇಷ, ದಬ್ಬಾಳಿಕೆ, ಶೋಷಣೆಗಳಿಗೆ ಒಳಗಾದ ತಮ್ಮ ಜನರ ಉದ್ಧಾರಕ್ಕಾಗಿ ಕಂಕಣತೊಟ್ಟರು. ಆ ಬಳಿಕ ಬಿಳಿಯರ ವರ್ಣಬೇಧದ ವಿರುದ್ಧ ಅವರ ಹೋರಾಟ ನಿರಂತರವಾಗಿ ನಡೆಯಿತು. ಬಿಳಿಯರ ಸರ್ಕಾರ ಅವರನ್ನು ಬಂಧಿಸಿ ಜೀವಾವಧಿ ಶಿಕ್ಷೆ ನೀಡಿತ್ತು. ಇಪ್ಪತ್ತೇಳು ವರ್ಷಗಳ ಸೆರೆಮನೆವಾಸ ಅನುಭವಿಸಿ ಬಿಡುಗಡೆಯಾದ ಮೇಲೆ ಹೋರಾಟ ಮುಂದುವರೆಸಿದರು. ರಾಷ್ಟ್ರ ಸ್ವತಂತ್ರಗೊಂಡಾಗ ಅದರ ಪ್ರಥಮ ಅಧ್ಯಕ್ಷರಾದರು. ಮಹಾತ್ಮಗಾಂಧೀಜಿಯವರಿಂದ ಪ್ರೇರಣೆ ಪಡೆದಿದ್ದ ನೆಲ್ಸನ್ ಮಂಡೇಲಾ ಮಹಾತ್ಮರು ಬೋಧಿಸಿದ ಸತ್ಯ, ಅಹಿಂಸೆ, ಪ್ರೀತಿ ಇವುಗಳನ್ನೇ ತಮ್ಮ ಹೋರಾಟದ ಮಾರ್ಗವನ್ನಾಗಿಸಿಕೊಂಡಿದ್ದರು. ಭಾರತ ದೇಶವು ಅವರಿಗೆ ದೇಶದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದೆ.

**ಪ್ರಶ್ನೆಗಳು :**

(ಅ) ನೆಲ್ಸನ್ ಮಂಡೇಲಾ ಯಾವ ದೇಶದವರು?

**ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾ ದೇಶದವರು.**

(ಆ) ನೆಲ್ಸನ್ ಮಂಡೇಲಾರವರ ಹೋರಾಟ ಯಾವುದರ ವಿರುದ್ಧ ನಡೆಯಿತು?

**ನೆಲ್ಸನ್ ಮಂಡೇಲಾರವರ ಹೋರಾಟ ಬಿಳಿಯರ ವರ್ಣಬೇದದ ವಿರುದ್ಧ ನಡೆಯಿತು.**

(ಇ) ನೆಲ್ಸನ್ ಮಂಡೇಲಾ ಎಷ್ಟು ವರ್ಷಗಳ ಕಾಲ ಸೆರೆಮನೆಯಲ್ಲಿದ್ದರು?

**ನೆಲ್ಸನ್ ಮಂಡೇಲಾ ಇಪ್ಪತ್ತೇಳು ವರ್ಷಗಳ ಕಾಲ ಸೆರೆಮನೆಯಲ್ಲಿದ್ದರು.**

(ಈ) ನೆಲ್ಸನ್ ಮಂಡೇಲಾ ತಮ್ಮ ಹೋರಾಟಕ್ಕೆ ಯಾರಿಂದ ಪ್ರೇರಣೆ ಪಡೆದಿದ್ದರು?
**ನೆಲ್ಸನ್ ಮಂಡೇಲಾ ತಮ್ಮ ಹೋರಾಟಕ್ಕೆ ಮಹಾತ್ಮ ಗಾಂಧೀಜಿಯವರಿಂದ ಪ್ರೇರಣೆ ಪಡೆದಿದ್ದರು.**

(ಉ) ನೆಲ್ಸನ್ ಮಂಡೇಲಾರಿಗೆ ಭಾರತ ಸರ್ಕಾರ ನೀಡಿದ ಪ್ರಶಸ್ತಿ ಯಾವುದು?
**ನೆಲ್ಸನ್ ಮಂಡೇಲಾರಿಗೆ ಭಾರತ ಸರ್ಕಾರ ನೀಡಿದ ಪ್ರಶಸ್ತಿ 'ಭಾರತರತ್ನ'.**

**39. ಗದ್ಯ ಭಾಗ – 4** **5*1=5**

**ಕಾಯಕವನ್ನು ಪ್ರಪ್ರಥಮ ಬಾರಿಗೆ ಸೈದ್ಧಾಂತಿಕ ತಳಹದಿಯ ಮೇಲೆ ರೂಪಿಸಿದವರು ಶಿವಶರಣರು. ಅವರು ಕೈಗೊಂಡ ಧಾರ್ಮಿಕ ಚಳವಳಿಯ ಸಾಮಾಜಿಕ ಏಕತೆಗೆ ಈ ಕಾಯಕದ ಪರಿಕಲ್ಪನೆ ಕಾಯಕಲ್ಪವೆನಿಸಿತು. ಧರ್ಮಪರ ಸಂಸ್ಕೃತಿಯಲ್ಲಿ ಆರ್ಥಿಕ ಸಮಾನತೆಯ ದೃಢತೆಗೆ ಇದು ಪ್ರಥಮ ಹೆಜ್ಜೆ. ನಿಜವಾದ ಆರ್ಥಿಕ ಸಮಾನತೆ ಎಂದರೆ ದುಡಿಯುವ ಹಕ್ಕಿಗೆ ಪಡೆಯುವ ಸಮಾನ ಪ್ರತಿಫಲ. ಕಾರ್ಲ್ ಮಾರ್ಕ್ಸನ ಆರ್ಥಿಕ ಸಿದ್ಧಾಂತಕ್ಕೂ ಶರಣರ ಕಾಯಕದ ಪರಿಕಲ್ಪನೆಗೂ ಕೆಲವು ವಿಷಯಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಅದರಂತೆ ಮೂಲಭೂತ ಉದ್ದೇಶದಲ್ಲಿಯೂ ಕೆಲವು ವ್ಯತ್ಯಾಸಗಳು ಗೋಚರಿಸುತ್ತವೆ. ಕಾಯಕವನ್ನು ಜನಪರ ಮೌಲ್ಯವನ್ನಾಗಿಸಿದ ಶರಣರ ಹೋರಾಟ ನಿಜಕ್ಕೂ ಗೌರವಾರ್ಹ. ರಸ್ಕಿನ್‌ನ ಕೃತಿಯನ್ನೋದಿ ದೈಹಿಕ ಶ್ರಮದ ಮಹತ್ತ್ವವನ್ನು ಅರಿತ ಗಾಂಧೀಜಿಯವರು ಅದನ್ನು ದೇಶಕ್ಕೆ ಹೇಗೆ ಪ್ರತಿಪಾದಿಸಿದರೋ ಅದನ್ನು ಶರಣರ ವಚನಗಳೇ ಪ್ರತಿಪಾದಿಸಿದ್ದವು.**

**ಪ್ರಶ್ನೆಗಳು :**

(ಅ) ಶಿವಶರಣರು ಕಾಯಕವನ್ನು ಯಾವ ತಳಹದಿಯ ಮೇಲೆ ರೂಪಿಸಿದರು?
**ಶಿವಶರಣರು ಕಾಯಕವನ್ನು ಸೈದ್ಧಾಂತಿಕ ತಳಹದಿಯ ಮೇಲೆ ರೂಪಿಸಿದರು.**

(ಆ) ಶಿವಶರಣರ ಕಾಯಕದ ಪರಿಕಲ್ಪನೆ ಯಾವುದಕ್ಕೆ ಕಾಯಕಲ್ಪವೆನಿಸಿತು?
**ಶಿವಶರಣರ ಕಾಯಕದ ಪರಿಕಲ್ಪನೆ ಧಾರ್ಮಿಕ ಚಳವಳಿಯ ಸಾಮಾಜಿಕ ಏಕತೆಗೆ ಕಾಯಕಲ್ಪವೆನಿಸಿತು.**

(ಇ) ನಿಜವಾದ ಆರ್ಥಿಕ ಸಮಾನತೆ ಎಂದರೇನು?
**ನಿಜವಾದ ಆರ್ಥಿಕ ಸಮಾನತೆ ಎಂದರೆ ದುಡಿಯುವ ಹಕ್ಕಿಗೆ ಪಡೆಯುವ ಸಮಾನ ಪ್ರತಿಫಲ.**

(ಈ) ಕಾಯಕ ಪರಿಕಲ್ಪನೆಯು ಯಾರ ಆರ್ಥಿಕ ಸಿದ್ಧಾಂತಕ್ಕೆ ಸಾಮ್ಯತೆ ತೋರುತ್ತದೆ?
**ಕಾಯಕ ಪರಿಕಲ್ಪನೆಯು ಕಾರ್ಲ್ ಮಾರ್ಕ್ಸನ ಆರ್ಥಿಕ ಸಿದ್ಧಾಂತಕ್ಕೆ ಸಾಮ್ಯತೆ ತೋರುತ್ತದೆ.**

(ಉ) ರಸ್ಕಿನ್‌ನ ಕೃತಿಯಿಂದ ಗಾಂಧೀಜಿಯವರಿಗೆ ಯಾವ ಮಹತ್ತ್ವ ತಿಳಿಯಿತು?
**ರಸ್ಕಿನ್‌ನ ಕೃತಿಯಿಂದ ಗಾಂಧೀಜಿಯವರಿಗೆ ದೈಹಿಕ ಶ್ರಮದ ಮಹತ್ತ್ವ ತಿಳಿಯಿತು.**

## IV. ಕೊಟ್ಟಿರುವ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರ ಬರೆಯಿರಿ.

**40. 'ಜಾಗತಿಕ ತಾಪಮಾನದ ಪರಿಣಾಮ' ಈ ವಿಷಯವನ್ನು ಕುರಿತು ಎಂಟು/ಹತ್ತು ವಾಕ್ಯಗಳಲ್ಲಿ ಟಿಪ್ಪಣಿಯನ್ನು ಬರೆಯಿರಿ.** **5*1=5**

ಇಂದು ವಿಶ್ವವು ಎದುರಿಸುತ್ತಿರುವ ದೊಡ್ಡ ಸಮಸ್ಯೆ ಎಂದರೆ 'ಜಾಗತಿಕ ತಾಪಮಾನ' ಅನೇಕ ವಿಜ್ಞಾನಿಗಳು ಇಂಗಾಲದ ಡೈಆಕ್ಸೈಡ್ ಮತ್ತು ಇತರ ಹಸಿರುಮನೆ ಅನಿಲಗಳ ಉತ್ಪಾದನೆ ವಾತಾವರಣದ ಮೇಲೆ ಬಿಸಿ ಪರಿಣಾಮವನ್ನು ಉಂಟುಮಾಡುತ್ತಿದೆ. ಇದು ಮಾನವ ಜೀವನಕ್ಕೆ ತುಂಬಾ ಅಪಾಯಕಾರಿಯಾಗಿದೆ. ಅನೇಕ ಸಮಸ್ಯೆಗಳು ಜಾಗತಿಕ ತಾಪಮಾನಕ್ಕೆ ಕಾರಣ. ದೊಡ್ಡ ಸಮಸ್ಯೆ ಎಂದರೆ ಸಮುದ್ರ ನೀರಿನ ಮಟ್ಟ ಏರಿಕೆಯಾಗುತ್ತಿರುವುದು. ಈಜಿಪ್ಟ್, ನೆದರ್ಲ್ಯಾಂಡ್ಸ್, ಮತ್ತು ಬಾಂಗ್ಲಾದೇಶ ಮೊದಲಾದ ಕರಾವಳಿ ಪ್ರದೇಶಗಳಲ್ಲಿ ಹಾಗೂ ನಗರಗಳಲ್ಲಿ ನೀರಿನ ಪ್ರವಾಹ ಹೆಚ್ಚಾಗಿ ಕೆಲವು ದೇಶಗಳು ಸಂಪೂರ್ಣವಾಗಿ ಕಣ್ಮರೆಯಾಗಬಹುದು. ಜಾಗತಿಕ ತಾಪಮಾನ ಏರಿಕೆಯ ಕಾರಣದಿಂದ ಹವಾಗುಣದ ಬದಲಾವಣೆಗಳಾಗುತ್ತದೆ. ಪ್ರಪಂಚದ ಹೆಚ್ಚಿನ ಪ್ರದೇಶಗಳಲ್ಲಿ ಚಂಡಮಾರುತಗಳು, ಪ್ರವಾಹಗಳು ಉಂಟಾಗುತ್ತಿವೆ. ಇದರಿಂದ ಅಸಾಮಾನ್ಯ ಹವಾಮಾನ ವೈಪರೀತ್ಯವನ್ನು ಅನುಭವಿಸಬೇಕಾಗಿದೆ. ಜಾಗತಿಕ ತಾಪಮಾನದ ಏರಿಕೆಯಿಂದ

ಪ್ರಾಣಿಗಳ ಜೀವನಕ್ರಮದ ಮೇಲೆ ಪರಿಣಾಮ ಬೀರುತ್ತದೆ. ರೋಗ ಹರಡುವ ಕೆಲವು ಕೀಟಗಳು ಹೆಚ್ಚುತ್ತವೆ. ಇದರಿಂದ ಜನಸಂಖ್ಯೆಯ ಮೇಲೆ ಪರಿಣಾಮ ಬೀರುತ್ತದೆ. ನಾವು ಪ್ರಯತ್ನಿಸಿದರೆ ಜಾಗತಿಕ ತಾಪಮಾನ ಏರಿಕೆಯ ಸಮಸ್ಯೆಯನ್ನು ಪರಿಹರಿಸಬಹುದು.

$CO_2$ ಉತ್ಪಾದಿಸುವ ಕೈಗಾರಿಕೆಗಳನ್ನು ನಿಯಂತ್ರಣ ಮಾಡುವುದು. ನವೀಕರಿಸಬಹುದಾದ ಶಕ್ತಿ ತೈಲ, ಕಲ್ಲಿದ್ದಲು ಮತ್ತು ಅನಿಲ ಸ್ವಿಚಿಂಗ್ ಬಳಕೆಯ ಮೇಲೆ ನಿಯಂತ್ರಣ ಮಾಡುವುದು. ಹೆಚ್ಚು ಮರಗಿಡಗಳನ್ನು ಬೆಳೆಸುವುದು. ಮರಗಳು ಕಾರ್ಬನ್ ಡೈಆಕ್ಸೈಡ್ ಹೀರಿಕೊಂಡು ಒಂದು ಹಸಿರುಮನೆ ಅನಿಲ ಇರುವಂತಹ ಆಮ್ಲಜನಕ ಉತ್ಪತ್ತಿ ಮಾಡುವುದರಿಂದ ಜಾಗತಿಕ ತಾಪಮಾನ ಕಡಿಮೆಯಾಗುತ್ತದೆ. ಕಡಿಮೆ ಶಕ್ತಿಯನ್ನು ಬಳಸುವುದು ಮತ್ತು ಹೆಚ್ಚು ಉತ್ಪನ್ನಗಳು ಮರುಬಳಕೆ ಮಾಡುವುದು. ನಾವು ಕಡಿಮೆ ವಿದ್ಯುತ್ ಬಳಸಿದರೆ ವಾತಾವರಣದಲ್ಲಿ $CO_2$ ಅಂಶವು ಕಡಿಮೆಯಾಗುತ್ತದೆ. ನಾವು ಬದುಕುವ ರೀತಿಯಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡರೆ ಭವಿಷ್ಯದಲ್ಲಿ ವಾತಾವರಣದಲ್ಲಾಗುವ ಭಾರಿ ಬದಲಾವಣೆಗಳನ್ನು ತಪ್ಪಿಸಬಹದು. ವಿಜ್ಞಾನಿಗಳು, ಸರ್ಕಾರಗಳು ಮತ್ತು ವ್ಯಕ್ತಿಗಳು ಜಾಗತಿಕ ತಾಪಮಾನದ ಬೆದರಿಕೆಯನ್ನು ಜಯಿಸಲು ಒಟ್ಟಾಗಿ ಕೆಲಸ ಮಾಡಬೇಕು.

**41. 'ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ' ಈ ಗಾದೆಯ ಮಹತ್ತ್ವವನ್ನು ವಿಸ್ತರಿಸಿ ಬರೆಯಿರಿ. 5*1=5**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **ಸತ್ಯಕ್ಕೆ 'ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ'** ಎಂಬ ಗಾದೆಯೂ ಸಹ ಒಂದಾಗಿದೆ.

ದೈನಂದಿನ ವ್ಯವಹಾರದಲ್ಲಿ ಮನುಷ್ಯನು ಹಲವಾರು ಸಂಗತಿಗಳನ್ನು ಹೇಳುತ್ತಲೇ ಇರುತ್ತಾನೆ. ಇದ್ದಂತೆ ಹೇಳಿದರೆ ಸತ್ಯ; ಅದನ್ನೇ ತಿರುಚಿ ಹೇಳಿದರೆ ಸುಳ್ಳು ಎನಿಸುತ್ತದೆ. ಸುಳ್ಳು ಕ್ಷಣಿಕ ಸುಖವನ್ನು ನೀಡಿದರೂ ಮುಂದೆ ಅದು ಶಾಶ್ವತವಾದ ಅಪಾಯವನ್ನುಂಟು ಮಾಡುತ್ತದೆ. ಒಂದು ಸುಳ್ಳು ಹೇಳಿದರೆ ಆ ಸುಳ್ಳನ್ನು ಸತ್ಯ ಎಂದು ನಂಬಿಸಲು ಸುಳ್ಳಿನ ಸರಮಾಲೆಯನ್ನೇ ಹೆಣೆಯಬೇಕಾಗುತ್ತದೆ. ಮುಂದೊಂದಿನ ಸತ್ಯವು ತಿಳಿದಾಗ ಸುಳ್ಳು ಹೇಳಿದವನನು ಅಪಖ್ಯಾತಿಗೆ ಒಳಗಾಗಬೇಕಾಗುತ್ತದೆ. ಆದರೆ ಸತ್ಯ ಆ ರೀತಿಯಲ್ಲ; ಒಮ್ಮೆ ಹೇಳಿದ ಸತ್ಯದ ಮಾತು ಎಂದೆಂದಿಗೂ ಸತ್ಯವಾಗಿಯೇ ಇರುತ್ತದೆ. ಇದನ್ನು ನಂಬಿಸಲು ಬೇರೆ ಮಾತುಗಳನ್ನು ಹೇಳುವ ಆವಶ್ಯಕತೆ ಇರುವುದಿಲ್ಲ. ಸತ್ಯವಂತನಿಗೆ ಸಮಾಜದಲ್ಲಿ ಮನ್ನಣೆ ಸಿಗುತ್ತದೆ; ಅಸತ್ಯವಂತನನ್ನು ಸಮಾಜ ತಿರಸ್ಕರಿಸುತ್ತದೆ. ಇದಕ್ಕೆ 'ವೃಕ್ಷಸಾಕ್ಷಿ' ಎಂಬ ಪಂಚತಂತ್ರದ ಕಥೆಯ ಪಾತ್ರಗಳೇ ಉದಾಹರಣೆ.

**42. 'ಆಸೆಯೇ ದುಃಖಕ್ಕೆ ಕಾರಣ' ಈ ಹೇಳಿಕೆಯನ್ನು ಕುರಿತು ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 5*1=5**

ಬುದ್ಧನು ಹೇಳುತ್ತಾನೆ, 'ಆಸೆಯೇ ದುಃಖಕ್ಕೆ ಕಾರಣ' ಎಂದು. ಇನ್ ಜನರಲಿ, ಆಸೆಯಾಗಿರಬಹುದು, ಅಪೇಕ್ಷೆಯಾಗಿರಬಹುದು, ಮಹತ್ವಾಕಾಂಕ್ಷೆಯಾಗಿರಬಹುದು. ಕಾಮ ಆಗಿರಬಹುದು, ಕಾಮನೆಯಾಗಿರಬಹುದು; ಬಯಕೆಯಾಗಿರಬಹುದು, ಏನೋ ಒಂದು . ದುಃಖಕ್ಕೆ ಕಾರಣವಾಗುತ್ತದೆ ಎಂಬ ಬುದ್ಧನ ಮಾತೇನೋ ಸರಿ. ಆದರೆ ಎಲ್ಲಕ್ಕೂ ಮುಖ್ಯವೇನೆಂದರೆ, ನಮ್ಮ ಅಭಿಪ್ರಾಯದಲ್ಲಿ, 'ನಮ್ಮ ದುಃಖಕ್ಕೆ ನಾವೇ ಕಾರಣ'. ಇದರಲ್ಲಿ ಸಂದೇಹವೇ ಇಲ್ಲ. ಇದರಲ್ಲಿ ಒಂದು ಚೂರು ಕೂಡ ಸಂದೇಹವಿಲ್ಲ, ಸಂಶಯವಿಲ್ಲ.

ನಮ್ಮ ತಲೆಯಲ್ಲಿ ಅದು ಆಗಬೇಕು, ಇದು ಆಗಬೇಕು; ಅದು ಹೋಗಬೇಕು, ಇದು ಹೋಗಬೇಕು, ಅದು ಮಾಡಬೇಕು, ಇದು ಮಾಡಬೇಕು ಎಂದು ಏನೇನೋ ನೂರೆಂಟು ಹುಳು ಬಿಟ್ಟುಕೊಂಡಿರುತ್ತೇವೆ ಮತ್ತು ಬೀಜ ಬಿತ್ತಿಕೊಂಡಿರುತ್ತೇವೆ. ನಮ್ಮ ಮನಸ್ಸಿನಲ್ಲಿ, ಕನಸಿನಲ್ಲಿ

ಏನೇನೋ ಬಯಕೆಯ ಬೀಜಗಳನ್ನು ಬಿತ್ತಿಕೊಂಡು ಬಂಪರ್ ಬೆಳೆಯನ್ನು ನಿರೀಕ್ಷಿಸಿಕೊಂಡಿರುತ್ತೇವೆ. ನಿರೀಕ್ಷಿತ ಪ್ರಮಾಣದಲ್ಲಿ ಮತ್ತು ನಾವು ನಿರೀಕ್ಷಿಸಿದ ರೀತಿಯಲ್ಲಿ ಬೆಳೆ ಬಾರದೆ ಹೋದರೆ ದುಃಖಿತರಾಗುತ್ತೇವೆ, ಸಂಕಟಪಡುತ್ತ ವಿಲವಿಲ ಎನ್ನುತ್ತೇವೆ. ಮನಸ್ಸಿನಲ್ಲಿ ಬಯಕೆಯ ಬೀಜವನ್ನು ಬಿತ್ತಿದ್ದು ನಾವೇ! ಬೆಳೆ ಬಾರದೆ ಇದ್ದಾಗ ದುಃಖಿಸುವುದೂ ನಾವೇ! ನಮ್ಮ ದುಃಖಕ್ಕೆ ನಾವೇ ಕಾರಣ. ಬಯಕೆ, ಹಂಬಲ, ಆಸೆ, ಅಪೇಕ್ಷೆಗಳ ಬೀಜವನ್ನು ಬಿತ್ತಿದವರೂ ನಾವೇ! ಬೆಳೆ ಬಾರದೆ ಇದ್ದಾಗ ಅಳುವವರೂ ನಾವೇ! ಅಷ್ಟು ಮಾತ್ರವಲ್ಲ, ಅದೊಂದು ವೇಳೆ, ಬೆಳೆ ಬಂದರೂ ಮಾರುಕಟೆಯಲ್ಲಿ ಬೆಳೆಗೆ ತಕ್ಕನಾದ ಬೆಲೆ ಬಾರದೆ ಹೋದರೂ ಸಹ ಅದಕ್ಕೂ ಅಳುವವರು ನಾವೇ! ನಮ್ಮ ಈ ಸ್ಥಿತಿ, ಪರಿಸ್ಥಿತಿಯನ್ನು ಗಮನಿಸಿಯೇ ಶ್ರೀ ಕೃಷ್ಣಪರಮಾತ್ಮ ಭಗವದ್ಗೀತೆಯಲ್ಲಿ ನಮಗೆಲ್ಲ ಇರೋದರಲ್ಲೇ ಆನಂದಪಡು ಮತ್ತು ಇದ್ದಷ್ಟರಲ್ಲಿಯೇ ತೃಪ್ತಿಪಡು ಎಂದು ಹೇಳಿದನು. ಪರಮಾತ್ಮ ನಮ್ಮಗಳಿಗೆ ಹೇಳಿದ ಮಾತಿಗೆ ಕಿವಿಕೊಟ್ಟರೆ ಒಳ್ಳೆಯದು. ಅದು ಬುದ್ಧಿವಂತರ ಲಕ್ಷಣ. ಹಾಗೆ ಮಾಡದೆ ಹೋದರೆ, ನಮ್ಮ ದುಃಖ, ದುಮ್ಮಾನವನ್ನು ನಾವೇ ಸಂಕಟ ಅನುಭವಿಸಿಕೊಂಡಿರಬೇಕು, ಅಷ್ಟೇ. ಏನು ಮಾಡುವುದು? ಒಂದಷ್ಟು ನಿಧಾನಕ್ಕೆ ಯೋಚಿಸೋಣವಾಗಲಿ.

**43. ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು ನಿಮ್ಮ ಮಾತುಗಳಲ್ಲಿ ಸಾರಾಂಶವನ್ನು ಬರೆಯಿರಿ. 5*1=5**

**ನುಡಿದರೆ ಮುತ್ತಿನ ಹಾರದಂತಿರಬೇಕು,**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,**
**ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು,**
**ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮ ದೇವನೆಂತೊಲಿವನಯ್ಯ.**

ಇದು ಬಸವಣ್ಣನವರ ಸುಪ್ರಸಿದ್ಧ ವಚನಗಳಲ್ಲಿ ಒಂದು. ನಮ್ಮ ನುಡಿ (ಮಾತು) ಹೇಗಿರಬೇಕು ಎನ್ನುವುದರ ಜತೆಗೇ ನಾವು ಹೇಗಿರಬೇಕು ಎನ್ನುವುದನ್ನು ಸೂಚಿಸುತ್ತದೆ. ಈ ವಚನ ಎಷ್ಟು ಸರಳವೂ ಸುಭಗವೂ ಆಗಿದೆಯೆಂದರೆ ಇದನ್ನು ವಿವರಿಸುವ ಅಗತ್ಯವೇ ಇಲ್ಲ. ಆದರೂ ಸಂಪ್ರದಾಯದಂತೆ ಇದರ ರೂಪಕಗಳನ್ನೊಮ್ಮೆ ನೋಡೋಣ.

ನುಡಿ 1. ಮುತ್ತಿನ ಹಾರ ಪೋಣಿಸಿದಂತೆ ಇರಬೇಕು; ಎಂದರೆ ಬಿಡಿಬಿಡಿ ಪದಗಳನ್ನು ಜೋಡಿಸಿದ ವಾಕ್ಯದಂತೆ, ಹಾಗೆ ಜೋಡಿಸಿದಾಗ ಅದಕ್ಕೊಂದು ಓರಣ ಬರಬೇಕು, ಅದುವೇ ಮಾಲೆ.

ನುಡಿ 2. ಅದು ಮಾಣಿಕ್ಯದಂತೆ ಬೆಳಕು ಚೆಲ್ಲಬೇಕು, ಎಂದರೆ ಅದಕ್ಕೊಂದು ಅರ್ಥ ಬರಬೇಕು, ಇದುವರೆಗೆ ಗೊತ್ತಿಲ್ಲದುದನ್ನು ಗೊತ್ತುಮಾಡಿಕೊಡಬೇಕು (ದರ್ಶನ).

3. ಮಾತು ಸ್ಫಟಿಕದ ಎಲೆಯಂತೆ (ಶಲಾಕೆಯಂತೆ) ನೇರವಾಗಿರಬೇಕು, ಹೊಳೆಯಬೇಕು, ಪಾರದರ್ಶಕವಿರಬೇಕು.

4. ಶಿವ ಮೆಚ್ಚಿ ತಲೆದೂಗಬೇಕು.

5. ಇಷ್ಟಾದರೂ ಸಾಲದು, ನುಡಿದವನು ತಾನು ನುಡಿದಂತೆ ನಡೆಯಬೇಕು; ಅದಲ್ಲದಿದ್ದರೆ, ಅರ್ಥಾತ್ ನುಡಿ ಮತ್ತು ನಡೆಯಲ್ಲಿ ಅಂತರವಿದ್ದರೆ, ಕೂಡಲಸಂಗಮ ಒಲಿಯುವುದು ಹೇಗೆ?

'ನುಡಿಯೊಳಗಾಗಿ ನಡೆ' ಎನ್ನುವುದು ಇಲ್ಲಿ ತಿರುಳಿನ ಮಾತು. ನುಡಿಯೊಳಗಾಗು ಎಷ್ಟು ಚಂದದ ಪದ! ಇದು ಮನುಷ್ಯನ ಋಜುತ್ವ, ಅಸ್ತಿತ್ವವಾದಿ ಪರಿಭಾಷೆಯಲ್ಲಿ, ಅವನು ತನ್ನ ಅಸ್ತಿತ್ವವನ್ನು ರೂಪಿಸಕೊಳ್ಳುವ ಬಗೆ. ಬಸವಣ್ಣ ಇಲ್ಲಿ ನುಡಿಯುವ ಬಗೆಯೇ ತನಗೆ ತಾನೇ ಒಂದು ಸಾದೃಶ್ಯ. ಯಾಕೆಂದರೆ ಇದಕ್ಕಿಂತ ಚೆನ್ನಾಗಿ ಇದೇ ಅರ್ಥವನ್ನು ಹೊಮ್ಮಿಸುವುದು ಅಸಾಧ್ಯ. ನುಡಿ ಇಲ್ಲಿ ಪರಿಪೂರ್ಣತೆಯನ್ನು ಪಡೆದಿದೆ.

**44. ಕೊಟ್ಟಿರುವ ಚಿತ್ರವನ್ನು ಗಮನಿಸಿ ಎಂಟು/ಹತ್ತು ವಾಕ್ಯಗಳಲ್ಲಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**
**5*1=5**



ವಾತಾವರಣದ ಸಮತೋಲನ ಕಾಪಾಡುವಲ್ಲಿ ಗಿಡ ಮರಗಳು ಪ್ರಮುಖ ಪಾತ್ರವಹಿಸುವುದರಿಂದ ಗಿಡ ಮರ ರಕ್ಷಣೆಗೆ ಎಲ್ಲರೂ ಪ್ರಯತ್ನಿಸಬೇಕು. ಅಭಿವೃದ್ಧಿಯ ಹೆಸರಲ್ಲಿ ಹಾಗೂ ವೈಯಕ್ತಿಕ ಲಾಭಕ್ಕಾಗಿ ನಡೆಯುತ್ತಿರುವ ಮರಗಳ ಮಾರಣಹೋಮ ನಿಂತು, ಪ್ರತಿಯೊಬ್ಬರಲ್ಲೂ ಗಿಡಮರ ಬೆಳೆಸುವ ಮನೋಭಾವ ಮೂಡಿದಾಗ ಮಾತ್ರ ಪರಿಸರ ಸಂರಕ್ಷಣೆಯಾಗುವ, ಜೀವಸಂಕುಲ ಉಳಿಯುವ, ಅಂತರ್ಜಲ ಹೆಚ್ಚಾಗುವ ಸಂಭವವಿದೆ.

ಹಿಂದು ಧರ್ಮದಲ್ಲಿ ಹುಲ್ಲು, ಗಿಡ, ಮರ, ಬಳ್ಳಿಗಳಿಗೆ ಮತ್ತು ಅವುಗಳ ಉತ್ಪನ್ನಗಳಿಗೆ ಪವಿತ್ರ ಸ್ಥಾನವಿದೆ. ವೈದಿಕ ಗ್ರಂಥಗಳಲ್ಲಿ, ಕಥೆ, ಕಾವ್ಯ ಪುರಾಣಗಳಲ್ಲಿ ಅವುಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಇದು ನಮ್ಮ ಮೌಖಿಕ ಹಾಗೂ ಲಿಖಿತ ದಾಖಲೆಗಳಿಂದ ತಿಳಿದುಬರುತ್ತಿದೆ. ಇಂತಹ ಸಸ್ಯ – ವೃಕ್ಷ ಸಂಪತ್ತು ಪೂಜನೀಯ ಸ್ಥಾನಗಳಿಸಿರುವುದು ಅದರ ವ್ಯವಹಾರಿಕ ಮತ್ತು ಧಾರ್ಮಿಕ ಮಹತ್ವದಿಂದಾಗಿ. ಗಿಡ – ಮರಗಳು, ಹೂ, ಕಾಯಿ, ಹಣ್ಣು, ಮರಮಟ್ಟು, ಸೌದೆ, ಎಲೆ, ಬೇರು, ತೊಗಟೆ, ಕೋಡುಗಳನ್ನು ನಮ್ಮ ಅನುಕೂಲಕ್ಕಾಗಿ ನೀಡುವುದು ಪ್ರತ್ಯಕ್ಷ ಪ್ರಮಾಣ. ಮರಗಳು ಮಣ್ಣಿನ ಸವೆತ, ಗಾಳಿಯ ಹೊಡೆತ, ವಾಯುಮಾಲಿನ್ಯಗಳನ್ನು ತಪ್ಪಿಸುವುದಲ್ಲದೆ, ಜಲಶೇಖರಣೆ ಮತ್ತು ಮಳೆಯ ಆಕರ್ಷಣೆಗೆ ಸಹಕಾರಿ. ಆಹಾರ ಹಾಗೂ ಔಷಧಿಗಾಗಿಯೂ ನಾವು ವೃಕ್ಷ ಸಂಕುಲವನ್ನು ಅವಲಂಬಿಸಬೇಕಾಗಿದೆ.

ಪದೇ ಪದೇ ತಲೆದೊರುವ ಬರ ಪರಿಸ್ಥಿತಿಗೆ ಶಾಶ್ವತ ಪರಿಹಾರವೆಂದರೆ, ಇಲ್ಲಿ ಹೆಚ್ಚು, ಹೆಚ್ಚು ಗಿಡ–ಮರಗಳನ್ನು ಬೆಳೆಸಬೇಕಲ್ಲದೆ ಅವುಗಳ ಬಗ್ಗೆ ಜನ ಸಮುದಾಯದಲ್ಲಿ ಕಾಳಜಿ ಮೂಡಬೇಕು.ಗಿಡ–ಮರಗಳನ್ನು ಬೆಳೆಸಿ, ಪೋಷಿಸುವ ಬಗ್ಗೆ ಜನ ಸಮುದಾಯದಲ್ಲಿ ಕಾಳಜಿ ಇರಬೇಕಿದೆ. ಗಿಡ–ಮರಗಳನ್ನು ನೆಟ್ಟು, ಬೆಳೆಸಲು ಜಿಲ್ಲೆಯ ಅಲ್ಲಲ್ಲಿ, ಕೆಲ ಸಂಘಟನೆಗಳು, ಮಠ ಮಾನ್ಯಗಳು, ಪರಿಸರ ಪ್ರೇಮಿಗಳು ಯತ್ನಿಸುತ್ತಿರುವುದು ಅತ್ಯಂತ ಶ್ಲಾಘನೀಯ. ವರ್ಷವಿಡೀ ಗಿಡ–ಮರಗಳನ್ನು ನೆಟ್ಟು, ಬೆಳೆಸಿ, ಅವುಗಳನ್ನು ಜೋಪಾನ ಮಾಡುವಂತಹ ಕಾರ್ಯಕ್ರಮಗಳು ನಡೆಯುತ್ತಲೇ ಇರಬೇಕು.

ಅರಣ್ಯ ಇಲಾಖೆಯು ಈಗಾಗಲೇ ಹಲವಾರು ನೆಡುತೋಪುಗಳಲ್ಲಿ ವಿವಿಧ ಜಾತಿಯ ಲಕ್ಷಾಂತರ ಸಸಿಗಳನ್ನು ಬೆಳೆಸಲಾಗುತ್ತಿದೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ. ಸಮಾಜದ ಪ್ರತಿಯೊಬ್ಬರು ಸಸಿಗಳನ್ನು ನೆಟ್ಟು ಪೋಷಿಸುವುದು ಆದ್ಯ ಕರ್ತವ್ಯವಾಗಿದೆ.

**45. ನಿಮ್ಮನ್ನು ಶಿವಮೊಗ್ಗದ ಕುವೆಂಪು ಬಡಾವಣೆಯ 'ಸಂದೇಶ' ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯಲ್ಲಿ ಹೆಚ್ಚುತ್ತಿರುವ ಬೀದಿನಾಯಿಗಳ ಕಾಟವನ್ನು ಪರಿಹರಿಸುವಂತೆ ಕೋರಿ ನಗರಸಭೆಯ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆಯಿರಿ. 5*1=5**

ಇಂದ,
ಸಂದೇಶ
ಕುವೆಂಪು ಬಡಾವಣೆ
ಶಿವಮೊಗ್ಗ

ದಿನಾಂಕ : 02-04-2022
ಸ್ಥಳ : ಶಿವಮೊಗ್ಗ

ಇವರಿಗೆ,
ಮಾನ್ಯ ಅಧ್ಯಕ್ಷರು
ಶಿವಮೊಗ್ಗ ನಗರ ಸಭೆ
ಶಿವಮೊಗ್ಗ

ಮಾನ್ಯರೇ,

ವಿಷಯ : ನಮ್ಮ ಕುವೆಂಪು ಬಡಾವಣೆಯಲ್ಲಿ ಹೆಚ್ಚುತ್ತಿರುವ ಬೀದಿನಾಯಿಗಳ ಕಾಟವನ್ನು ತಪ್ಪಿಸುವಂತೆ ಕೋರಿ ಮನವಿ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಕುವೆಂಪು ಬಡಾವಣೆಯಲ್ಲಿ ಬೀದಿನಾಯಿಗಳ ಕಾಟ ಬಹಳವಾಗಿದಗ್ಗಿದರಿಂದಾಗಿ ಜನರು ಬೀದಿಯಲ್ಲಿ ಓಡಾಡುವುದೇ ಕಷ್ಟಕರವಾಗಿದೆ. ಕಳೆದ ಎರಡು ಮೂರು ದಿನಗಳಲ್ಲಿ ಮೂರುನಾಲ್ಕು ಜನಗಳಿಗೆ ಬೀದಿನಾಯಿಗಳು ಕಚ್ಚಿ ಗಾಯಗೊಳಿಸಿರುತ್ತವೆ. ಇದರಿಂದ ಜನರು ರಾತ್ರಿ ವೇಳೆಯಲ್ಲಂತೂ ಬೀದಿಯಲ್ಲಿ ಸಂಚರಿಸುವುದು ದುಸ್ತರವಾಗಿದೆ. ಆದ್ದರಿಂದ ತಾವು ಈ ಬಗ್ಗೆ ಗಮನಹರಿಸಿ, ಹೆಚ್ಚುತ್ತಿರುವ ಬೀದಿನಾಯಿಗಳ ಕಾಟದ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ,

ಇಂತಿ ತಮ್ಮ ನಂಬುಗೆಯ
ಸಹಿ/-
(ಸಂದೇಶ)

ಹೊರ ವಿಳಾಸ

| ಇಂದ, | ಇವರಿಗೆ, |
|---|---|
| ಸಂದೇಶ<br>ಕುವೆಂಪು ಬಡಾವಣೆ<br>ಶಿವಮೊಗ್ಗ | ಮಾನ್ಯ ಅಧ್ಯಕ್ಷರು<br>ಶಿವಮೊಗ್ಗ ನಗರ ಸಭೆ<br>ಶಿವಮೊಗ್ಗ |

# ಕನ್ನಡ ವ್ಯಾಕರಣ

## ಕನ್ನಡ ವ್ಯಾಕರಣ ಗ್ರಂಥಗಳ ಸಂಕ್ಷಿಪ್ತ ಪರಿಚಯ

ಶಬ್ದದ ಸ್ವರೂಪವನ್ನು ವಿವರಿಸುವ ಶಾಸ್ತ್ರವನ್ನು 'ವ್ಯಾಕರಣ ಶಾಸ್ತ್ರ' ಎನ್ನುವರು. ದಿನ ನಿತ್ಯದ ವ್ಯವಹಾರದಲ್ಲಿ ಮತ್ತು ಗ್ರಾಂಥಿಕ ಭಾಷೆಯಲ್ಲಿ ಬಳಸುವ ನಾನಾ ಪದಗಳ ಅವಯವಗಳನ್ನು ಬಿಡಿಸಿ, ತೋರಿಸುವ ಮತ್ತು ಕೂಡಿಸುವ ವಿಧಾನಗಳನ್ನು 'ವ್ಯಾಕರಣ ಶಾಸ್ತ್ರ' ವಿವರಿಸುತ್ತದೆ. ಕ್ರಮಬದ್ಧವಾದ ವರ್ಣಗಳ (ಅಕ್ಷರಗಳ) ಸಂರಚನಾ ಸಮೂಹವು ಪದ; ಕ್ರಮಬದ್ಧವಾದ ಪದಗಳ ಸಂರಚನಾ ಸಮೂಹವು ವಾಕ್ಯ; ಇವುಗಳ ವಿವರಣೆಯೇ ವ್ಯಾಕರಣ. ಪ್ರತಿಯೊಂದು ಭಾಷೆಗೂ ತನ್ನದೇ ಆದ ವ್ಯಾಕರಣ ಸಂರಚನೆಯು ಇರುತ್ತದೆ. ಕನ್ನಡ ಭಾಷೆಗೆ ಸುಮಾರು 2100 ವರ್ಷಗಳ ಇತಿಹಾಸವಿದೆ. ಕನ್ನಡ ಭಾಷೆಗೂ ಸಹ ತನ್ನದೇ ಆದ ವ್ಯಾಕರಣ ಶಾಸ್ತ್ರವಿದೆ.

1. **ಸಂಸ್ಕೃತ ವ್ಯಾಕರಣ ಪರಂಪರೆಯಲ್ಲಿ ರಚನೆಗೊಂಡ ಕನ್ನಡ ವ್ಯಾಕರಣ ಶಾಸ್ತ್ರ ಗ್ರಂಥಗಳು.**
    - ಕ್ರಿ. ಶ. ಸುಮಾರು 9 ನೆಯ ಶತಮಾನದಲ್ಲಿ ಅಮೋಘವರ್ಷ ನೃಪತುಂಗನ ಆಶ್ರಯದಲ್ಲಿದ್ದ ಶ್ರೀವಿಜಯನಿಂದ ರಚಿತವಾಗಿರುವ 'ಕವಿರಾಜಮಾರ್ಗ' ಎನ್ನುವ ಆಲಂಕಾರಿಕ ಗ್ರಂಥದ ಮೊದಲೆರಡು ಪರಿಚ್ಛೇದಗಳಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಮಹತ್ತರವಾದ ವಿಷಯಗಳು ದೊರೆಯುತ್ತವೆ.
    - ಕ್ರಿ. ಶ. ಸುಮಾರು 12 ನೆಯ ಶತಮಾನದಲ್ಲಿದ್ದ ಎರಡನೆಯ ನಾಗವರ್ಮನಿಂದ ರಚಿತವಾಗಿರುವ 'ಕಾವ್ಯಾವಲೋಕನ' ಎನ್ನುವ ಆಲಂಕಾರಿಕ ಗ್ರಂಥದ ಐದು ಅಧಿಕರಣಗಳಲ್ಲಿ ಮೊದಲನೆಯ ಅಧಿಕರಣವಾದ 'ಶಬ್ದಸ್ಮೃತಿ' ಎನ್ನುವುದು ಶುದ್ಧ ಕನ್ನಡ ವ್ಯಾಕರಣ ಶಾಸ್ತ್ರ ಕೃತಿ. ಹಾಗೂ ಇವನೇ ಸಂಸ್ಕೃತ ಭಾಷೆಯಲ್ಲಿ ರಚಿಸಿರುವ 'ಕರ್ಣಾಟಕ ಭಾಷಾಭೂಷಣ' ಕನ್ನಡ ವ್ಯಾಕರಣ ಶಾಸ್ತ್ರ ಕೃತಿ. ಆದ್ದರಿಂದ ಸಮಗ್ರವಾದ ಕನ್ನಡ ವ್ಯಾಕರಣ ಗ್ರಂಥಗಳನ್ನು ರಚಿಸಿದ ಕೀರ್ತಿ 'ಎರಡನೆಯ ನಾಗವರ್ಮ'ನಿಗೆ ಸಲ್ಲುತ್ತದೆ. ಇವನನ್ನು 'ಕನ್ನಡದ ಪ್ರಪ್ರಥಮ ವ್ಯಾಕರಣಕಾರ' ಎನ್ನುವರು.
    - ಕ್ರಿ. ಶ. ಸುಮಾರು 13 ನೆಯ ಶತಮಾನದಲ್ಲಿದ್ದ ಕೇಶಿರಾಜನು ಕನ್ನಡ ವ್ಯಾಕರಣಕಾರರಲ್ಲಿ ಅಗ್ರಗಣ್ಯ. ಇವನು ರಚಿಸಿರುವ 'ಶಬ್ದಮಣಿ ದರ್ಪಣ' ಕನ್ನಡ ವ್ಯಾಕರಣ ಪರಂಪರೆಯಲ್ಲಿ ರಚನೆಗೊಂಡಿರುವ ವಿಶಿಷ್ಟವಾದ ಕೃತಿ.
    - ಕ್ರಿ. ಶ. ಸುಮಾರು 17 ನೆಯ ಶತಮಾನದಲ್ಲಿದ್ದ ಭಟ್ಟಾಕಳಂಕನಿಂದ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿರುವ 'ಶಬ್ದಾನುಶಾಸನ' ಕನ್ನಡ ವ್ಯಾಕರಣ ಶಾಸ್ತ್ರ ಕೃತಿ.
    - ಇಂದು ನಮ್ಮ ಶಾಲಾಕಾಲೇಜುಗಳಲ್ಲಿ ಬಳಸುತ್ತಿರುವ ಹೆಚ್ಚಿನ ವ್ಯಾಕರಣಗಳು ಈ ವಿಭಾಗಕ್ಕೆ ಸೇರುತ್ತವೆ.
2. **ಕ್ರಿಶ್ಚಿಯನ್ ಮಿಶನರಿಗಳು ಇಂಗ್ಲಿಷಿನಲ್ಲಿ ರಚಿಸಿರುವ ಹೊಸಗನ್ನಡ ವ್ಯಾಕರಣ ಶಾಸ್ತ್ರ ಗ್ರಂಥಗಳು.**
    - ಕ್ರಿ. ಶ. 19 ನೆಯ ಶತಮಾನದಿಂದೀಚೆಗೆ ಕ್ರಿಶ್ಚಿಯನ್ ಮಿಶಿನರಿಗಳು ಇಂಗ್ಲಿಷಿನಲ್ಲಿ ರಚಿಸಿದ ಹೊಸಗನ್ನಡ ವ್ಯಾಕರಣ ಕೃತಿಗಳು. ಇವುಗಳು ಯುರೋಪಿಯನ್ ವ್ಯಾಕರಣ ಪರಂಪರೆಯಲ್ಲಿ ರಚನೆಗೊಂಡಿರುತ್ತವೆ.
3. **ಆಧುನಿಕ ಭಾಷಾ ವಿಜ್ಞಾನಿಗಳು ರಚಿಸಿರುವ ವ್ಯಾಕರಣ ಶಾಸ್ತ್ರ ಗ್ರಂಥಗಳು.**
    - ಕ್ರಿ. ಶ. ಸುಮಾರು 20 ನೆಯ ಶತಮಾನದಿಂದೀಚೆಗೆ ಆಧುನಿಕ ಭಾಷಾ ವಿಜ್ಞಾನಿಗಳು ರಚಿಸಿರುವ ಹೊಸಗನ್ನಡ ವ್ಯಾಕರಣ ಕೃತಿಗಳು. ಇವುಗಳು ಭಾಷಾ ವಿಜ್ಞಾನದ ನಿಯಮಗಳಿಗೆ ಅನುಗುಣವಾಗಿ ರಚನೆಗೊಂಡಿರುತ್ತವೆ.

ಕ್ರಿ. ಶ. ಸುಮಾರು 9 ನೆಯ ಶತಮಾನದಿಂದ 19 ನೆಯ ಶತಮಾನದವರೆವಿಗೂ ಸಂಸ್ಕೃತ ಶಿಕ್ಷಣದ ಮಾಧ್ಯಮ ಮತ್ತು ಜ್ಞಾನದ ಭಾಷೆಯಾಗಿತ್ತು. ಕ್ರಿ. ಶ. ಸುಮಾರು 19 ನೆಯ ಶತಮಾನದಿಂದೀಚೆಗೆ ಇಂಗ್ಲಿಷ್ ಭಾಷೆಯು ಶಿಕ್ಷಣ ಮಾಧ್ಯಮದ ಭಾಷೆಯಾಯಿತು. ಇದರಿಂದಾಗಿ ಪಂಡಿತ ಶ್ರೇಷ್ಠರೆನಿಸಿಕೊಂಡವರೆಲ್ಲರೂ ಸಂಸ್ಕೃತ ಅಥವಾ ಇಂಗ್ಲಿಷ್ ಭಾಷಾಭಿಮಾನಿಗಳಾಗಿದ್ದರು. 'ಕನ್ನಡವೂ ಒಂದು ಜೀವಂತ ಭಾಷೆ; ಅದರ ಸಾಹಿತ್ಯವೂ ವಿದ್ವಜ್ಜನರ ಆದರಣೆಗೆ ಅರ್ಹವಾದುದು' ಎಂದು ಅವರಿಗೆ ತಿಳಿಸಬೇಕಾದರೆ ಸಂಸ್ಕೃತ ಅಥವಾ ಇಂಗ್ಲಿಷ್ ಭಾಷೆಯ ಮೂಲಕವೇ ತಿಳಿಸಬೇಕಾಗಿತ್ತು. ಆದ್ದರಿಂದ ಕನ್ನಡ ಭಾಷಾಭಿಮಾನಿಗಳಾದ ವೈಯಾಕರಣಿಗಳು ಕನ್ನಡ ವ್ಯಾಕರಣ ಶಾಸ್ತ್ರ ಕೃತಿಗಳನ್ನು ಸಂಸ್ಕೃತ ಅಥವಾ ಇಂಗ್ಲಿಷಿನಲ್ಲಿ ರಚಿಸಿದರು.

ಪ್ರಯೋಗಾರ್ಹವಾದ ಸಾಧು ಶಬ್ದಗಳನ್ನು ಶಿಷ್ಟರೀತಿಯಲ್ಲಿ ತಿಳಿದುಕೊಳ್ಳುವುದೇ ವ್ಯಾಕರಣದಿಂದ ಆಗುವ ಪ್ರಥಮ ಪ್ರಯೋಜನ. ನಮ್ಮ ಮಾತನ್ನು ಪರಿಶುದ್ಧಗೊಳಿಸಲು ಇರುವ ಮೂಲ ಸಾಧನ ವ್ಯಾಕರಣ. ಅಪಾರವಾದ ವಾಙ್ಮಯದಲ್ಲಿ ಅನಂತವಾಗಿರುವ ಸಾಧುಪರ ಕ್ರಿಯಾರೂಪಗಳ ಪ್ರಯೋಗ ಭೇದಗಳನ್ನು, ಅವುಗಳಿಂದ ತೋರುವ ಅರ್ಥ ವಿಶ್ಲೇಷಣೆಗಳನ್ನು ಅರಿಯಲು ವ್ಯಾಕರಣವೇ ಪ್ರಮುಖ ಸಾಧನ. ವ್ಯಾಕರಣದ ಆಲೋಡನೆಯಿಂದ ಭಾಷಾಶುದ್ಧಿಯೊಡನೆ ಅನೂಹ್ಯವಾದ ತಾರ್ಕಿಕವಾದ ಪ್ರಜ್ಞೆಯ ಪ್ರತಿಭಾ ವಿಕಸನವು ಸಾಧ್ಯವಾಗುತ್ತದೆ. ವೇದದ ಷಡಂಗಗಳಲ್ಲಿ ವ್ಯಾಕರಣವು ಸಹ ಒಂದಾಗಿದೆ. ಇದನ್ನು 'ವೇದದ ಮುಖ' ಎನ್ನುವರು.

ಕನ್ನಡ ವೈಯಾಕರಣಿ ಕೇಶಿರಾಜನು "ವ್ಯಾಕರಣದ ಕಲಿಕೆಯಿಂದ ಪದ ಸಿದ್ಧಿಯೂ, ಆ ಪದ ಸಿದ್ಧಿಯಿಂದ ಅರ್ಥವೂ, ಆ ಅರ್ಥದಿಂದ ತತ್ತ್ವಜ್ಞಾನವೂ, ಆ ತತ್ತ್ವಜ್ಞಾನದಿಂದ ಮಾನವರು ಬಯಸುವ ಮೋಕ್ಷ ದೊರೆಯುತ್ತದೆ" ಎಂದು ವ್ಯಾಕರಣದ ಕಲಿಕೆಯಿಂದ ದೊರೆಯುವ ಫಲವನ್ನು ಹೇಳುತ್ತಾನೆ.
ವ್ಯಾಕರಣವು ಸರ್ವವಿದ್ಯೆಗಳಿಗೂ ಪ್ರದೀಪಸ್ವರೂಪವಾದುದು; ವಾಗ್ದೋಷಗಳಿಗೆ ಚಿಕಿತ್ಸಾ ರೂಪವಾದುದು; ಪದಸಿದ್ಧಿ, ಅರ್ಥ ನಿರ್ಣಯಗಳು ಮೋಕ್ಷಕ್ಕೆ ಸಾಧನ; ಇದು ವ್ಯಾಕರಣದ ಮಹತ್ತರವಾದ ಫಲ.

## ಕನ್ನಡ ವರ್ಣಮಾಲೆ

ಅಕ್ಷರ ಎಂದರೆ ನಾಶವಿಲ್ಲದ್ದು / ನಿತ್ಯವಾದದ್ದು. ಶುದ್ಧಾಕ್ಷರಕ್ಕೆ ಅಕ್ಷರ (ಅಕ್ಕರ) / ವರ್ಣ ಎನ್ನುವರು. ಗುಡುಗು ಮೊದಲಾದ ಧ್ವನಿಗಳು ಬರೆಹಕ್ಕಾಗಲೀ, ಉಚ್ಚಾರಣೆಗಾಗಲೀ ಬರದಿರುವುದರಿಂದ ಅವು ಅಕ್ಷರಗಳಲ್ಲ; ಕೇವಲ ಧ್ವನಿಗಳು.

ಅಕ್ಷರಗಳು ಎರಡು ರೂಪಗಳಲ್ಲಿ ವರ್ತಿಸುತ್ತವೆ.

1. **ಶ್ರಾವಣ ರೂಪ :** ಧ್ವನಿ ರೂಪವಾಗಿ ಕಿವಿಗೆ ಕೇಳುವುದು **ಶ್ರಾವಣ ರೂಪ**. ಒಂದು ಅಕ್ಷರದ ಉಚ್ಚಾರಣೆಯು ಸಾಮಾನ್ಯವಾಗಿ ಎಲ್ಲಾ ಭಾಷೆಗಳಲ್ಲೂ ಒಂದೇ ಆಗಿರುತ್ತದೆ.
2. **ಚಾಕ್ಷುಷ ರೂಪ :** ಲಿಪಿ ರೂಪವಾಗಿ ಕಣ್ಣಿಗೆ ಕಾಣಿಸುವುದು **ಚಾಕ್ಷುಷ ರೂಪ**. ಶ್ರಾವಣ ರೂಪದ / ಧ್ವನಿ ರೂಪದ ಅಕ್ಷರಗಳ ಸಂಕೇತಗಳನ್ನು / ರೇಖ್ಯಾ ವಿನ್ಯಾಸಗಳನ್ನು **'ಲಿಪಿಗಳು'** ಎನ್ನುವರು. ಇವು ರೇಖಾರೂಪದಲ್ಲಿ ಇರುವುದರಿಂದ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿರುತ್ತವೆ.

ಕನ್ನಡ ವರ್ಣಮಾಲೆಯ ಅಕ್ಷರಗಳಲ್ಲಿ ಮೂರು ವಿಧಗಳಿವೆ.

**1. ಮೂಲಾಕ್ಷರಗಳು :** ಅಕಾರದಿಂದ ಳಕಾರದವರೆಗಿನ ಅಕ್ಷರಗಳಿಗೆ **'ಮೂಲಾಕ್ಷರಗಳು'** ಎನ್ನುವರು.

**2. ಗುಣಿತಾಕ್ಷರಗಳು :** ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳಿಗೆ **'ಗುಣಿತಾಕ್ಷರಗಳು'** ಎನ್ನುವರು.

**3. ಸಂಯುಕ್ತಾಕ್ಷರಗಳು :** ಎರಡು ಅಥವಾ ಮೂರು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸೇರಿ ಅವುಗಳ ಮುಂದೆ ಸ್ವರವು ಸೇರಿ ಆಗುವ ಅಕ್ಷರಗಳನ್ನು **'ಸಂಯುಕ್ತಾಕ್ಷರಗಳು'** ಎನ್ನುವರು.

### ಮೂಲಾಕ್ಷರಗಳು

- ಮೂಲಾಕ್ಷರಗಳು : ಅಕಾರದಿಂದ ಪ್ರಾರಂಭಿಸಿ ಳಕಾರದವರೆಗಿನ ಅಕ್ಷರಗಳನ್ನು ಎಲ್ಲ ವ್ಯಾಕರಣಕಾರರೂ ಒಂದು ಪ್ರಸಿದ್ಧ ಕ್ರಮವನ್ನು ಅನುಸರಿಸಿ ವ್ಯವಸ್ಥೆಗೊಳಿಸಿರುವ ಪಾಠಕ್ರಮವನ್ನು **'ವರ್ಣಮಾಲೆ / ಅಕ್ಷರ ಮಾಲೆ / ವರ್ಣ ಸಮಾಮ್ನಾಯ / ಅಕ್ಷರ ಸಮಾಮ್ನಾಯ / ಮೂಲಾಕ್ಷರಗಳು'** ಎನ್ನುವರು.

  ಕನ್ನಡ ವರ್ಣಮಾಲೆಯಲ್ಲಿ ಪ್ರಸ್ತುತ ಒಟ್ಟು <u>**49**</u> ಅಕ್ಷರಗಳಿವೆ.

  ಕನ್ನಡ ವರ್ಣಮಾಲೆಯಲ್ಲಿ ಪ್ರಧಾನವಾಗಿ <u>**ಮೂರು**</u> ಬಗೆಯ ಅಕ್ಷರಗಳಿವೆ.

  1. ಸ್ವರಗಳು 2. ವ್ಯಂಜನಗಳು 3. ಯೋಗವಾಹಗಳು

- **ಸ್ವರಗಳು :** ಯಾವುದೇ ವರ್ಣಗಳ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚಾರವಾಗತಕ್ಕ ವರ್ಣಗಳಿಗೆ 'ಸ್ವರಗಳು' ಎನ್ನುವರು. ಪ್ರಸ್ತುತ ಕನ್ನಡ ವರ್ಣಮಾಲೆಯಲ್ಲಿ ಒಟ್ಟು <u>**13**</u> ಸ್ವರಗಳಿವೆ.

  ಅವು ಯಾವುವೆಂದರೆ ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ.

  {**ವಿಶೇಷ ವಿಚಾರಗಳು :** ಸಾಂಪ್ರದಾಯಕ ವ್ಯಾಕರಣಕಾರರು ಸ್ವರಗಳಲ್ಲಿ 'ೠ' ಅಕ್ಷರವನ್ನು ಸೇರಿಸಿ, ಸ್ವರಗಳಲ್ಲಿ 14 ಅಕ್ಷರಗಳನ್ನು ಹೇಳುತ್ತಾರೆ, ಆದರೆ ಭಾಷಾ ವಿಜ್ಞಾನಿಗಳು ಕನ್ನಡ ಪದಗಳಲ್ಲಿ 'ೠ' ಸ್ವರವನ್ನು ಬಳಸಿದ ಪದಗಳು ಬಳಕೆಯಲ್ಲಿ ಇಲ್ಲದಿರುವುದರಿಂದ ಇತ್ತೀಚೆಗೆ 'ೠ' ಸ್ವರವನ್ನು ಕೈಬಿಟ್ಟಿದ್ದಾರೆ}

  ಸ್ವರಗಳಲ್ಲಿ <u>**ಮೂರು**</u> ವಿಧಗಳಿವೆ. ಅವು ಯಾವುವೆಂದರೆ :

  1. ಹ್ರಸ್ವ ಸ್ವರಗಳು 2. ದೀರ್ಘ ಸ್ವರಗಳು 3. ಪ್ಲುತ ಸ್ವರಗಳು

- **ಹ್ರಸ್ವ ಸ್ವರಗಳು :** ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು <u>**'ಹ್ರಸ್ವ ಸ್ವರಗಳು'**</u> ಎನ್ನುವರು.

  ಕನ್ನಡ ವರ್ಣಮಾಲೆಯಲ್ಲಿ ಒಟ್ಟು <u>**6**</u> ಹ್ರಸ್ವ ಸ್ವರಗಳಿವೆ. ಅವು ಯಾವುವೆಂದರೆ ಅ, ಇ, ಉ, ಋ, ಎ, ಒ.

- **ದೀರ್ಘ ಸ್ವರಗಳು** : ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು **'ದೀರ್ಘ ಸ್ವರಗಳು'** ಎನ್ನುವರು.
  ಕನ್ನಡ ವರ್ಣಮಾಲೆಯಲ್ಲಿ ಒಟ್ಟು 7 ದೀರ್ಘ ಸ್ವರಗಳಿವೆ. ಅವು ಯಾವುವೆಂದರೆ ಆ, ಈ, ಊ, ಏ, ಐ, ಓ, ಔ.
- **ಪ್ಲುತ ಸ್ವರಗಳು** : ಮೂರು ಅಥವಾ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು **'ಪ್ಲುತ ಸ್ವರಗಳು'** ಎನ್ನುವರು. ಉದಾಹರಣೆ : ಆss, ಈss, ಊss, ಏss, ಐss, ಓss, ಔss.
  {ಸಾಂಪ್ರದಾಯಕ ವ್ಯಾಕರಣಕಾರರು ಸ್ವರಗಳ ವಿಧಗಳಲ್ಲಿ ಪ್ಲುತ ಸ್ವರವನ್ನು ಸೇರಿಸುತ್ತಾರೆ, ಆದರೆ ಭಾಷಾ ವಿಜ್ಞಾನಿಗಳು ಕನ್ನಡ ಪದಗಳಲ್ಲಿ ಪ್ಲುತ ಸ್ವರವನ್ನು ಬಳಸಿದ ಪದಗಳು ಬಳಕೆಯಲ್ಲಿ ಇಲ್ಲದಿರುವುದರಿಂದ ಇತ್ತೀಚೆಗೆ ಪ್ಲುತ ಸ್ವರವನ್ನು ಕೈಬಿಟ್ಟಿದ್ದಾರೆ.}
- **ಸಂಧ್ಯಕ್ಷರಗಳು** : ಕನ್ನಡ ವರ್ಣಮಾಲೆಯಲ್ಲಿರುವ **ಏ, ಐ, ಓ, ಮತ್ತು ಔ ಅಕ್ಷರಗಳನ್ನು 'ಸಂಧ್ಯಕ್ಷರಗಳು'** ಎನ್ನುವರು.
  ಅ + ಇ = ಏ, ಅ + ಏ =ಐ, ಅ + ಉ = ಓ, ಅ + ಓ = ಔ
- **ವಿಶೇಷ ವಿಚಾರಗಳು** : ಕನ್ನಡ ವ್ಯಾಕರಣಕಾರನಾದ ಕೇಶಿರಾಜನು ಇವುಗಳ ಸಂಧಿಯನ್ನು (ಕೂಡುವಿಕೆಯನ್ನು) 'ಗೂಢ ಸಂಧಿ' ಎಂದು ಹೆಸರಿಸಿದ್ದಾನೆ. ಇವುಗಳನ್ನು ನೋಡಿದ ಕೂಡಲೆ ಸಂಧಿಯಾಗಿರುವುದು ತಿಳಿಯುವುದಿಲ್ಲ. ಈ ನಾಲ್ಕು ಅಕ್ಷರಗಳಲ್ಲಿ ಏ ಮತ್ತು ಓ ಕನ್ನಡದಲ್ಲಿ ಸಹಜ ಸ್ವರಗಳು; ಸಂಸ್ಕೃತದಲ್ಲಿ ಮಾತ್ರ ಸಂಧ್ಯಕ್ಷರಗಳು.
  ಕನ್ನಡ ವ್ಯಾಕರಣಕಾರನಾದ ಕೇಶಿರಾಜನು ಎ, ಏ, ಒ, ಓ ಗಳನ್ನು ಸವರ್ಣಗಳೆಂದು ಕರೆದು ಸಹಜ ಸ್ವರಗಳನ್ನಾಗಿ ಸ್ವೀಕರಿಸಿದ್ದಾನೆ. ಹೀಗೇಯೇ ಐ ಮತ್ತು ಔ ಗಳನ್ನು ಸವರ್ಣಗಳೆಂದು ಕರೆದು ಸಹಜ ಸ್ವರಗಳಾಗಿ ಸ್ವೀಕರಿಸಿದ್ದಾನೆ. ಆದರೆ ಸಂಸ್ಕೃತದಲ್ಲಿ ಐ ಮತ್ತು ಔ ಗಳಿಗೆ ಸವರ್ಣ ಸಂಜ್ಞೆ ಇಲ್ಲ. ಭಾಷಾ ವಿಜ್ಞಾನಿಗಳು ಕನ್ನಡಕ್ಕೆ ಐ ಮತ್ತು ಔ ವರ್ಣಗಳ ಅಗತ್ಯವಿಲ್ಲವೆಂದು ಹೇಳುತ್ತಾರೆ. ಭಾಷಾ ವಿಜ್ಞಾನಿಗಳು 'ಐ' ವರ್ಣದ ಕಾರ್ಯವನ್ನು 'ಅಯ್' ಕಾರವು ಮತ್ತು 'ಔ' ವರ್ಣದ ಕಾರ್ಯವನ್ನು 'ಅವ್' ಮಾಡುತ್ತದೆ ಎಂದು ಹೇಳುತ್ತಾರೆ. ಅ+ಇ=ಅಯ್ (ಐ) , ಅ+ಉ= ಅವ್ (ಔ).
- **ಮಾತ್ರಾಕಾಲ** : ಮಾತ್ರಾಕಾಲ ಎಂದರೆ ಅಕ್ಷರ ಉಚ್ಚಾರಣೆಯ ಸಮಯವನ್ನು ಅಳೆಯುವ ಒಂದು ಮೂಲಮಾನ. ಒಂದು ಬಾರಿ ಕಣ್ಣಿನ ರೆಪ್ಪೆ ಹೊಡೆದು ಮುಚ್ಚುವಷ್ಟು ಕಾಲವನ್ನು (ಕಣ್ಣು ಮಿಟುಕಿಸುವಷ್ಟು ಕಾಲವನ್ನು) ಅಥವಾ ಒಂದು ಚಿಟಿಕೆಯನ್ನು ಹೊಡೆಯುವಷ್ಟು ಕಾಲವನ್ನು 'ಒಂದು ಮಾತ್ರಾ ಕಾಲ' ಎನ್ನುವರು.
- **ಸವರ್ಣಗಳು** : ಯಾವ ಎರಡು ವರ್ಣಗಳಿಗೆ / ಅಕ್ಷರಗಳಿಗೆ (ಸ್ವರಗಳಿಗೆ) ಸ್ಥಾನ, ಪ್ರಯತ್ನ ಸಮಾನವಾಗಿ ಇರುತ್ತದೆಯೋ ಆ ವರ್ಣಗಳನ್ನು **'ಸವರ್ಣಗಳು'** ಎನ್ನುವರು. ಇವು ಸಹಜ ಸ್ವರಗಳು. ಈ ಎರಡೆರಡು ಅಕ್ಷರಗಳು ಅನುಲೋಮ (ಹ್ರಸ್ವಾಕ್ಷರವನ್ನು ಮೊದಲು ಹೇಳಿ ಆನಂತರ ದೀರ್ಘಾಕ್ಷರವವನ್ನು ಹೇಳುವುದು.) ಅಥವಾ ವಿಲೋಮವಾಗಿ (ದೀರ್ಘಾಕ್ಷರವನ್ನು ಮೊದಲು ಹೇಳಿ ಆನಂತರ ಹ್ರಸ್ವಾಕ್ಷರವನ್ನು ಹೇಳುವುದು.) ಹೇಗೆ ಓದಿದರು **'ಸವರ್ಣಗಳು'** ಎನಿಸುತ್ತವೆ. ಈ ಎರಡು ಅಕ್ಷರಗಳಲ್ಲಿ ಹ್ರಸ್ವಕ್ಕೆ ಹ್ರಸ್ವವು ಪರವಾದರೂ, ದೀರ್ಘಕ್ಕೆ ದೀರ್ಘವು ಪರವಾದರೂ 'ಸವರ್ಣ' ಎನಿಸುತ್ತದೆ.
  **ಕನ್ನಡದಲ್ಲಿ ಸವರ್ಣಗಳು ಯಾವುವೆಂದರೆ** : ಅ ಆ / ಇ ಈ / ಉ ಊ.
  **ಸಂಸ್ಕೃತದಲ್ಲಿ ಸವರ್ಣಗಳು ಯಾವುವೆಂದರೆ** : ಅ ಆ / ಇ ಈ / ಉ ಊ / ಋ ೠ.
- **ವಿಶೇಷ ವಿಚಾರಗಳು** : ಯಾವ ಅಕ್ಷರದ ಮುಂದೆ 'ಕಾರ' ಎಂಬ ಶಬ್ದವು ಬರುತ್ತದೆಯೋ ಅಲ್ಲಿನ 'ಕಾರ' ಶಬ್ದ ಉಚ್ಚರಿಸಿದಷ್ಟು ಅಂಶವನ್ನು ಮಾತ್ರ ಹೇಳುತ್ತದೆ; 'ಅಕಾರ' ಎಂದರೆ 'ಅ' ಎಂಬ ಅಕ್ಷರ ಮಾತ್ರ. 'ವರ್ಣ' ಶಬ್ದವು ಸಜಾತಿಯನ್ನು ಹೇಳುತ್ತದೆ; 'ಅವರ್ಣ' ಎಂದರೆ ಹ್ರಸ್ವ

ದೀರ್ಘಾದಿ ಸಕಲ ಅಂಶಗಳಿಂದ ಕೂಡಿರುವುದು; **'ಅವರ್ಣ'** ಎಂದರೆ ಅ ಮತ್ತು ಆ ಎಂಬ ಎರಡು ಅಕ್ಷರಗಳು.}

- **ನಾಮಿಗಳು :** ಅವರ್ಣವನ್ನು (ಅಆ) ಬಿಟ್ಟು ಉಳಿದ ಸ್ವರಗಳಿಗೆ **'ನಾಮಿ'** ಎನ್ನುವರು. ಅವರ್ಣವು ಸಹಜವಾದುದು, ಇದರ ಉಚ್ಚಾರಣೆಗೆ ಯಾವುದೇ ಸ್ಥಾನ ಮತ್ತು ಪ್ರಯತ್ನ ಬೇಕಾಗಿರುವುದಿಲ್ಲ, ಸಹಜವಾಗಿಯೇ ಉಚ್ಚಾರಣೆ ಮಾಡಬಹುದು. ಆದರೆ ಇವರ್ಣ / ಉವರ್ಣಗಳನ್ನು ಉಚ್ಚಾರಣೆ ಮಾಡಲು ಸ್ಥಾನ ಮತ್ತು ಪ್ರಯತ್ನ ಬೇಕು. ಇವು ಸಹಜ ಧ್ವನಿಗಳಲ್ಲ ವಿಕಾರಗೊಳಿಸುವುದರಿಂದ ಇ / ಉ ಮೊದಲಾದ ನಾಮ (ಹೆಸರು) ಬಂದುದರಿಂದ ಇವು **'ನಾಮಿಗಳು'**. ನಾಮವುಳ್ಳದ್ದು 'ನಾಮಿ'. ಅವರ್ಣ (ಅಆ) ಸಹಜ ಧ್ವನಿ ಆದ್ದರಿಂದ ಅದು ನಾಮಿ ಅಲ್ಲ. ಇವರ್ಣ (ಇಈ) ಮತ್ತು ಉವರ್ಣ (ಉಊ) ವಿಕೃತ ಧ್ವನಿಗಳು ಆದ್ದರಿಂದ ಅವು ನಾಮಿಗಳು. ಇವರ್ಣ ಮತ್ತು ಉವರ್ಣ ನಾಮಿಗಳು ವಿಕೃತಗಳಾದರೂ ಸ್ವತಂತ್ರವಾದವುಗಳಂತೆ ವರ್ತಿಸುತ್ತವೆ. ಅಲ್ಲದೆ ಇವು ಅವರ್ಣವನ್ನು ಬಿಟ್ಟು ಸ್ವತಂತ್ರವಾಗಿ ಇರಲಾರವು. ಇವು ಅವರ್ಣಕಾಮರ್ / ಅವರ್ಣವನ್ನು ಬಯಸುತ್ತವೆ. ಅವರ್ಣದ ಯೋಗದಿಂದ ಗುಣವೃದ್ಧಿಗಳನ್ನು 'ನಾಮಿಗಳು' ಪಡೆಯುತ್ತವೆ.
  (ಉದಾಹರಣೆ : ಅ + ಇ = ಏ, ಅ + ಉ = ಓ, ಅ + ಏ = ಐ, ಅ + ಓ = ಔ)
  **ನಾಮಿಗಳು ಯಾವುವೆಂದರೆ** : ಇ ಈ ಉ ಊ ಋ ೠ ಏ ಐ ಓ ಔ
- **ವ್ಯಂಜನಗಳು :** ಸ್ವತಂತ್ರವಾಗಿ ಉಚ್ಚಾರ ಮಾಡಲು ಬಾರದ ಹಾಗೂ ಸ್ವರಗಳ ಸಹಾಯದಿಂದ ಉಚ್ಚಾರ ಮಾಡಬೇಕಾದ ಅಕ್ಷರಗಳನ್ನು **'ವ್ಯಂಜನಗಳು'** ಎನ್ನುವರು. ಸ್ವರಗಳನ್ನು ಸ್ವತಂತ್ರವಾಗಿ ಉಚ್ಚಾರಣೆ ಮಾಡಬಹುದು; ಆದರೆ ವ್ಯಂಜನಗಳನ್ನು ಹಾಗೆ ಸ್ವತಂತ್ರವಾಗಿ ಉಚ್ಚರಿಸಲು ಸಾಧ್ಯವಿಲ್ಲ. ವ್ಯಂಜನಗಳನ್ನು ಉಚ್ಚರಿಸಬೇಕಾದರೆ ಅವುಗಳ ಹಿಂದೆ ಮತ್ತು ಮುಂದೆ ಸ್ವರಗಳ ಸಹಾಯ ಪಡೆಯಬೇಕು. ವ್ಯಂಜನಗಳು ಅರ್ಧ ಮಾತ್ರೆಗಳಾಗಿರುತ್ತವೆ. ವ್ಯಂಜನಗಳಿಗೆ ಪೂರ್ಣ ಮಾತ್ರೆಯ ಬೆಲೆ ಬರಬೇಕಾದರೆ ಒಂದು ಸ್ವರದ ಅಗತ್ಯವಿರುತ್ತದೆ.
  ಉದಾಹರಣೆ : ಕ್ + ಅ = ಕ, ಗ್ + ಆ = ಗಾ, ಅ + ರ್ = ಅರ್, ಎ + ಲ್ = ಎಲ್.
  ಕನ್ನಡ ವರ್ಣಮಾಲೆಯಲ್ಲಿ ಒಟ್ಟು **34** ವ್ಯಂಜನಗಳಿವೆ. ಅವು ಯಾವುವೆಂದರೆ
  ಕ್, ಖ್, ಗ್, ಘ್, ಙ್
  ಚ್, ಛ್, ಜ್, ಝ್ ಞ್,
  ಟ್, ಠ್, ಡ್, ಢ್, ಣ್,
  ತ್, ಥ್, ದ್, ಧ್, ನ್.
  ಪ್, ಫ್, ಬ್, ಭ್, ಮ್.
  ಯ್, ರ್, ಲ್, ವ್, ಶ್, ಷ್, ಸ್, ಹ್, ಳ್,
  ವ್ಯಂಜನಗಳಲ್ಲಿ **ಎರಡು** ವಿಧಗಳಿವೆ. ಅವು ಯಾವುವೆಂದರೆ
  1. ವರ್ಗೀಯ ವ್ಯಂಜನಗಳು 2. ಅವರ್ಗೀಯ ವ್ಯಂಜನಗಳು
- **ವರ್ಗೀಯ ವ್ಯಂಜನಗಳು :** ಅಕ್ಷರಗಳು ಉತ್ಪತ್ತಿಯಾಗುವ ಸ್ಥಾನಗಳಿಗೆ ಅನುಗುಣವಾಗಿ ಐದೈದು ಅಕ್ಷರಗಳಿಗೆ ಒಂದೊಂದು ವರ್ಗವಾಗಿ ವಿಂಗಡಿಸಿರುವ ಅಕ್ಷರಗಳನ್ನು **'ವರ್ಗೀಯ ವ್ಯಂಜನಗಳು'** ಎನ್ನುವರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು **25** ವರ್ಗೀಯ ವ್ಯಂಜನಗಳಿವೆ. ಅವು ಯಾವುವೆಂದರೆ :
  ಕ್, ಖ್, ಗ್, ಘ್, ಙ್
  ಚ್, ಛ್, ಜ್, ಝ್ ಞ್,
  ಟ್, ಠ್, ಡ್, ಢ್, ಣ್,
  ತ್, ಥ್, ದ್, ಧ್, ನ್.
  ಪ್, ಫ್, ಬ್, ಭ್, ಮ್.

- **ವರ್ಗೀಯ ವ್ಯಂಜನಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.**
  1. ಅಲ್ಪಪ್ರಾಣ ಅಕ್ಷರಗಳು 2. ಮಹಾಪ್ರಾಣ ಅಕ್ಷರಗಳು 3. ಅನುನಾಸಿಕ ಅಕ್ಷರಗಳು
- **ಅಲ್ಪಪ್ರಾಣಾಕ್ಷರಗಳು :** ಕಡಿಮೆ ಉಸಿರಿನೊಡನೆ (ಅಲ್ಪ ವಾಯುವಿನೊಡನೆ) ಉಚ್ಚರಿಸುವ ಅಕ್ಷರಗಳನ್ನು **'ಅಲ್ಪಪ್ರಾಣ ಅಕ್ಷರಗಳು'** ಎನ್ನುವರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು **10** ಅಲ್ಪಪ್ರಾಣ ಅಕ್ಷರಗಳಿವೆ.
  ಅವು ಯಾವುವೆಂದರೆ ಪ್ರತಿ ವರ್ಗದ ಒಂದನೆಯ (ಪ್ರಥಮಾ) ಮತ್ತು ಮೂರನೆಯ (ತೃತೀಯಾ) ಅಕ್ಷರಗಳಾದ ಕ್, ಗ್, ಚ್, ಜ್, ಟ್, ಡ್, ತ್, ದ್, ಪ್, ಬ್,
- **ಮಹಾಪ್ರಾಣಾಕ್ಷರಗಳು :** ಹೆಚ್ಚು ಉಸಿರಿನೊಡನೆ (ಅಧಿಕ ವಾಯುನೊಡನೆ) ಉಚ್ಚರಿಸುವ ಅಕ್ಷರಗಳನ್ನು **'ಮಹಾಪ್ರಾಣ ಅಕ್ಷರಗಳು'** ಎನ್ನುವರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು **10** ಮಹಾಪ್ರಾಣ ಅಕ್ಷರಗಳಿವೆ.
  ಅವು ಯಾವುವೆಂದರೆ ಪ್ರತಿ ವರ್ಗದ ಎರಡನೆಯ (ದ್ವಿತೀಯಾ) ಮತ್ತು ನಾಲ್ಕನೆಯ (ಚತುರ್ಥ) ಅಕ್ಷರಗಳಾದ **ಖ್, ಘ್, ಛ್, ಝ್, ಠ್, ಢ್, ಥ್, ಧ್, ಫ್, ಭ್,**
- **ವಿಶೇಷ ವಿಚಾರ :** ನಾಗವರ್ಮ ಮತ್ತು ಕೇಶಿರಾಜ ಅವರಿಗೆ ಅಚ್ಚಗನ್ನಡ ವರ್ಣಮಾಲೆಯಲ್ಲಿ ಮಹಾಪ್ರಾಣಾಕ್ಷರಗಳ ಅಸ್ತಿತ್ವದ ಬಗ್ಗೆ ಸಂದೇಹವಿದೆ. ಇವರು "ಸಂಖ್ಯಾವಾಚಕ ಮತ್ತು ಅನುಕರಣ ಶಬ್ದಗಳಲ್ಲಿ ಮಾತ್ರ ಮಹಾಪ್ರಾಣಾಕ್ಷರಗಳು ಬಳಕೆಯಾಗುತ್ತವೆ" ಎಂದು ಉದಾಹರಣೆಗಳನ್ನು ನೀಡಿರುತ್ತಾರೆ. ಆದರೆ ಭಟ್ಟಾಕಳಂಕನು "ಮಹಾಪ್ರಾಣಾಕ್ಷರಗಳು ಪ್ರಧಾನವಾಗಿ ಕನ್ನಡ ಭಾಷೆಯಲ್ಲಿವೆ" ಎಂದು ಅಭಿಪ್ರಾಯಪಡುತ್ತಾನೆ. ಆಧುನಿಕ ಭಾಷಾ ವಿಜ್ಞಾನಿಗಳು "ಕನ್ನಡ ಭಾಷೆಗೆ ಮಹಾಪ್ರಾಣಾಕ್ಷರಗಳ ಅಗತ್ಯವಿಲ್ಲ" ಎಂದು ಅಭಿಪ್ರಾಯ ಪಡುತ್ತಾರೆ.
  **ಅನುನಾಸಿಕ ಅಕ್ಷರಗಳು :** ಮೂಗಿನ (ನಾಸಿಕದ) ಸಹಾಯದಿಂದ ಉಚ್ಚರಿಸುವ ಅಕ್ಷರಗಳನ್ನು **'ಅನುನಾಸಿಕ ಅಕ್ಷರಗಳು'** ಎನ್ನುವರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು **5** ಅನುನಾಸಿಕ ಅಕ್ಷರಗಳಿವೆ. ಅವು ಯಾವುವೆಂದರೆ ಪ್ರತಿ ವರ್ಗದ ಐದನೆಯ (ಪಂಚಮಾ) ಅಕ್ಷರವಾದ **ಙ್, ಞ್, ಣ್, ನ್, ಮ್.**
- **ಅವರ್ಗೀಯ ವ್ಯಂಜನಗಳು :** ಅಕ್ಷರಗಳು ಉತ್ಪತ್ತಿಯಾಗುವ ಸ್ಥಾನಗಳಿಗೆ ಅನುಗುಣವಾಗಿ ವರ್ಗೀಕರಿಸಲಾಗದ ಅಕ್ಷರಗಳನ್ನು **'ಅವರ್ಗೀಯ ವ್ಯಂಜನಗಳು'** ಎನ್ನುವರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು **9** ಅವರ್ಗೀಯ ವ್ಯಂಜನಗಳಿವೆ. ಅವು ಯಾವುವೆಂದರೆ ಯ್, ರ್, ಲ್, ವ್, ಶ್, ಷ್, ಸ್, ಹ್, ಳ್,
- **ವಿಶೇಷ ವಿಚಾರಗಳು :** ಅಂತಸ್ಥವರ್ಣಗಳಾದ (ಉಚ್ಚಾರಣೆ ಮಾಡುವಾಗ ಕಂಠದಲ್ಲಿ ಅಂತಸ್ಥವಾಗುವ) ಯ, ವ, ರ, ಲ, ಳ ಅಕ್ಷರಗಳು ಹಾಗೂ ಊಷ್ಮ (ಉಚ್ಚಾರಣೆ ಮಾಡಿದಾಗ ಬಿಸಿಯನ್ನುಂಟು ಮಾಡುವ) ವರ್ಣಗಳಾದ ಶ, ಷ, ಸ, ಹ ಅಕ್ಷರಗಳು ಉತ್ಪತ್ತಿಯಾಗುವ ಸ್ಥಾನಗಳು ಬೇರೆ ಬೇರೆಯಾಗಿದ್ದು, ಅವನ್ನು ವರ್ಗೀಕರಿಸಲಾಗದ ಕಾರಣ ಅಂತಹ ಅಕ್ಷರಗಳನ್ನು **'ಅವರ್ಗೀಯ ವ್ಯಂಜನಗಳು'** ಎನ್ನುವರು. ಕನ್ನಡ ವ್ಯಾಕರಣಕಾರ ಕೇಶಿರಾಜನ ಪ್ರಕಾರ ಯ, ವ, ಲ ಅಕ್ಷರಗಳು ಅನುನಾಸಿಕಗಳಾಗಿಯೂ, ನಿರನುನಾಸಿಕಗಳಾಗಿಯೂ ಪ್ರಯೋಗವಾಗುತ್ತವೆ.
  **ಅನುನಾಸಿಕವಾಗಿ ಪ್ರಯೋಗವಾಗಿರುವುದಕ್ಕೆ ಉದಾಹರಣೆಗಳು :** ಮೇಯಿಸಿದಂ, ನೋಯಿಸಿದಂ, ಜಾವಂ, ಕಾವಣಂ, ಹಲ್ಲಣಂ, ದಲ್ಲಣಂ ಇತ್ಯಾದಿ.
  **ಅನುನಾಸಿಕವಾಗಿ ಪ್ರಯೋಗವಾಗಿರುವುದಕ್ಕೆ ಉದಾಹರಣೆಗಳು :** ಬಯಕೆ, ಬಯಲ್, ಹವಳಂ, ತವಕಂ, ಜಲಂ, ಫಲಂ ಇತ್ಯಾದಿ.
  ಹಳಗನ್ನಡ ವ್ಯಾಕರಣಕಾರರು ಅವರ್ಗೀಯ ವ್ಯಂಜನಗಳಲ್ಲಿ 'ಱ ಮತ್ತು ೞ' ಕಾರವನ್ನು ಕನ್ನಡ ವರ್ಣಮಾಲೆಯಲ್ಲಿ ಸೇರಿಸುತ್ತಾರೆ. ನಡುಗನ್ನಡ ಕಾಲದಲ್ಲಿ ಇವುಗಳ ಸ್ಪಷ್ಟ ಉಚ್ಚಾರಣೆಯು

ಕೈಬಿಟ್ಟು ಹೋಗಿರುವುದರಿಂದ ಆಧುನಿಕ ವ್ಯಾಕರಣಕಾರರು ಱ ಮತ್ತು ೞ ಕಾರಗಳಿಗೆ ಬದಲು ರ ಮತ್ತು ಳ ಕಾರವನ್ನೇ ಬಳಸುತ್ತಾರೆ.}

- **ಯೋಗವಾಹಗಳು** : ಸ್ವತಂತ್ರವಾದ ಉಚ್ಚಾರವಿಲ್ಲದ, ಸ್ವರದ ಮುಂದೆ ಬಂದಾಗ ಮಾತ್ರ ಉಚ್ಚಾರವಾಗುವ ಅಕ್ಷರಗಳನ್ನು **'ಯೋಗವಾಹಗಳು'** ಎನ್ನುವರು. 'ಯಜ್' ಧಾತುವಿನಿಂದಾದ 'ಯೋಗ' ಎಂದರೆ 'ಕೂಡುವುದು'; 'ವಹ್' ಧಾತುವಿನಿಂದಾದ 'ವಾಹ' ಎಂದರೆ 'ಹೋಗುವುದು'; ಎಂದರೆ ಸ್ವರದೊಂದಿಗೆ ಕೂಡಿಹೋಗುವುದು.
  ಉದಾಹರಣೆ : ಅಂ, ಆಂ, ಇಂ, ಈಂ, ಉಂ, ಊಂ, ಅಃ, ಆಃ, ಇಃ, ಈಃ ಇತ್ಯಾದಿ.
  ಕನ್ನಡ ವರ್ಣಮಾಲೆಯಲ್ಲಿ **2** ಯೋಗವಾಹ ಅಕ್ಷರಗಳಿವೆ. ಅವು ಯಾವುವೆಂದರೆ
  1. ಅನುಸ್ವಾರ = ಂ 2. ವಿಸರ್ಗ = ಃ
- **ವಿಶೇಷ ವಿಚಾರಗಳು** : ಸೊನ್ನೆಯ ಆಕಾರದಲ್ಲಿರುವ ಅನುಸ್ವಾರಕ್ಕೆ 'ಬಿಂದು' ಎಂದೂ ಸಹ ಎನ್ನುವರು. ಇದು ಮುತ್ತಿನಂತೆ ದುಂಡಾಗಿರುತ್ತದೆ. ಸೊನ್ನೆಯು ಒಂದರಮೇಲೊಂದು ಇದ್ದರೆ ಅದನ್ನು 'ವಿಸರ್ಗ' ಎನ್ನುವರು.
  ಬಿಂದು ಮತ್ತು ವಿಸರ್ಗಗಳು ಸ್ವರಗಳ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ 'ಸ್ವರಾಂಗ'ಗಳೆಂದೂ, ಅನುಸ್ವಾರವು 'ಮ' ಕಾರದ ಉಚ್ಚಾರವನ್ನೂ, ವಿಸರ್ಗವು ರೇಫೆ ಮತ್ತು ಸಕಾರ ಉಚ್ಚಾರವನ್ನೂ ಪಡೆದಿರುವ ಕಾರಣದಿಂದ 'ವ್ಯಂಜನಾಂಗ'ಗಳೆಂದೂ ಪರಿಗಣಿಸಲ್ಪಡುತ್ತವೆ. ಅಂತ್ಯಾಕ್ಷರವಾಗಿ ಬರುವ 'ಮ' ಕಾರ ನಕಾರಗಳಿಗೆ 'ಬಿಂದು' ಆದೇಶವಾಗಿ ಬರುವುದು. ಆ ಮಕಾರ ಮತ್ತು ನಕಾರಗಳಿಗೆ ವರ್ಗೀಯ ವ್ಯಂಜನಗಳು ಪರವಾದರೆ ಆಯಾ ವರ್ಗದ ಪಂಚಮಾಕ್ಷರವಾದ ಅನುನಾಸಿಕಾಕ್ಷರವು ಆದೇಶವಾಗುವುದು.
  ಉದಾಹರಣೆ : ಕುಲಮ್ = ಕುಲಂ, ಜಲಮ್ = ಜಲಂ, ನೀನ್ = ನೀಂ, ತಾನ್ = ತಾಂ.
  ಮಕಾರ ನಕಾರಗಳಿಗೆ ವ್ಯಂಜನ ಪರವಾಗಲಿ ಅಥವಾ ಪರವಾಗದಿರಲಿ ಬಿಂದು ಆದೇಶವಾಗುವುದು. ಆ ಬಿಂದುವಿಗೆ ವರ್ಗೀಯ ವ್ಯಂಜನಗಳು ಪರವಾದರೆ ವಿಕಲ್ಪವಾಗಿ ಆಯಾ ವರ್ಗದ ಅನುನಾಸಿಕಾಕ್ಷರಗಳು ಆದೇಶವಾಗಿ ಬರುವುವು.
  ಉದಾಹರಣೆ : ಆನ್ ವಾದಿ = ಆಂ ವಾದಿ, ನೀನ್ ಶುಚಿ = ನೀಂ ಶುಚಿ
  ಅವಂ ಕಡುಗಲಿ = ಅವಙ್ಕಡುಗಲಿ, ತಾಂ ಚಲವಾದಿ = ತಾಞ್ಚಲವಾದಿ,
  ಕೆಂದಳಿರ್ = ಕೆನ್ದಳಿರ್, ಕರಂಟಕ್ಕಂ = ಕರಣ್ಟಕ್ಕಂ.
  ಅನುಸ್ವಾರ ಮತ್ತು ವಿಸರ್ಗಗಳು ಸ್ವರದ ಮುಂದೆ ಮಾತ್ರ ಬರುತ್ತವೆ. ಇದು ಸ್ವರಾಂಗ. ಇವುಗಳಿಗೆ ಸ್ವತಂತ್ರ ಉಚ್ಚಾರಣೆ ಇರುವುದಿಲ್ಲ. ಅನುಸ್ವಾರದ ಉಚ್ಚಾರಣೆ ಪದದ ಕಡೆಯಲ್ಲಿ ಬಂದಾಗ 'ಮ್' ಎಂದಾಗುತ್ತದೆ. ಪದದ ಮಧ್ಯದಲ್ಲಿ ಬರೆಹದ ಸೌಕರ್ಯಕ್ಕಾಗಿ ಅನುಸ್ವಾರವನ್ನು ಬರೆದರೂ ವರ್ಗೀಯ ವ್ಯಂಜನಗಳು ಪರವಾದಾಗ ಅದು ಆಯಾ ವರ್ಗದ ಅನುನಾಸಿಕ ಅಕ್ಷರವಾಗಿದ್ದು, ಅನುನಾಸಿಕ ಅಕ್ಷರದಂತೆಯೇ ಉಚ್ಚಾರಣೆಗೊಳ್ಳುತ್ತದೆ. ಅನುಸ್ವಾರವು ಅನುನಾಸಿಕ ವ್ಯಂಜನಗಳ ಪರವಾಗಿ ಆದೇಶವಾಗಿ ಬರುವುದರಿಂದ ಅನುಸ್ವಾರವನ್ನು ವ್ಯಂಜನಾಂಗ ಎಂದು ಕೇಶಿರಾಜನು ಹೇಳುತ್ತಾನೆ.
  ಉದಾಹರಣೆ :

| | | |
|---|---|---|
| ಅಂಕ > ಅಙ್ಕ | ಪುಂಖ > ಪುಙ್ಖ | ರಂಗ > ರಙ್ಗ |
| ಕುಂಚ > ಕುಞ್ಚ | ವಾಂಛೆ > ವಾಞ್ಛೆ | ಸಂಜೆ > ಸಞ್ಜೆ, |
| ಗಂಟು > ಗಣ್ಟು | ಕಂಠಿ > ಕಣ್ಠಿ | ಮೊಂಡ > ಮೊಣ್ಡ |
| ದಂತ > ದನ್ತ, | ಅಂಧ > ಅನ್ಧ | ಪಂಥ > ಪನ್ಥ |
| ಪಂಪ > ಪಮ್ಪ | ಕಂಬ > ಕಮ್ಬ | ಜಂಭ > ಜಮ್ಭ |

ವಿಕಲ್ಪವಾಗಿ ಅನುಸ್ವಾರಕ್ಕೆ ಯ, ವ, ಲ ಗಳು ಪರವಾದಾಗ ಯ, ವ, ಲ ಗಳಂತೆ ಉಚ್ಚಾರಣೆ ಮಾಡಲಾಗುತ್ತದೆ. ಅನುಸ್ವಾರವು ನಾಸಿಕೋಚ್ಚಾರಣೆಯಿಂದ ಹುಟ್ಟತಕ್ಕ ಅನುನಾಸಿಕ ವರ್ಣ. ಈ

ಅನುನಾಸಿಕ ವರ್ಣದ ತರುವಾಯ ಬರುವ ಯವಲ ಕಾರಗಳಿಗೆ ಅನುನಾಸಿಕ ವರ್ಣದ ಪ್ರಭಾವದಿಂದ ಅನುನಾಸಿಕತ್ವವು ಉಂಟಾಗುತ್ತದೆ.

ಉದಾಹರಣೆಗೆ : ಸಂಯಮ > ಸಯ್ಂಯಮ, ಸಂವತ್ಸರ > ಸವ್ಂವತ್ಸರ, ಸಂಲಾಪ > ಸಲ್ಂಲಾಪ. ಇಲ್ಲಿ ಎರಡು ರೀತಿಯ ಉಚ್ಚಾರಣೆಗಳು ಬಳಕೆಯಲ್ಲಿ ಉಂಟು.

ಅನುಸ್ವಾರಕ್ಕೆ ಶ, ಷ, ಸ ಪರವಾದಾಗ ಎಲ್ಲೆಡೆಯೂ ಅನುಸ್ವಾರದ ಉಚ್ಚಾರಣೆಯನ್ನು ಮಾಡಬೇಕು.

ಉದಾಹರಣೆ : ಅಂಶ, ಶಿಂಷಾ, ಹಂಸ. ಇಲ್ಲಿ ಅನುಸ್ವಾರವನ್ನು 'ಮ' ಕಾರದಂತೆ ಉಚ್ಚರಿಸಬಾರದು. 'ಮ' ಕಾರವನ್ನು ಉಚ್ಚರಿಸುವಾಗ ತುಟಿಗಳು ಕೂಡುತ್ತವೆ; ಅನುಸ್ವಾರವನ್ನು ಉಚ್ಚರಿಸುವಾಗ ತುಟಿಗಳು ಕೂಡುವುದಿಲ್ಲ.

ಹ ಕಾರಕ್ಕೆ ಣ, ನ, ಯ, ರ, ಲ, ವ ಗಳು ಪರವಾದಾಗ ಹಕಾರದ ಉಚ್ಚಾರಣೆಯು ಸಡಿಲವಾಗುತ್ತದೆ. ಅದನ್ನು ತೇಲಿಸಿ ಉಚ್ಚಾರಣೆ ಮಾಡಬೇಕು.

ಉದಾಹರಣೆ : ಪೂರ್ವಾಹ್ನ, ಮಧ್ಯಾಹ್ನ, ಬ್ರಹ್ಮ, ಸಹ್ಯ, ಹ್ರೀ, ಪ್ರಹ್ಲಾದ, ಆಹ್ವಾನ – ಇಲ್ಲಿ ಹ ಕಾರವನ್ನು ತೇಲಿಸಿ ಉಚ್ಚಾರಣೆ ಮಾಡಬೇಕು.

- **ಕರ್ಕಶ (ಅಘೋಷ/ಖರ್) ವರ್ಣಗಳು** : ಉಚ್ಚಾರಣೆ ಮಾಡಿದಾಗ ಕಿವಿಗೆ ಗಡುಸಾಗಿ (ಕರ್ಕಶವಾಗಿ) ಕೇಳುವ ಅಕ್ಷರಗಳನ್ನು '**ಕರ್ಕಶ (ಅಘೋಷ/ಖರ್)** ವರ್ಣಗಳು' ಎನ್ನುವರು. ಕರ್ಕಶ ವರ್ಣಗಳ ಒಟ್ಟು ಸಂಖ್ಯೆ : 13

  ಅವು ಯಾವುವೆಂದರೆ : ಪ್ರತಿ ವರ್ಗದ ಒಂದನೆಯ, ಎರಡನೆಯ ಮತ್ತು ಅವರ್ಗೀಯ ವ್ಯಂಜನದಲ್ಲಿ ಊಷ್ಮವರ್ಣಗಳಾದ ಶ, ಷ, ಸ ಅಕ್ಷರಗಳನ್ನು 'ಕರ್ಕಶ ವರ್ಣಗಳು' ಎನ್ನುವರು. ಈ ವರ್ಣಗಳನ್ನು ಹೆಚ್ಚಾಗಿ ರೌದ್ರ, ಭಯಾನಕ, ಬೀಭತ್ಸ ಮುಂತಾದ ರಸಗಳಲ್ಲಿ ಪ್ರಯೋಗ ಮಾಡಲಾಗುವುದು.

  ಕರ್ಕಶ ವರ್ಣಗಳು ಯಾವುವೆಂದರೆ : ಕ ಖ ಚ ಛ ಟ ಠ ತ ಥ ಪ ಫ ಶ ಷ ಸ

- **ಮೃದು (ಘೋಷ/ಹಶ್) ವರ್ಣಗಳು** : ಉಚ್ಚಾರಣೆ ಮಾಡಿದಾಗ ಕಿವಿಗೆ ಮೆದುವಾಗಿ (ಮೃದುವಾಗಿ) ಕೇಳುವ ಅಕ್ಷರಗಳನ್ನು '**ಮೃದು (ಘೋಷ/ಹಶ್)** ವರ್ಣಗಳು' ಎನ್ನುವರು. ಮೃದು ವರ್ಣಗಳು ಒಟ್ಟು ಸಂಖ್ಯೆ : 20

  ಅವು ಯಾವುವೆಂದರೆ : ಪ್ರತಿ ವರ್ಗದ ಮೂರನೆಯ, ನಾಲ್ಕನೆಯ, ಐದನೆಯ ಮತ್ತು ಅವರ್ಗೀಯ ವ್ಯಂಜನದಲ್ಲಿ ಯ, ವ, ರ, ಲ, ಹ ಅಕ್ಷರಗಳನ್ನು 'ಮೃದು ವರ್ಣಗಳು' ಎನ್ನುವರು.

  ಈ ವರ್ಣಗಳನ್ನು ಹೆಚ್ಚಾಗಿ ಶೃಂಗಾರ, ಕರುಣ ಮುಂತಾದ ರಸಗಳಲ್ಲಿ ಪ್ರಯೋಗ ಮಾಡಲಾಗುವುದು. ಮೃದು ವರ್ಣಗಳು ಯಾವುವೆಂದರೆ : ಗ ಘ ಙ ಜ ಝ ಞ ಡ ಢ ಣ ದ ಧ ನ ಬ ಭ ಮ ಯ ರ ಲ ವ ಹ

## ಗುಣಿತಾಕ್ಷರಗಳು

- **ಗುಣಿತಾಕ್ಷರಗಳು :** ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳನ್ನು **'ಗುಣಿತಾಕ್ಷರಗಳು'** ಎನ್ನುವರು.

| ವ್ಯಂಜನ | + ಸ್ವರ | = ಗುಣಿತಾಕ್ಷರ | – ಚಿಹ್ನೆ | = ಕಾಗುಣಿತ ಉಚ್ಚಾರಣಾ ಕ್ರಮ |
|---|---|---|---|---|
| ಕ್ | + ಅ | = ಕ | – ್ | = ಕ ಕ್ಕೆ ತಲೆಕಟ್ಟು ಕ |
| ಕ್ | + ಆ | = ಕಾ | – ಾ | = ಕ ಕ್ಕೆ ಇಳಿ ಕಾ |
| ಕ್ | + ಇ | = ಕಿ | – ಿ | = ಕ ಕ್ಕೆ ಗುಡಿಸು ಕಿ |
| ಕ್ | + ಈ | = ಕೀ | – ೀ | = ಕ ಕ್ಕೆ ಗುಡಿಸಿನ ದೀರ್ಘ ಕೀ |
| ಕ್ | + ಉ | = ಕು | – ು | = ಕ ಕ್ಕೆ ಕೊಂಬು ಕು |
| ಕ್ | + ಊ | = ಕೂ | – ೂ | = ಕ ಕ್ಕೆ ಕೊಂಬಿನ ದೀರ್ಘ ಕೂ |
| ಕ್ | + ಋ | = ಕೃ | – ೃ | = ಕ ಕ್ಕೆ ವಟ್ರಸುಳಿ ಕೃ |
| ಕ್ | + ಎ | = ಕೆ | – ೆ | = ಕ ಕ್ಕೆ ಎತ್ವ ಕೆ |
| ಕ್ | + ಏ | = ಕೇ | – ೇ | = ಕ ಕ್ಕೆ ಎತ್ವದ ದೀರ್ಘ ಕೇ |
| ಕ್ | + ಐ | = ಕೈ | – ೈ | = ಕ ಕ್ಕೆ ಐತ್ವ ಕೈ |
| ಕ್ | + ಒ | = ಕೊ | – ೊ | = ಕ ಕ್ಕೆ ಒತ್ವ ಕೊ |
| ಕ್ | + ಓ | = ಕೋ | – ೋ | = ಕ ಕ್ಕೆ ಒತ್ವದ ದೀರ್ಘ ಕೋ |
| ಕ್ | + ಔ | = ಕೌ | – ೌ | = ಕ ಕ್ಕೆ ಔತ್ವ ಕೌ |
| ಕ್ | + ಅಂ | = ಕಂ | – ಂ | = ಕ ಕ್ಕೆ ಒಂದು ಸೊನ್ನೆ ಕಂ |
| ಕ್ | + ಅಃ | = ಕಃ | – ಃ | = ಕ ಕ್ಕೆ ಎರಡು ಸೊನ್ನೆ ಕಃ |

## ಸಂಯುಕ್ತಾಕ್ಷರಗಳು

- **ಸಂಯುಕ್ತಾಕ್ಷರ :** ಎರಡು ಅಥವಾ ಮೂರು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸೇರಿ, ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು **'ಸಂಯುಕ್ತಾಕ್ಷರ'** ಎನ್ನುವರು. ಸಂಯುಕ್ತಾಕ್ಷರದಲ್ಲಿ **2** ಬಗೆಗಳಿವೆ.

  1. ಸಜಾತಿ ಸಂಯುಕ್ತಾಕ್ಷರ 2. ವಿಜಾತಿ ಸಂಯುಕ್ತಾಕ್ಷರ.

- **ಸಜಾತಿ ಸಂಯುಕ್ತಾಕ್ಷರ :** ಒಂದೇ ಜಾತಿಯ ಎರಡು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸೇರಿ ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು **'ಸಜಾತಿ ಸಂಯುಕ್ತಾಕ್ಷರ'** ಎನ್ನುವರು.

  **ಉದಾಹರಣೆ :** ಕ್ + ಕ್ + ಅ = ಕ್ಕ    ತ್ + ತ್ + ಅ = ತ್ತ

  **ಅಪ್ಪ, ಅಕ್ಕ, ಅಜ್ಜ, ಹಗ್ಗ** ಇತ್ಯಾದಿ.

  ಒಂದೇ ಜಾತಿಯ ಅಲ್ಪಪ್ರಾಣ ವ್ಯಂಜನಾಕ್ಷರ ಮತ್ತು ಮಹಾಪ್ರಾಣ ವ್ಯಂಜನಾಕ್ಷರಗಳು ನಡುವೆ ಸ್ವರವಿಲ್ಲದೆ ಸೇರಿ ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು ಸಹ **'ಸಜಾತಿ ಸಂಯುಕ್ತಾಕ್ಷರ'** ಎನ್ನುವರು.

  ಉದಾಹರಣೆ : ಚ್ + ಛ್ + ಆ = ಚ್ಛಾ,    ದ್ + ಧ್ + ಅ = ದ್ಧ

  ವಿಚ್ಛೇದನ, ಶುದ್ಧ, ಬುದ್ಧ , ಉತ್ಥಾನ, ಉದ್ಧಾರ, ವೃದ್ಧ, ಸಿದ್ಧತೆ, ಗುಚ್ಛ ಇತ್ಯಾದಿ.

- **ವಿಜಾತಿ ಸಂಯುಕ್ತಾಕ್ಷರ :** ಬೇರೆ ಬೇರೆ ಜಾತಿಯ ಎರಡು ಅಥವಾ ಮೂರು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸೇರಿ ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು **'ವಿಜಾತಿ ಸಂಯುಕ್ತಾಕ್ಷರ'** ಎನ್ನುವರು.

  **ಉದಾಹರಣೆ :** ಷ್ + ಟ್ + ರ್ + ಅ = ಷ್ಟ್ರ    ಸ್ + ತ್ + ಅ = ಸ್ತ

  **ಉಷ್ಣ, ಅಸ್ತ್ರ,** ಅಕ್ಷರ ಇತ್ಯಾದಿ.

## ವರ್ಣೋತ್ಪತ್ತಿ ಸ್ಥಾನಗಳು

- **ವರ್ಣೋತ್ಪತ್ತಿ ಸ್ಥಾನಗಳು :** ವರ್ಣಮಾಲೆಯಲ್ಲಿರುವ ಅಕ್ಷರಗಳು ಬಾಯಿಯಲ್ಲಿ ಉತ್ಪತ್ತಿಯಾಗಿ ಉಚ್ಚರಿಸಲ್ಪಡುವ ಸ್ಥಾನಗಳನ್ನು **'ವರ್ಣೋತ್ಪತ್ತಿ ಸ್ಥಾನಗಳು'** ಎನ್ನುವರು.

  1. ಕಂಠ್ಯ ವರ್ಣಗಳು
  2. ತಾಲವ್ಯ ವರ್ಣಗಳು
  3. ಮೂರ್ಧನ್ಯ ವರ್ಣಗಳು
  4. ದಂತ್ಯ ವರ್ಣಗಳು
  5. ಓಷ್ಠ್ಯ ವರ್ಣಗಳು
  6. ಅನುನಾಸಿಕ ವರ್ಣಗಳು
  7. ಕಂಠತಾಲವ್ಯ ವರ್ಣಗಳು
  8. ಕಂಠ್ಯೌಷ್ಠ್ಯ ವರ್ಣಗಳು
  9. ದಂತೌಷ್ಠ್ಯ ವರ್ಣಗಳು

- **ಕಂಠ್ಯ ವರ್ಣಗಳು :** ಕಂಠದ ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ಕಂಠ್ಯ ವರ್ಣಗಳು'** ಎನ್ನುವರು.
  ಅವು ಯಾವುವೆಂದರೆ – ಅ, ಆ, ಕ, ಖ, ಗ, ಘ, ಙ, ಹ, ಃ (ವಿಸರ್ಗ).
- **ತಾಲವ್ಯ ವರ್ಣಗಳು :** ತಾಲುವಿನ (ಅಂಗುಳಿನ ಮುಂಭಾಗದ) ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ತಾಲವ್ಯ ವರ್ಣಗಳು'** ಎನ್ನುವರು.
  ಅವು ಯಾವುವೆಂದರೆ – ಇ, ಈ, ಚ, ಛ, ಜ, ಝ, ಞ, ಯ, ಶ.
- **ಮೂರ್ಧನ್ಯ ವರ್ಣಗಳು :** ಮೂರ್ಧದ (ನಾಲಿಗೆಯ ಮೇಲ್ಭಾಗ) ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ಮೂರ್ಧನ್ಯ ವರ್ಣಗಳು'** ಎನ್ನುವರು.
  ಅವು ಯಾವುವೆಂದರೆ – ಋ, ಟ, ಠ, ಡ, ಢ, ಣ, ರ, ಷ.
- **ದಂತ್ಯ ವರ್ಣಗಳು :** ದಂತದ (ಹಲ್ಲುಗಳ) ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ದಂತ್ಯ ವರ್ಣಗಳು'** ಎನ್ನುವರು. ಅವು ಯಾವುವೆಂದರೆ – ತ, ಥ, ದ, ಧ, ನ, ಲ, ಸ.
- **ಓಷ್ಠ್ಯ ವರ್ಣಗಳು :** ಓಷ್ಠದ (ತುಟಿಗಳ) ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ಓಷ್ಠ್ಯ ವರ್ಣಗಳು'** ಎನ್ನುವರು. ಅವು ಯಾವುವೆಂದರೆ – ಉ, ಊ, ಪ, ಫ, ಬ, ಭ, ಮ.
- **ಅನುನಾಸಿಕ ವರ್ಣಗಳು :** ನಾಸಿಕದ (ಮೂಗಿನ) ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ಅನುನಾಸಿಕ ವರ್ಣಗಳು'** ಎನ್ನುವರು. ಅವು ಯಾವುವೆಂದರೆ – ಙ, ಞ, ಣ, ನ, ಮ.
- **ಕಂಠ ತಾಲವ್ಯ ವರ್ಣಗಳು :** ಕಂಠ ಮತ್ತು ತಾಲುಗಳ ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ಕಂಠತಾಲವ್ಯ ವರ್ಣಗಳು'** ಎನ್ನುವರು. ಅವು ಯಾವುವೆಂದರೆ – ಎ, ಏ, ಐ.
- **ಕಂಠೌಷ್ಠ್ಯ ವರ್ಣಗಳು :** ಕಂಠ ಮತ್ತು ಓಷ್ಠಗಳ ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು **'ಕಂಠೌಷ್ಠ್ಯ ವರ್ಣಗಳು'** ಎನ್ನುವರು. ಅವು ಯಾವುವೆಂದರೆ – ಒ, ಓ, ಔ.
- **ದಂತೌಷ್ಠ್ಯ ವರ್ಣಗಳು :** ದಂತ ಮತ್ತು ಓಷ್ಠಗಳ ಸಹಾಯದಿಂದ ಉತ್ಪತ್ತಿಯಾಗುವ ವರ್ಣವನ್ನು **'ದಂತೌಷ್ಠ್ಯ ವರ್ಣ'** ಎನ್ನುವರು. ಅದು ಯಾವುವೆಂದರೆ – ವ

## ರಳ ಕುಳ ಕ್ಷಳಗಳು

- **ಕ್ಷಳ ಎಂದರೇನು** : ಸಂಸ್ಕೃತದ 'ಲ' ಕಾರಕ್ಕೆ ಬದಲು ಕನ್ನಡದಲ್ಲಿ ಬರುವ 'ಳ' ಕಾರವನ್ನು **'ಕ್ಷಳ'** ಎನ್ನುವರು.
  ಉದಾ :– ಜಲ > ಜಳ, ಮಂಗಲ > ಮಂಗಳ, ಪಿಂಗಲ > ಪಿಂಗಳ
  **ರಳ** : ಡಕಾರವು ಹುಟ್ಟುವ ಸ್ಥಾನವನ್ನು ಒತ್ತಿ ಉಚ್ಚರಿಸುವುದರಿಂದ 'ಱ' ಕಾರವು ಹುಟ್ಟುವುದು. ಹಳಗನ್ನಡದ ವರ್ಣಮಾಲೆಯಲ್ಲಿ ಬಳಕೆಯಲ್ಲಿದ್ದ ' ಱ ' ಕಾರವನ್ನು 'ರಳ' ಎನ್ನುವರು.
  ಉದಾ:– ಸೂಱ್ = ಸರದಿ
- **ಕುಳ** : ಲಕಾರವು ಹುಟ್ಟುವ ಸ್ಥಾನವನ್ನು ಒತ್ತಿ ಉಚ್ಚರಿಸುವುದರಿಂದ 'ಳ' (ಕುಳ) ಕಾರವು ಹುಟ್ಟುವುದು.
  ಕನ್ನಡ ವರ್ಣಮಾಲೆಯಲ್ಲಿ ಸಹಜವಾಗಿರುವ 'ಳ' ಕಾರವನ್ನು **'ಕುಳ'** ಎನ್ನುವರು.
  ಉದಾ :– ಎಳ =ಚಿಕ್ಕ, ಕಳಿ = ಪಕ್ವವಾಗು,
- **ರೇಫ** : ಕನ್ನಡ ವರ್ಣಮಾಲೆಯಲ್ಲಿ ಸಹಜವಾಗಿರುವ 'ರ' ಕಾರವನ್ನು **'ರೇಫ'** ಎನ್ನುವರು.
  ಉದಾ :– ಏರು = ಹತ್ತು, ಅರಿ = ತಿಳಿ, ಮೊರೆ = ಪ್ರಾರ್ಥನೆ, ತೊರೆ = ಹೊಳೆ
- **ಶಕಟ ರೇಫೆ** : ರೇಫೆಯು (ರಕಾರ) ಹುಟ್ಟುವ ಸ್ಥಾನವನ್ನು ಒತ್ತಿ ಉಚ್ಚರಿಸುವುದರಿಂದ 'ಱ' ಕಾರವು (ಶಕಟರೇಫ) ಹುಟ್ಟುವುದು.
  ಹಳಗನ್ನಡ ವರ್ಣಮಾಲೆಯಲ್ಲಿ ಬಳಕೆಯಲ್ಲಿದ್ದ ಬಂಡಿ ಆಕಾರದ ' ಱ ' ಕಾರನ್ನು **'ಶಕಟ ರೇಫ'** ಎನ್ನವರು.
  ಉದಾ :– ಏಱ್ = ಗಾಯ, ಅಱೆ = ಕತ್ತರಿಸು, ಮೊಱೆ = ಗೋಳಾಟ, ತೊಱೆ = ಬಿಡು.
- **ಕನ್ನಡ ವರ್ಣಮಾಲೆಯಲ್ಲಿರುವ ದೇಶೀಯಾ ಅಕ್ಷರಗಳು** : 'ಎ, ಒ, ಱ, ೞ, ಳ' – ಎಂಬ ಐದು ಅಕ್ಷರಗಳನ್ನು ಕನ್ನಡ ವರ್ಣಮಾಲೆಯಲ್ಲಿರುವ 'ದೇಶೀಯಾ ಅಕ್ಷರಗಳು'.
  {**ವಿಶೇಷ ವಿಚಾರ** : ಸಂಸ್ಕೃತ ವರ್ಣಮಾಲೆಯನ್ನು ಆದರ್ಶವಾಗಿಟ್ಟುಕೊಂಡ ಕನ್ನಡ ವರ್ಣಮಾಲೆಯನ್ನು ಸೃಜಿಸಿರುವ ಪ್ರಾಚೀನ ವೈಯಾಕರಣಿಗಳು ಸಂಸ್ಕೃತ ವರ್ಣಮಾಲೆಯಲ್ಲಿ ಇಲ್ಲದ ಕನ್ನಡ ವರ್ಣಮಾಲೆಯಲ್ಲಿ ಸ್ವಾಭಾವಿಕವಾಗಿರುವ (ಸಹಜವಾಗಿರುವ) ದೇಶಭಾಷೆಯ ಅಕ್ಷರಗಳಿಗೆ 'ದೇಶೀಯಾಕ್ಷರಗಳು' ಎಂದು ಹೆಸರಿಟ್ಟರು. ಇವು ಕನ್ನಡ ವರ್ಣಮಾಲೆಯಲ್ಲಿ ಪ್ರಧಾನವಾಗಿವೆ.}

## ಕನ್ನಡ ವ್ಯಾಕರಣ ಪರಂಪರೆಯ ಹಿನ್ನೆಲೆಯಲ್ಲಿ ವರ್ಣಮಾಲೆಯು ಸ್ವರೂಪ

ಹಳಗನ್ನಡ ವೈಯಾಕರಣಿಗಳು ಕನ್ನಡ ಭಾಷೆಯ ವರ್ಣಮಾಲೆಗೆ ಸಂಸ್ಕೃತ ಭಾಷೆಯ ವರ್ಣಮಾಲೆಯನ್ನು ಆಧಾರವಾಗಿಟ್ಟುಕೊಂಡಿರುವುದು ಕಂಡುಬರುತ್ತದೆ. ಇವರೆಲ್ಲರೂ ಮೊದಲು ಸಂಸ್ಕೃತ ಭಾಷೆಯ ವರ್ಣಮಾಲೆಯನ್ನು ಹೇಳಿ, ಆನಂತರ ಕನ್ನಡ ಭಾಷೆಯ ವರ್ಣಮಾಲೆಗೆ ಅನಗತ್ಯವಾದ ಕೆಲವು ವರ್ಣಗಳನ್ನು ಕಳೆದು, ಸಂಸ್ಕೃತ ಭಾಷೆಯ ವರ್ಣಮಾಲೆಯಲ್ಲಿ ಇಲ್ಲದ ಕನ್ನಡ ಭಾಷೆಯ ವರ್ಣಮಾಲೆಗೆ ಅಗತ್ಯವಾದ ಕೆಲವು ವರ್ಣಗಳನ್ನು ಸೇರಿಸಿ, ಅಚ್ಚಗನ್ನಡ ವರ್ಣಮಾಲೆಯನ್ನು ನಿರೂಪಿಸುತ್ತಾರೆ.

- (ಅ) ಕ್ರಿ. ಶ. ಸು. 9 ನೆಯ ಶತಮಾನದಲ್ಲಿ ರಚಿತಗೊಂಡ ಶ್ರೀ ವಿಜಯನ 'ಕವಿರಾಜಮಾರ್ಗ' ಕೃತಿಯಲ್ಲಿ ಕನ್ನಡ ವರ್ಣಮಾಲೆಯ ಬಗೆಗೆ ಯಾವ ಪ್ರಸ್ತಾಪವು ಕಂಡುಬರುವುದಿಲ್ಲ.
- (ಆ) ಕ್ರಿ. ಶ. ಸು. 12 ನೆಯ ಶತಮಾನದಲ್ಲಿ ರಚಿತಗೊಂಡ ಎರಡನೆಯ ನಾಗವರ್ಮನ 'ಕರ್ಣಾಟಕ ಭಾಷಾ ಭೂಷಣ' ಮತ್ತು 'ಶಬ್ದಸ್ಮೃತಿ' ಎಂಬ ವ್ಯಾಕರಣ ಶಾಸ್ತ್ರ ಕೃತಿಗಳಲ್ಲಿ ಕನ್ನಡ ವರ್ಣಮಾಲೆಯಲ್ಲಿರಬೇಕಾದ ವರ್ಣಗಳ ಸಂಖ್ಯೆ 48 ಎಂದು ತಿಳಿಸಲಾಗಿದೆ.

  ಸ್ವರಗಳು : 12 – ಅ ಆ ಇ ಈ ಉ ಊ ಎ ಏ ಐ ಒ ಓ ಔ.
  ವರ್ಗೀಯ ವ್ಯಂಜನಗಳು: 25 – ಕ ಖ ಗ ಘ ಙ ಚ ಛ ಜ ಝ ಞ
  ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ
  ಅವರ್ಗೀಯ ವ್ಯಂಜನಗಳು : 09 – ಯ ರ ಲ ವ ಸ ಹ ಳ ಱ ೞ
  ಯೋಗವಾಹಗಳು : 02 – ೦ ಃ
  ಒಟ್ಟು ಅಕ್ಷರಗಳು : 48
  (ಗಮನಿಸಿ : ನಾವು ಈಗ ಬಳಸುತ್ತಿರುವ ಋ, ಶ, ಷ ಅಕ್ಷರಗಳು ಇಲ್ಲಿ ಕಂಡುಬರುವುದಿಲ್ಲ.)
- (ಇ) ಕ್ರಿ. ಶ. ಸು. 13 ನೆಯ ಶತಮಾನದಲ್ಲಿ ರಚಿತಗೊಂಡ ಕೇಶಿರಾಜನ 'ಶಬ್ದಮಣಿ ದರ್ಪಣ' ಎಂಬ ವ್ಯಾಕರಣ ಶಾಸ್ತ್ರ ಕೃತಿಗಳಲ್ಲಿ ಕನ್ನಡ ವರ್ಣಮಾಲೆಯಲ್ಲಿರಬೇಕಾದ ವರ್ಣಗಳ ಸಂಖ್ಯೆ 47 ಎಂದು ತಿಳಿಸಲಾಗಿದೆ.

  ಸ್ವರಗಳು : 12 – ಅ ಆ ಇ ಈ ಉ ಊ ಎ ಏ ಐ ಒ ಓ ಔ.
  ವರ್ಗೀಯ ವ್ಯಂಜನಗಳು: 25 – ಕ ಖ ಗ ಘ ಙ ಚ ಛ ಜ ಝ ಞ
  ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ
  ಅವರ್ಗೀಯ ವ್ಯಂಜನಗಳು : 09 – ಯ ರ ಲ ವ ಸ ಹ ಳ ಱ ೞ
  ಯೋಗವಾಹಗಳು : 01 – ೦
  ಒಟ್ಟು ಅಕ್ಷರಗಳು : 47
  (ಗಮನಿಸಿ : ನಾವು ಈಗ ಬಳಸುತ್ತಿರುವ ಋ, ಶ, ಷ ಮತ್ತು ವಿಸರ್ಗ ಅಕ್ಷರಗಳು ಇಲ್ಲಿ ಕಂಡುಬರುವುದಿಲ್ಲ.)
- (ಈ) ಕ್ರಿ. ಶ. ಸು. 17 ನೆಯ ಶತಮಾನದಲ್ಲಿ ರಚಿತಗೊಂಡ ಭಟ್ಟಾಕಳಂಕನ 'ಶಬ್ದಾನುಶಾಸನ' ಎಂಬ ವ್ಯಾಕರಣ ಶಾಸ್ತ್ರ ಕೃತಿಗಳಲ್ಲಿ ಕನ್ನಡ ವರ್ಣಮಾಲೆಯಲ್ಲಿರಬೇಕಾದ ವರ್ಣಗಳ ಸಂಖ್ಯೆ 64 ಎಂದು ತಿಳಿಸಲಾಗಿದೆ.

  ಸ್ವರಗಳು : 25 – ಅ ಆ ಆಽ ಇ ಈ ಈಽ ಉ ಊ ಊಽ
  ಋ ೠ ೠಽ ಌ ೡ ೡಽ ಎ ಏ ಏಽ ಐ ಐಽ
  ಒ ಓ ಓಽ ಔ ಔಽ
  ವರ್ಗೀಯ ವ್ಯಂಜನಗಳು: 25 – ಕ ಖ ಗ ಘ ಙ ಚ ಛ ಜ ಝ ಞ
  ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ
  ಅವರ್ಗೀಯ ವ್ಯಂಜನಗಳು : 10 – ಯ ರ ಲ ವ ಶ ಷ ಸ ಹ ಱ ೞ

ಯೋಗವಾಹಗಳು : 04 – ಂ ಃ Xk (ಜಿಹ್ವಾಮೂಲೀಯ), ಱ (ಉಪಧ್ಮಾನೀಯ)
ಒಟ್ಟು ಅಕ್ಷರಗಳು : 64

➢ **ವಿಶೇಷ ವಿಚಾರ :** ಕಂಠ್ಯ ವರ್ಣವಾದ ಕಕಾರದ ಹಿಂದೆ ಬರುವ ವಿಸರ್ಗಕ್ಕೆ 'ಜಿಹ್ವಾಮೂಲೀಯ' ಎಂದೂ, ಓಷ್ಠ್ಯ ವರ್ಣವಾದ ಪಕಾರದ ಹಿಂದೆ ಬರುವ ವಿಸರ್ಗಕ್ಕೆ 'ಉಪಧ್ಮಾನೀಯ' ಎಂದೂ ಹೆಸರು. ಜಿಹ್ವಾಮೂಲದಿಂದ ಹುಟ್ಟುವ ಧ್ವನಿ 'ಜಿಹ್ವಾಮೂಲೀಯ'. ಉಪಧ್ಮಾನದಿಂದ (ಕಡಿಮೆ ಉಸಿರಿನಿಂದ ಊದುವುದು) ಧ್ವನಿ 'ಉಪಧ್ಮಾನೀಯ'. ಅನುಸ್ವಾರ, ವಿಸರ್ಗ, ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯಗಳನ್ನು ವ್ಯಾಕರಣ ಶಾಸ್ತ್ರದಲ್ಲಿ 'ಯೋಗವಾಹಗಳು' ಎನ್ನುವರು. ಸಂಸ್ಕೃತ ವೈಯಾಕರಣಿ ಪಾಣಿನಿಯು ಇವುಗಳನ್ನು 'ಅಯೋಗವಾಹಗಳು' ಎಂದು ಹೇಳಿರುವನು. ಆತನ ಪ್ರಕಾರ 'ಅಯೋಗವಾಹಗಳು' ಎಂದರೆ ವರ್ಣಮಾಲೆಯಲ್ಲಿ ಸ್ಥಾನವನ್ನು ಪಡೆಯದೆ, ವರ್ಣಗಳಲ್ಲಿಯೂ ಅಂತರ್ಭಾವವನ್ನು ಹೊಂದದೆ, ಪ್ರಯೋಗ ಮಾತ್ರದಲ್ಲಿದ್ದು, ಶಬ್ದಗಳ ಸಾಧುತ್ವವನ್ನು ಬೋಧಿಸತಕ್ಕ ರೂಪಗಳು. ಈ ನಾಲ್ಕು ಅಯೋಗವಾಹಗಳಲ್ಲಿ ಅನುಸ್ವಾರ ಮತ್ತು ವಿಸರ್ಗಗಳು ಸ್ವರದ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಸ್ವರಗಳ ಗುಂಪಿಗೂ, ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯಗಳು ವ್ಯಂಜನಗಳ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ವ್ಯಂಜನಗಳ ಗುಂಪಿಗೂ ಸೇರಿಸಿ, ಮೂಲವರ್ಣಗಳು ಸ್ವರ ಮತ್ತು ವ್ಯಂಜನ ಎನ್ನುವ ಎರಡೇ ಪ್ರಭೇದವೆಂದು ಸಂಸ್ಕೃತ ವೈಯಾಕರಣಿಗಳು ಅಭಿಪ್ರಾಯ ಪಡುತ್ತಾರೆ.

➢ **(ಉ)** ಕ್ರಿ. ಶ. ಸು. 19 ನೆಯ ಶತಮಾನದಲ್ಲಿ ರಚಿತಗೊಂಡ ವ್ಯಾಕರಣ ಶಾಸ್ತ್ರ ಕೃತಿಗಳಲ್ಲಿ ಕನ್ನಡ ವರ್ಣಮಾಲೆಯಲ್ಲಿರಬೇಕಾದ ವರ್ಣಗಳ ಸಂಖ್ಯೆ 52 ಎಂದು ತಿಳಿಸಲಾಗಿದೆ.

ಸ್ವರಗಳು : 14 – ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ.
ವರ್ಗೀಯ ವ್ಯಂಜನಗಳು: 25 – ಕ ಖ ಗ ಘ ಙ ಚ ಛ ಜ ಝ ಞ
ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ
ಅವರ್ಗೀಯ ವ್ಯಂಜನಗಳು : 11 – ಯ ರ ಲ ವ ಶ ಷ ಸ ಹ ಳ ಱ ೞ
ಯೋಗವಾಹಗಳು : 02 – ಂ ಃ
ಒಟ್ಟು ಅಕ್ಷರಗಳು : 52

➢ **(ಊ)** ಕ್ರಿ. ಶ. ಸು. 20 ನೆಯ ಶತಮಾನದಲ್ಲಿ ರಚಿತಗೊಂಡ ವ್ಯಾಕರಣ ಶಾಸ್ತ್ರ ಕೃತಿಗಳಲ್ಲಿ ಕನ್ನಡ ವರ್ಣಮಾಲೆಯಲ್ಲಿರಬೇಕಾದ ವರ್ಣಗಳ ಸಂಖ್ಯೆ 50 ಎಂದು ತಿಳಿಸಲಾಗಿದೆ.

ಸ್ವರಗಳು : 14 – ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ.
ವರ್ಗೀಯ ವ್ಯಂಜನಗಳು: 25 – ಕ ಖ ಗ ಘ ಙ ಚ ಛ ಜ ಝ ಞ
ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ
ಅವರ್ಗೀಯ ವ್ಯಂಜನಗಳು : 09 – ಯ ರ ಲ ವ ಶ ಷ ಸ ಹ ಳ
ಯೋಗವಾಹಗಳು : 02 – ಂ ಃ
ಒಟ್ಟು ಅಕ್ಷರಗಳು : 50

➢ **(ಋ)** ಕ್ರಿ. ಶ. ಸು. 21 ನೆಯ ಶತಮಾನದಲ್ಲಿ ರಚಿತಗೊಂಡ ವ್ಯಾಕರಣ ಶಾಸ್ತ್ರ ಕೃತಿಗಳಲ್ಲಿ ಕನ್ನಡ ವರ್ಣಮಾಲೆಯಲ್ಲಿರಬೇಕಾದ ವರ್ಣಗಳ ಸಂಖ್ಯೆ 49 ಎಂದು ತಿಳಿಸಲಾಗಿದೆ.

ಸ್ವರಗಳು : 13 – ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ.
ವರ್ಗೀಯ ವ್ಯಂಜನಗಳು: 25 – ಕ ಖ ಗ ಘ ಙ ಚ ಛ ಜ ಝ ಞ
ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ
ಅವರ್ಗೀಯ ವ್ಯಂಜನಗಳು : 09 – ಯ ರ ಲ ವ ಶ ಷ ಸ ಹ ಳ
ಯೋಗವಾಹಗಳು : 02 – ಂ ಃ
ಒಟ್ಟು ಅಕ್ಷರಗಳು : 49

➢ **(ಎ)** ಕ್ರಿ. ಶ. ಸು. 21 ನೆಯ ಶತಮಾನದಲ್ಲಿ ರಚಿತಗೊಂಡ ಭಾಷಾ ವಿಜ್ಞಾನ ಆಧಾರಿತ ವ್ಯಾಕರಣ ಶಾಸ್ತ್ರ ಕೃತಿಗಳಲ್ಲಿ ಕನ್ನಡ ವರ್ಣಮಾಲೆಯಲ್ಲಿರಬೇಕಾದ ವರ್ಣಗಳ ಸಂಖ್ಯೆ 32 ಎಂದು ತಿಳಿಸಲಾಗಿದೆ.

ಸ್ವರಗಳು : 10 – ಅ ಆ ಇ ಈ ಉ ಊ ಎ ಏ ಒ ಓ
ವರ್ಗೀಯ ವ್ಯಂಜನಗಳು: 13 – ಕ ಗ ಚ ಜ ಟ ಡ ಣ ತ ದ ನ ಪ ಬ ಮ
ಅವರ್ಗೀಯ ವ್ಯಂಜನಗಳು : 08 – ಯ ರ ಲ ವ ಶ ಸ ಹ ಳ

ಯೋಗವಾಹಗಳು : 01 – ಂ
ಒಟ್ಟು ಅಕ್ಷರಗಳು : 32

**ಈ ಮಾದರಿಯ ಪ್ರಶ್ನೆಗಳಿಗೆ ಉತ್ತರ ಬರೆದು ಅಭ್ಯಾಸ ಮಾಡಿರಿ.**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಬರೆಯಿರಿ.**

1. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ;

(ಎ) ಐದು (ಬಿ) ಒಂಬತ್ತು

(ಸಿ) ಹತ್ತು (ಡಿ) ಹದಿಮೂರು

2. ಇವುಗಳಲ್ಲಿ ವಿಜಾತಿ ಸಂಯುಕ್ತಾಕ್ಷರವಿರುವ ಪದವಿದು:

(ಎ) ಅಪ್ಪಣೆ (ಬಿ) ರಕ್ಷಣೆ

(ಸಿ) ಮಕ್ಕಳು (ಡಿ) ನಮ್ಮೂರು

3. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ;

(ಎ) ಒಂಬತ್ತು (ಬಿ) ಹದಿಮೂರು

(ಸಿ) ಇಪ್ಪತ್ತೈದು (ಡಿ) ನಲವತ್ತೊಂಬತ್ತು

4. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯಾಕ್ಷರಗಳ ಸಂಖ್ಯೆ:

(ಎ) ಒಂಬತ್ತು (ಬಿ) ಹತ್ತು

(ಸಿ) ಇಪ್ಪತ್ತೈದು (ಡಿ) ಏಳು

5. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ :

(ಎ) ಹದಿಮೂರು (ಬಿ) ಐದು

(ಸಿ) ಇಪ್ಪತ್ತೈದು (ಡಿ) ಹತ್ತು

6. ಕನ್ನಡ ವರ್ಣಮಾಲೆಯ ಪ್ರತಿ ವರ್ಗದ ಪಂಚಮಾಕ್ಷರಗಳನ್ನು ಹೀಗೆಂದು ಕರೆಯುತ್ತಾರೆ :

(ಎ) ಸ್ವರ (ಬಿ) ಅಲ್ಪಪ್ರಾಣ

(ಸಿ) ಮಹಾಪ್ರಾಣ (ಡಿ) ಅನುನಾಸಿಕ

7. ಫ, ಝ, ಢ, ಧ, ಭ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ;

(ಎ) ದೀರ್ಘಸ್ವರಾಕ್ಷರಗಳು (ಬಿ) ಅಲ್ಪಪ್ರಾಣಾಕ್ಷರಗಳು

(ಸಿ) ಮಹಾಪ್ರಾಣಾಕ್ಷರಗಳು (ಡಿ) ಅನುನಾಸಿಕಾಕ್ಷರಗಳು

8. ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹ ಅಕ್ಷರಗಳ ಸಂಖ್ಯೆ:

(ಎ) ಹದಿಮೂರು (ಬಿ) ಆರು

(ಸಿ) ಎರಡು (ಡಿ) ಒಂಬತ್ತು

9. ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಹೀಗೆನ್ನುವರು:

(ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ

(ಸಿ) ಪ್ಲುತಸ್ವರ (ಡಿ) ಸಪ್ತಸ್ವರ

10. ಕನ್ನಡ ವರ್ಣಮಾಲೆಯಲ್ಲಿ ಪ್ರತಿ ವರ್ಗದ ಎರಡು ಮತ್ತು ನಾಲ್ಕನೆಯ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ.

(ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು

(ಸಿ) ಅನುನಾಸಿಕಾಕ್ಷರಗಳು (ಡಿ) ವ್ಯಂಜನಗಳು

11. ಇವುಗಳಲ್ಲಿ ಸಜಾತಿ ಸಂಯುಕ್ತಾಕ್ಷರವಿರುವ ಪದವಿದು:

(ಎ) ಆತ್ಮಾಭಿಮಾನ (ಬಿ) ಧರ್ಮಾಮೃತ

(ಸಿ) ಸ್ವಾಭಿಮಾನ (ಡಿ) ದಮ್ಮಪದ

12. ಕನ್ನಡ ವರ್ಣಮಾಲೆಯಲ್ಲಿ ಪ್ರತಿ ವರ್ಗದ ಒಂದು ಮತ್ತು ಮೂರನೆಯ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ.

(ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು

(ಸಿ) ಅನುನಾಸಿಕಾಕ್ಷರಗಳು (ಡಿ) ವ್ಯಂಜನಗಳು

13. ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಹೀಗೆನ್ನುವರು:

(ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ

(ಸಿ) ಪ್ಲುತಸ್ವರ (ಡಿ) ಸಪ್ತಸ್ವರ

14. ಮೂರು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಹೀಗೆನ್ನುವರು:

(ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ

(ಸಿ) ಪ್ಲುತಸ್ವರ (ಡಿ) ಸಪ್ತಸ್ವರ

15. ಗ, ಜ, ಡ, ದ, ಬ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ;

(ಎ) ದೀರ್ಘಸ್ವರಾಕ್ಷರಗಳು (ಬಿ) ಅಲ್ಪಪ್ರಾಣಾಕ್ಷರಗಳು

(ಸಿ) ಮಹಾಪ್ರಾಣಾಕ್ಷರಗಳು (ಡಿ) ಅನುನಾಸಿಕಾಕ್ಷರಗಳು

16. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಾಕ್ಷರಗಳ ಸಂಖ್ಯೆ :

(ಎ) ಹದಿಮೂರು (ಬಿ) ಐದು

(ಸಿ) ಇಪ್ಪತ್ತೈದು (ಡಿ) ಹತ್ತು

17. ಹಳಗನ್ನಡ ವೈಯಾಕರಣಿ ಕೇಶಿರಾಜನ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳ ಸಂಖ್ಯೆ;

(ಎ) 52 (ಬಿ) 47

(ಸಿ) 50 (ಡಿ) 32

18. ಆಧುನಿಕ ಭಾಷಾ ವಿಜ್ಞಾನಿಗಳ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿರಬೇಕಾದ ಅಕ್ಷರಗಳ ಸಂಖ್ಯೆ;

(ಎ) 52 (ಬಿ) 47

(ಸಿ) 50 (ಡಿ) 32

19. ಕಂಠದ ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು ಹೀಗೆನ್ನುವರು:

(ಎ) ಕಂಠ್ಯ ವರ್ಣಗಳು (ಬಿ) ಕಂಠೌಷ್ಠ್ಯ ವರ್ಣಗಳು

(ಸಿ) ಸಂಧ್ಯಕ್ಷರಗಳು (ಡಿ) ಕಂಠತಾಲವ್ಯ ವರ್ಣಗಳು

20. ಎರಡು ಅಥವಾ ಮೂರು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸೇರಿ, ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು
ಹೀಗೆನ್ನುವರು;

(ಎ) ಮೂಲಾಕ್ಷರಗಳು (ಬಿ) ಗುಣಿತಾಕ್ಷರಗಳು

(ಸಿ) ಸಂಯುಕ್ತಾಕ್ಷರಗಳು (ಡಿ) ಸಂಧ್ಯಕ್ಷರಗಳು

21. ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳನ್ನು ಹೀಗೆನ್ನುವರು;

(ಎ) ಮೂಲಾಕ್ಷರಗಳು (ಬಿ) ಗುಣಿತಾಕ್ಷರಗಳು

(ಸಿ) ಸಂಯುಕ್ತಾಕ್ಷರಗಳು (ಡಿ) ಸಂಧ್ಯಕ್ಷರಗಳು

22. ಕನ್ನಡ ವರ್ಣಮಾಲೆಯಲ್ಲಿರುವ ಏ, ಐ, ಓ, ಮತ್ತು ಔ ಅಕ್ಷರಗಳನ್ನು ಹೀಗೆನ್ನುವರು.

(ಎ) ಮೂಲಾಕ್ಷರಗಳು (ಬಿ) ಗುಣಿತಾಕ್ಷರಗಳು

(ಸಿ) ಸಂಯುಕ್ತಾಕ್ಷರಗಳು (ಡಿ) ಸಂಧ್ಯಕ್ಷರಗಳು

23. ಕನ್ನಡ ವರ್ಣಮಾಲೆಯಲ್ಲಿರುವ ಎ, ಒ, ಱ, ೞ, ಳ – ಎಂಬ ಐದು ಅಕ್ಷರಗಳನ್ನು ಹೀಗೆನ್ನುವರು;

(ಎ) ಮೂಲಾಕ್ಷರಗಳು (ಬಿ) ಗುಣಿತಾಕ್ಷರಗಳು

(ಸಿ) ದೇಶೀಯಾ ಅಕ್ಷರಗಳು (ಡಿ) ಸಂಧ್ಯಕ್ಷರಗಳು

24. ಅಕಾರದಿಂದ ಳಕಾರದವರೆಗಿನ ಅಕ್ಷರಗಳಿಗೆ ಹೀಗೆನ್ನುವರು:

(ಎ) ಮೂಲಾಕ್ಷರಗಳು (ಬಿ) ಗುಣಿತಾಕ್ಷರಗಳು

(ಸಿ) ಸಂಯುಕ್ತಾಕ್ಷರಗಳು (ಡಿ) ಸಂಧ್ಯಕ್ಷರಗಳು

25. ಯಾವುದೇ ವರ್ಣಗಳ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚಾರವಾಗತಕ್ಕ ವರ್ಣಗಳಿಗೆ ಹೀಗೆನ್ನುವರು:

(ಎ) ಸ್ವರಗಳು (ಬಿ) ವ್ಯಂಜನಗಳು

(ಸಿ) ಯೋಗವಾಹಗಳು (ಡಿ) ಅನುನಾಸಿಕಗಳು

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

# ಕನ್ನಡ ವ್ಯಾಕರಣ

## ನಾಮಪದಗಳು

- ವ್ಯಾಕರಣದ ಪರಿಭಾಷೆಯಲ್ಲಿ ಪದಗಳನ್ನು ಮುಖ್ಯವಾಗಿ ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ.
  1. ನಾಮಪದಗಳು : ಹೆಸರನ್ನು ಸೂಚಿಸುವ ಪದಗಳು ನಾಮಪದಗಳು.
  2. ಕ್ರಿಯಾಪದಗಳು : ಕೆಲಸವನ್ನು ಸೂಚಿಸುವ ಪದಗಳು ಕ್ರಿಯಾಪದಗಳು.
  3. ಅವ್ಯಯಗಳು : ಯಾವುದೇ ಸಂದರ್ಭದಲ್ಲಿಯೂ ಬದಲಾಗದ ಪದಗಳು ಅವ್ಯಯಗಳು.
- **ಪದಗಳು :** ಪ್ರತ್ಯಯಗಳಿಂದ ಕೂಡಿದ ಶಬ್ದಗಳನ್ನು **'ಪದಗಳು'** ಎನ್ನುವರು.
  ಪ್ರಕೃತಿ + ಪ್ರತ್ಯಯ = ಪದ
- **ನಾಮಪದಗಳು :** ವಸ್ತುಗಳ ನಾಮವನ್ನು (ಹೆಸರನ್ನು) ಸೂಚಿಸುವ ಪದಗಳು ನಾಮಪದಗಳು. ನಾಮ ಪ್ರಕೃತಿ ಅಥವಾ ಪ್ರಾತಿಪದಿಕಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ಆಗುವ ಪದಗಳನ್ನು **'ನಾಮಪದಗಳು'** ಎನ್ನುವರು.
  **ನಾಮ ಪ್ರಕೃತಿ ಅಥವಾ ಪ್ರಾತಿಪದಿಕ + ವಿಭಕ್ತಿ ಪ್ರತ್ಯಯಗಳು = ನಾಮಪದಗಳು**
- **ನಾಮಪ್ರಕೃತಿ / ಪ್ರಾತಿಪದಿಕ :** ನಾಮಪದದ ಮೂಲರೂಪವಾದ ಹಾಗೂ ಕ್ರಿಯೆಯ ಅರ್ಥವನ್ನು ಕೊಡದಿರುವ ಶಬ್ದವನ್ನು **'ನಾಮಪ್ರಕೃತಿ / ಪ್ರಾತಿಪದಿಕ'** ಎನ್ನುವರು.
- **ಪ್ರಾತಿಪದಿಕ (ಲಿಂಗ) :** ಅರ್ಥವಿರುವ ಆದರೆ ಪ್ರತ್ಯಯವು, ಧಾತುವು ಅಲ್ಲದ ಶಬ್ದವನ್ನು **ಪ್ರಾತಿಪದಿಕ** ಎನ್ನುವರು.
  ವಿಭಕ್ತಿ ಪ್ರತ್ಯಯವು ಸೇರುವುದಕ್ಕೆ ಸಾಧ್ಯವಾದ ರೂಪವನ್ನು ಲಿಂಗ ಎನ್ನುವರು.
  ಕ್ರಿಯಾವಾಚಕವಲ್ಲದ, ಸಪ್ತವಿಭಕ್ತಿಗಳನ್ನು ಹೊಂದದ, ಮತ್ತು ಅರ್ಥವಿರುವುದು ಲಿಂಗ (ಪ್ರಾತಿಪದಿಕ).
- **ವಿಶೇಷ ವಿಚಾರ :** 'ಲಿಂಗ' ಎನ್ನುವುದು ನಾಮಪದದ ಸ್ವರೂಪವನ್ನು ವಿವರಿಸುವ ಒಂದು ಪಾರಿಭಾಷಿಕ ಪದ. ಸಂಸ್ಕೃತ ಮತ್ತು ಕನ್ನಡ ವೈಯಾಕರಣಿಗಳು "ಧಾತುವಲ್ಲದ ಅರ್ಥಸಹಿತವಾದ ಹಾಗೂ ಪ್ರತ್ಯಯರಹಿತವಾದ ರೂಪಕ್ಕೆ ಲಿಂಗ" ಎನ್ನುವರು. ಲಿಂಗವೆಂಬ ಪಾರಿಭಾಷಿಕ ಪದಕ್ಕೆ ಸಂವಾದಿಯಾಗಿ 'ಪ್ರಾತಿಪದಿಕ' ಎಂಬುದನ್ನು ಬಳಸಲಾಗುವುದು. ನಾಮಪದದ ಮೂಲರೂಪವಾದ 'ನಾಮಪ್ರಕೃತಿ'ಗೂ ಲಿಂಗ/ಪ್ರಾತಿಪದಿಕಕ್ಕೂ ಸಾಕಷ್ಟು ಅರ್ಥ ವ್ಯತ್ಯಾಸವಿದೆ. ನಾಮಪ್ರಕೃತಿ ಲಿಂಗದ ಒಂದು ಭೇದವೇ ಹೊರತು ಅದಕ್ಕೆ ಸಂವಾದಿಯಾದದ್ದಲ್ಲ. ನಾಮಪ್ರಕೃತಿಯು ಅತ್ಯಂತ ಕನಿಷ್ಠ ಪ್ರಮಾಣದ ಅರ್ಥ ಸಹಿತವಾದ ಘಟಕ. ಆಧುನಿಕ ಭಾಷಾ ವಿಜ್ಞಾನಿಗಳು ಇದನ್ನು 'ಆಕೃತಿಮಾ' ಎನ್ನುವರು. ನಾಮಪ್ರಕೃತಿಯು ಅತ್ಯಂತ ಕನಿಷ್ಠ ಪ್ರಮಾಣದ ಅರ್ಥಸಹಿತವಾದ ಏಕೈಕ ಪ್ರಕೃತಿ. ಪ್ರಾತಿಪದಿಕವು ಸಹಜ ಹಾಗೂ ನಿಷ್ಪನ್ನ ನಾಮಪ್ರಕೃತಿಯಾಗಿರುತ್ತದೆ. ಸಹಜ ನಾಮಪ್ರಕೃತಿಯು ಏಕೈಕ ಪ್ರಕೃತಿಯುಳ್ಳದಾದರೆ, ನಿಷ್ಪನ್ನ ನಾಮಪ್ರಕೃತಿಯು ಒಂದಕ್ಕಿಂತ ಹೆಚ್ಚು ಪ್ರಕೃತಿ ನಿಪ್ಪನ್ನ ನಾಮಪ್ರಕೃತಿ ಇಲ್ಲವೇ ಪ್ರತ್ಯಯದಿಂದ ಕೂಡಿರುತ್ತದೆ. ಈ ಸಹಜ ಮತ್ತು ನಿಷ್ಪನ್ನ ಪ್ರಕೃತಿಗಳಿಗೆ ನಾಮ ವಿಭಕ್ತಿ ಪ್ರತ್ಯಯಗಳನ್ನು ಸೇರಿಸುವುದರಿಂದ ನಾಮಪದಗಳು ಆಗುತ್ತವೆ. ನಾಮ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಲು ಅರ್ಹವಾದ ಸಹಜ ಮತ್ತು ನಿಷ್ಪನ್ನ ನಾಮಪ್ರಕೃತಿಗಳಿಗೆ 'ಲಿಂಗ' ಎನ್ನುವರು.

➢ **ಪ್ರಾತಿಪದಿಕದ** ಎರಡು ವಿಧಗಳು :

1. ಸಹಜ ನಾಮ ಪ್ರಕೃತಿಗಳು. 2. ಸಾಧಿತ (ನಿಷ್ಪನ್ನ) ನಾಮ ಪ್ರಕೃತಿಗಳು.

➢ **ಸಹಜ ನಾಮಪ್ರಕೃತಿಗಳು :** ಭಾಷೆಯಲ್ಲಿ ಸಹಜವಾಗಿರುವ ಅತ್ಯಂತ ಕನಿಷ್ಠ ಪ್ರಮಾಣದ ಅರ್ಥಸಹಿತವಾದ ಏಕೈಕ ಪ್ರಕೃತಿಯನ್ನು 'ನಾಮ ಪ್ರಕೃತಿ' ಎನ್ನುವರು. ಇದು ಮತ್ತೆ ವಿಭಜಿಸಲು ಸಾಧ್ಯವಿಲ್ಲದ ಒಂದು ಘಟಕ.

**ಉದಾಹರಣೆ :–** ಹೊಲ, ನೆಲ, ಮನೆ, ಮರ, ಕಲ್ಲು, ಮೂಡಣ, ಎರಡು, ದೊಡ್ಡ ಇತ್ಯಾದಿ.

➢ **ಸಾಧಿತ (ನಿಷ್ಪನ್ನ) ನಾಮಪ್ರಕೃತಿಗಳು :** ಎರಡು ಹಾಗೂ ಹೆಚ್ಚು ಸಹಜ ನಾಮಪ್ರಕೃತಿಗಳನ್ನು ಅರ್ಥಕ್ಕನುಗುಣವಾಗಿ ಸೇರಿ ಒಂದೇ ಶಬ್ದವಾಗಿರುವ, ಕೃತ್ ಮತ್ತು ತದ್ಧಿತ ಪ್ರತ್ಯಯಗಳು ಸೇರಿ ಆಗಿರುವ ಶಬ್ದವಾಗಿರುವ ಶಬ್ದಗಳನ್ನು 'ಸಾಧಿತ (ನಿಷ್ಪನ್ನ) ನಾಮಪ್ರಕೃತಿಗಳು' ಎನ್ನುವರು. ಇವುಗಳಲ್ಲಿ ಮೂರು ವಿಧಗಳಿವೆ. 1. ಸಮಾಸಗಳು 2. ಕೃದಂತಗಳು 3. ತದ್ಧಿತಾಂತಗಳು.

ಉದಾಹರಣೆ :

1. ಸಮಾಸಗಳು : ಅರಮನೆ, ಇಮ್ಮಾವು, ನಾಲ್ವಡಿ, ಮುಂಗೈ, ಕುಡಿಹುಬ್ಬು, ನೆಯ್ದುವಸ್ತ್ರ, ಕೈಮುಗಿ ಇತ್ಯಾದಿ.
2. ಕೃದಂತಗಳು : ಮಾಡಿದ, ಮಾಡುವ, ಮಾಡದ, ಮಾಟ ಇತ್ಯಾದಿ.

➢ **ವಿಶೇಷ ವಿಚಾರ :** ಭೂತಕಾಲ ಮತ್ತು ಭವಿಷ್ಯತ್ ಕಾಲದ ಕ್ರಿಯಾಪದಗಳಲ್ಲಿ ಸೇರಿರುವ ಪ್ರಥಮ ಪುರುಷದ ಆಖ್ಯಾತ ಪ್ರತ್ಯಯಗಳನ್ನು ಕಳೆದರೆ (ತೆಗೆದರೆ) ಕೃದಂತ (ಕೃಲ್ಲಿಂಗ) ಗಳಾಗುತ್ತವೆ.

ಉದಾಹರಣೆ :

ನಲಿದ – ನಲಿದಂ = ನಲಿದ + ~~ಅಮ್~~

ಬೇಡುವ – ಬೇಡುವಂ = ಬೇಡುವ + ~~ಅಮ್~~

ವರ್ತಮಾನ ಕಾಲ, ಮಧ್ಯಮ ಪುರುಷ, ಉತ್ತಮ ಪುರುಷ, ವಿಧ್ಯರ್ಥಕ ಸಂಭಾವನಾರ್ಥಕ ಕ್ರಿಯಾಪದಗಳು ಕೃದಂತ (ಕೃಲ್ಲಿಂಗ) ಗಳಾಗುವುದಿಲ್ಲ.

3. ತದ್ಧಿತಾಂತಗಳು : ಹಣವಂತ, ಕನ್ನಡತಿ, ಸಿರಿವಂತ, ಸಿರಿತನ ಇತ್ಯಾದಿ.

➢ **ನಾಮ ವಾಚಕಗಳು :** ವ್ಯಕ್ತಿ, ಪ್ರಾಣಿ, ಗಿಡಮರ ಮತ್ತು ವಸ್ತುಗಳನ್ನು ಗುರುತಿಸುವ, ಅವುಗಳ ಗುಣ ಸ್ವಭಾವಗಳನ್ನು ಹೇಳುವ ಹಾಗೂ ಕಾಲ, ಸ್ಥಾನ, ಅಳತೆ, ತೂಕ, ಸಂಖ್ಯೆಗಳನ್ನು ಸೂಚಿಸುವ ವ್ಯವಹಾರದ ಹೆಸರುಗಳನ್ನು **'ನಾಮವಾಚಕಗಳು'** ಎನ್ನುವರು.

➢ **ನಾಮವಾಚಕದ ವಿಧಗಳು :**

1. ವಸ್ತು ವಾಚಕಗಳು 2. ಗುಣವಾಚಕಗಳು 3. ಸಂಖ್ಯಾ ವಾಚಕಗಳು
4. ಸಂಖ್ಯೇಯ ವಾಚಕಗಳು 5. ಪರಿಮಾಣ ವಾಚಕಗಳು 6. ಪ್ರಕಾರ ವಾಚಕಗಳು
7. ದಿಗ್ವಾಚಕಗಳು 8. ಭಾವನಾಮಗಳು 9. ಸರ್ವನಾಮಗಳು

➢ **ವಸ್ತು ವಾಚಕಗಳು :** ವಸ್ತುಗಳ ಹೆಸರನ್ನು ಸೂಚಿಸುವ ನಾಮ ಪ್ರಕೃತಿಗಳನ್ನು **'ವಸ್ತು ವಾಚಕ'** ಎನ್ನುವರು.

ಉದಾಹರಣೆ :

ಚೇತನವುಳ್ಳವು : ಗಂಡಸು, ರಾಮು, ಹುಲಿ, ಹಸು, ಮುದುಕಿ ಇತ್ಯಾದಿ.

ಅಚೇನವಾದವು : ಕಲ್ಲು, ನೆಲ, ಹಣ್ಣು, ಬೆಟ್ಟ, ನೀರು ಇತ್ಯಾದಿ.

➢ **ವಸ್ತು ವಾಚಕದ ವಿಧಗಳು :** ವಸ್ತು ವಾಚಕಗಳಲ್ಲಿ **ಮೂರು** ವಿಧಗಳಿವೆ.

1. ಅಂಕಿತನಾಮ 2. ರೂಢನಾಮ 3. ಅನ್ವರ್ಥನಾಮ

➢ **ಅಂಕಿತನಾಮ :** ಪ್ರತ್ಯೇಕ ವ್ಯವಹಾರಕ್ಕಾಗಿ ಅವರವರ ಇಷ್ಟಾನುಸಾರ ಇಟ್ಟುಕೊಂಡ ಹೆಸರುಗಳನ್ನು **'ಅಂಕಿತನಾಮ'** ಎನ್ನುವರು.

ಉದಾಹರಣೆ : ಸಹದೇವ, ಧರ್ಮರಾಯ, ರಾಹುಲ, ಕಮಲಾಕ್ಷ, ಶಿವ, ಶಂಕರ ಇತ್ಯಾದಿ.

- **ರೂಢನಾಮ :** ರೂಢಿಯಿಂದ ಹೇಳಿಕೊಂಡು ಬಂದ ಹೆಸರುಗಳನ್ನು **'ರೂಢನಾಮ'** ಎನ್ನುವರು.
  ಉದಾಹರಣೆ : ನೆಲ, ಜಲ, ಪೊಲ, ಚಲ, ನದಿ, ಪರ್ವತ, ಊರು, ಮನುಷ್ಯ, ದೇಶ ಇತ್ಯಾದಿ.
- **ಅನ್ವರ್ಥನಾಮ :** ವ್ಯಕ್ತಿಯ ಗುಣ ಸ್ವಭಾವಾದಿ ವಿಶೇಷವಾದ ಅರ್ಥಗಳನ್ನು ತಿಳಿಸುವ ಹೆಸರುಗಳನ್ನು **'ಅನ್ವರ್ಥನಾಮ'** ಎನ್ನುವರು.
  ಉದಾಹರಣೆ : ಹಿಳ್ಳೆಗಾಲ, ನಿಡುಮೂಗ, ಕುಸಿಗೊರಲ, ಸವಟೆವಾಯ, ಗುಟಿಗಣ್ಣ, ಹಜೆದಲೆಯ, ವ್ಯಾಪಾರಿ, ವಿದ್ವಾಂಸ, ವಿಜ್ಞಾನಿ, ಪೂಜಾರಿ ಇತ್ಯಾದಿ.
- **ಗುಣವಾಚಕಗಳು :** ನಾಮವಾಚಕಗಳ ಗುಣಲಕ್ಷಣಗಳನ್ನು ವರ್ಣಿಸುವ ಪದಗಳನ್ನು **'ಗುಣವಾಚಕ'** ಎನ್ನುವರು.
  ಉದಾಹರಣೆ : ಒಳ್ಳೆಯ, ಕೆಟ್ಟ, ದೊಡ್ಡದು, ಹಳೆಯ/ಹಳತು, ಒಳಿತು/ಒಳ್ಳಿತ್ತು, ಮೆಲ್ಲಿತು/ಮೆಲ್ಲಿತ್ತು, ಕಡಿದು, ನಿಡಿದು, ಕರಿ/ಕರಿದು, ಬಿಳಿ/ಬಿಳಿದು ಇತ್ಯಾದಿ
- **ಸಂಖ್ಯಾವಾಚಕಗಳು :** ಸಂಖ್ಯೆಯನ್ನು ಸೂಚಿಸುವ ಪದಗಳನ್ನು **'ಸಂಖ್ಯಾ ವಾಚಕ'** ಎನ್ನುವರು.
  ಉದಾಹರಣೆ : ಹನ್ನೆರಡು, ಐವತ್ತು, ಎಂಬತ್ತು ಇತ್ಯಾದಿ
- **ಸಂಖ್ಯೇಯ ವಾಚಕಗಳು :** ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಪದಗಳನ್ನು **ಸಂಖ್ಯೇಯ ವಾಚಕಗಳು** ಎನ್ನುವರು.
  ಉದಾಹರಣೆ : ಹನ್ನೆರಡನೆಯ, ಎಂಬತ್ತನೆಯ, ಮೂವರು, ನಾಲ್ಕನೆಯ ಇತ್ಯಾದಿ.
- **ಪರಿಮಾಣ ವಾಚಕಗಳು : ವಸ್ತುವಿನ** ಪ್ರಮಾಣವನ್ನು (ಅಳತೆ, ಪರಿಮಾಣ, ಗಾತ್ರ) ಸೂಚಿಸುವ ಪದಗಳನ್ನು **'ಪರಿಮಾಣ ವಾಚಕ'** ಎನ್ನುವರು.
  ಉದಾಹರಣೆ : ಅಷ್ಟು, ಇಷ್ಟು, ಎಷ್ಟು, ಹಲವು, ಕೆಲವು, ಅನಿತು, ಇನಿತು ಇತ್ಯಾದಿ
- **ಪ್ರಕಾರ ವಾಚಕಗಳು :** ರೀತಿಯನ್ನು ಸೂಚಿಸುವ ಪದಗಳನ್ನು **'ಪ್ರಕಾರ ವಾಚಕ'** ಎನ್ನುವರು.
  ಉದಾಹರಣೆ : ಅಂಥ. ಇಂಥ, ಎಂಥ, ಇಂತಹ, ಎಂತಹದು, ಹಾಗೆ, ಹೀಗೆ ಹೇಗೆ ಇತ್ಯಾದಿ
- **ದಿಗ್ವಾಚಕಗಳು :** ದಿಕ್ಕುಗಳನ್ನು ಸೂಚಿಸು ಪದಗಳನ್ನು **'ದಿಗ್ವಾಚಕಗಳು'** ಎನ್ನುವರು
  ಉದಾಹರಣೆ : ಮೂಡಣ, ತೆಂಕಣ. ಪಡುವಣ, ಈಶಾನ್ಯ, ಆಗ್ನೇಯ, ಪೂರ್ವ, ಮೇಲೆ, ಕೆಳಗೆ, ಆಚೆ ಈಚೆ ಇತ್ಯಾದಿ
- **ಭಾವನಾಮಗಳು :** ಒಂದು ವಸ್ತುವಿನ ಗುಣಸ್ವಭಾವಗಳನ್ನು ತಿಳಿಸುವ ನಾಮವಾಚಕಗಳನ್ನು **'ಭಾವನಾಮಗಳು'** ಎನ್ನುವರು.
  ಉದಾಹರಣೆ : ಕಪ್ಪು, ಹಿರಿಮೆ, ಆಟ, ನೋಟ, ಬಿಳಿಪು, ಬಡತನ, ಸಿರಿತನ ಇತ್ಯಾದಿ.
- **ಸರ್ವನಾಮಗಳು :** ನಾಮಪದಗಳ ಸ್ಥಾನದಲ್ಲಿ ಅವುಗಳ ಪ್ರತಿನಿಧಿಯಾಗಿ ಬಳಸುವ ಪದಗಳನ್ನು **'ಸರ್ವನಾಮಗಳು'** ಎನ್ನುವರು.
- **ಸರ್ವನಾಮಗಳ ನಾಲ್ಕು** ವಿಧಗಳು :
  1. ಪುರುಷಾರ್ಥಕ ಸರ್ವನಾಮಗಳು
  2. ಆತ್ಮಾರ್ಥಕ ಸರ್ವನಾಮಗಳು
  3. ಪ್ರಶ್ನಾರ್ಥಕ ಸರ್ವನಾಮಗಳು
  4. ನಿರ್ದೇಶನಾತ್ಮಕ ಸರ್ವನಾಮಗಳು

➢ **ಪುರುಷಾರ್ಥಕ ಸರ್ವನಾಮಗಳು :**

| **ವಿವರಣೆ** | **ಪುರುಷ** | **ಏಕವಚನ** | **ಬಹುವಚನ** |
|---|---|---|---|
| ಮಾತನಾಡುವ ವ್ಯಕ್ತಿ | ಉತ್ತಮ ಪುರುಷ | ನಾನು | ನಾವು |
| ಯಾರೊಡನೆ ಮಾತನಾಡುತ್ತಿರುವೆನೋ ಆ ವ್ಯಕ್ತಿ | ಮಧ್ಯಮ ಪುರುಷ | ನೀನು | ನೀವು |
| ಯಾರ ಬಗೆಗೆ ಮಾತನಾಡುತ್ತಿರುವೆನೋ ಆ ವ್ಯಕ್ತಿ | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀ ಲಿಂಗ<br>ನಪುಂಸಕ ಲಿಂಗ | <br>ಅವನು/ಇವನು<br>ಅವಳು/ಇವಳು<br>ಅದು/ಇದು | <br>ಅವರು/ಇವರು<br>ಅವರು/ಇವರು<br>ಅವು/ಇವು |

➢ **ಆತ್ಮಾರ್ಥಕ ಸರ್ವನಾಮಗಳು :** ವ್ಯಕ್ತಿ ಅಥವಾ ವಸ್ತುವಿನ ಸ್ವಂತಕ್ಕೆ ಅನ್ವಯಿಸಬಹುದಾದ ಪ್ರಥಮ ಪುರುಷ ಸರ್ವನಾಮ ಪದಗಳನ್ನು **'ಆತ್ಮಾರ್ಥಕ ಸರ್ವನಾಮಗಳು'** ಎನ್ನುವರು.
ಏಕವಚನ : ತಾನು, ತನ್ನ. ಬಹುವಚನ : ತಾವು, ತಮ್ಮ.

➢ **ಪ್ರಶ್ನಾರ್ಥಕ ಸರ್ವನಾಮಗಳು :** ವ್ಯಕ್ತಿ, ವಸ್ತುಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳುವಾಗ ಬಳಸುವ ಪದಗಳನ್ನು 'ಪ್ರಶ್ನಾರ್ಥಕ ಸರ್ವನಾಮಗಳು' ಎನ್ನುವರು. ಉದಾ : ಯಾರು, ಏನು, ಯಾವುದು, ಯಾವನು, ಯಾವಳು, ಯಾವುವು ಇತ್ಯಾದಿ

➢ **ನಿರ್ದೇಶಾತ್ಮಕ ಸರ್ವನಾಮಗಳು :** ವ್ಯಕ್ತಿ, ವಸ್ತುಗಳಿಗೆ ಸಂಬಂಧಪಟ್ಟಂತೆ ನಿರ್ದೇಶನ ನೀಡಲು ಬಳಸುವ ಪದಗಳನ್ನು 'ನಿರ್ದೇಶಾತ್ಮಕ ಸರ್ವನಾಮಗಳು' ಎನ್ನುವರು.
**ಉದಾಹರಣೆ :** ಆ, ಈ, ಆತ, ಆಕೆ, ಈತ, ಈಕೆ.

## ಕನ್ನಡದಲ್ಲಿ ಲಿಂಗ ವ್ಯವಸ್ಥೆ

- ಲಿಂಗಗಳಲ್ಲಿ ಮೂರು ವಿಧಗಳಿವೆ.
  1. ಪುಲ್ಲಿಂಗ 2. ಸ್ತ್ರೀಲಿಂಗ 3. ನಪುಂಸಕ ಲಿಂಗ
- **ಪುಲ್ಲಿಂಗ :** ಗಂಡಸು ಎಂಬ ಅರ್ಥವನ್ನು ಕೊಡುವ ಪದಗಳನ್ನು 'ಪುಲ್ಲಿಂಗ' ಎನ್ನುವರು.
  ಉದಾಹರಣೆ :– ಶಿವ, ಶಂಕರ, ರಾಮ, ಅರಸ, ರಾವಣ, ರಾಜ, ಶ್ಯಾಮ, ಗಿರೀಶ, ಅಪ್ಪ, ಚಿಕ್ಕಪ್ಪ, ದೊಡ್ಡಪ್ಪ, ಅಣ್ಣ, ತಮ್ಮ, ಮಗ, ಅಳಿಯ, ದುರ್ಜನ, ಸಜ್ಜನ, ಸುಜನ ಇತ್ಯಾದಿ.
- **ಸ್ತ್ರೀಲಿಂಗ :** ಹೆಂಗಸು ಎಂಬ ಅರ್ಥವನ್ನು ಕೊಡುವ ಪದಗಳನ್ನು 'ಸ್ತ್ರೀಲಿಂಗ' ಎನ್ನುವರು.
  ಉದಾಹರಣೆ :– ಪಾರ್ವತಿ, ಸರಸ್ವತಿ, ರೋಹಿಣಿ, ಭಾಮಿನಿ, ಅಮ್ಮ, ಚಿಕ್ಕಮ್ಮ, ದೊಡ್ಡಮ್ಮ, ಅಜ್ಜಿ, ಅಕ್ಕ, ತಂಗಿ, ಮಗಳು, ಸೊಸೆ ಇತ್ಯಾದಿ.
- **ನಪುಂಸಕ ಲಿಂಗ :** ಗಂಡಸು ಅಥವಾ ಹೆಂಗಸು ಎಂಬ ಅರ್ಥವನ್ನು ಕೊಡದ ಪದಗಳನ್ನು 'ನಪುಂಸಕ ಲಿಂಗ' ಎನ್ನುವರು. ಪುರುಷರನ್ನು ಮತ್ತು ಸ್ತ್ರೀಯರನ್ನು ಕುರಿತು ಹೇಳುವ ಶಬ್ದಗಳನ್ನು ಹೊರತುಪಡಿಸಿ ಉಳಿದ ಶಬ್ದಗಳೆಲ್ಲವೂ ನಪುಂಸಕಲಿಂಗಗಳು.
  ಉದಾಹರಣೆ :– ಮರ, ಗಿಡ, ಬಳ್ಳಿ, ಪುಲಿ/ಹುಲಿ, ಕರಡಿ, ಬೆಟ್ಟ, ಕೊಡೆ, ಜಡೆ, ಕನ್ನಡಿ, ಕಳಶ, ಆಡು, ಸೊಪ್ಪು, ಜನ, ಮಹಾಜನ ಇತ್ಯಾದಿ.
- **ವಿಶೇಷ ವಿಚಾರ : ಕನ್ನಡದಲ್ಲಿ ಮಾನವ ವರ್ಗವನ್ನು ಹೊರತುಪಡಿಸಿ, ಉಳಿದೆಲ್ಲ ಪ್ರಾಣಿಪಕ್ಷಿವರ್ಗಗಳೆಲ್ಲವೂ ನಪುಂಸಕ ಲಿಂಗಗಳು.**
  **ಉದಾ : ಕೋಣ, ಎಮ್ಮೆ, ಹಸು, ಎತ್ತು, ಮಗು, ಜನ, ಮಹಾಜನ ಎಂಬ ಪದಗಳು ನಪುಂಸಕ ಲಿಂಗಗಳು**}
  ಮೇಲೆ ಹೇಳಿದಂತೆ ಲಿಂಗಗಳು ಮೂರು ಬಗೆಯಾದರೂ ಒಮ್ಮೊಮ್ಮೆ ಕೆಲವು ಶಬ್ದಗಳು
  1. ಪುಲ್ಲಿಂಗನಪುಂಸಕಲಿಂಗಗಳಲ್ಲಿಯೂ,
  2. ಕೆಲವನ್ನು ಸ್ತ್ರೀನಪುಂಸಕಲಿಂಗಗಳಲ್ಲಿಯೂ
  3. ಕೆಲವನ್ನು ಮೂರುಲಿಂಗಗಳಲ್ಲಿಯೂ
  4. ಮತ್ತೆ ಕೆಲವನ್ನೂ ನಿತ್ಯವಾಗಿ ನಪುಂಸಕಲಿಂಗ ಗಳಲ್ಲಿಯೂ ಪ್ರಯೋಗವಾಗುತ್ತವೆ.

  ನಿತ್ಯ ನಪುಂಸಕಲಿಂಗಗಳು : ಶಿಶು, ಮಗು, ದಂಡು, ಜನ, ಕೂಸು – ಮೊಸಲಾದ ಶಬ್ದಗಳು ಯಾವಾಗಲೂ ನಪುಂಸಕಲಿಂಗದಲ್ಲಿಯೇ ಪ್ರಯೋಗವಾಗುವುದರಿಂದ ಇವನ್ನು 'ನಿತ್ಯನಪುಂಸಕಲಿಂಗಗಳು' ಎನ್ನುವರು.
  ಉದಾಹರಣೆ : ಶಿಶು ಜನಿಸಿತು. ಮಗು ಅಳುತ್ತದೆ.
  ಜನ ಸೇರಿದೆ. ದಂಡು ಬಂದಿತು. ಕೂಸು ಮಲಗಿದೆ.

1. **ಕನ್ನಡ ಭಾಷೆಯ ಲಿಂಗ ವ್ಯವಸ್ಥೆ :** ಕೇಶಿರಾಜನು ಕನ್ನಡ ಭಾಷೆಯಲ್ಲಿ ಒಂಬತ್ತು ಲಿಂಗಗಳಿವೆ

| | | |
|---|---|---|
| 1. ಪುಲ್ಲಿಂಗ, | 2. ಸ್ತ್ರೀಲಿಂಗ, | 3. ನಪುಂಸಕಲಿಂಗ, |
| 4. ಪುಂಸ್ತ್ರೀಲಿಂಗ, | 5. ಸ್ತ್ರೀನಪುಂಸಕಲಿಂಗ, | 6. ಪುಂನಪುಂಸಕಲಿಂಗ, |
| 7. ತ್ರಿವಿಧಲಿಂಗ, | 8. ವಿಶೇಷಾಧೀನಲಿಂಗ | 9. ಅವ್ಯಯಲಿಂಗ |

ಈ ರೀತಿ ಮೂರು ಲಿಂಗಗಳು ಕನ್ನಡದಲ್ಲಿ ಪ್ರಸಿದ್ಧವಾಗಿವೆ; ಮಿಕ್ಕ ಲಿಂಗಗಳು ಕ್ವಚಿತ್ ಪ್ರಯೋಗಗಳು.
'ಜನ' ಎಂಬ ಶಬ್ದವು ನಪುಂಸಕಲಿಂಗ; 'ಜನ' ಶಬ್ದದ ಹಿಂದಿನ 'ದುಸ್' / 'ಸತ್' / 'ಸು' ಎಂಬಿವು ಸೇರಿದರೆ ಪುಲ್ಲಿಂಗ ಎನಿಸುತ್ತದೆ. 'ಮಹತ್' ಶಬ್ದವು ಸೇರಿ 'ಮಹಾಜನ' ಎಂದಾಗಿ ನಪುಂಸಕಲಿಂಗ ಎನಿಸುತ್ತದೆ.}
ಉದಾಹರಣೆ :
1. **ಸ್ತ್ರೀಲಿಂಗ** : ಅರಸಿ, ದೇವಿ.

2. **ಪುಲ್ಲಿಂಗ :** ಅರಸಂ, ದೇವಂ, ನರಂ, ಸುರಂ.
3. **ನಪುಂಸಕಲಿಂಗ :** ಕನ್ನಡಿ, ಕಳಸಂ, ಜೆಡೆ, ಕೊಡೆ.
4. **ಪುಂನಪುಂಸಕಲಿಂಗ :** ರವಿ ಮೂಡಿದಂ/ರವಿ ಮೂಡಿದುದು. ವಿಧುವಿವಂ/ವಿಧುವಿದು. ಇವುಗಳಂತೆ ಮಂಗಳ, ಬುಧ, ಬೃಹಸ್ಪತ್ಯಾದಿ ನವಗ್ರಹಗಳೆಲ್ಲವೂ ಪುಂನಪುಂಸಕ ಲಿಂಗಗಳು. ಆಳಿವಂ/ಆಳಿದು. ಬಸಂತಂ ಬಂದಂ/ಬಸಂತಂ ಬಂದುದು. ಮಲಯಾನಿಲಂ ತೀಡಿದಂ/ಮಲಯಾನಿಲಂ ತೀಡಿದುದು. ಕಾಮನೆಚ್ಚಂ/ ಕಾಮಂ ಪೆರ್ಚಿದುದು.
   ಸೂರ್ಯ ಮೂಡಿದನು/ಸೂರ್ಯ ಮೂಡಿತು. ಶನಿಯು ಕಾಡುತ್ತಾನೆ./ಶನಿಯು ಕಾಡುತ್ತದೆ. ಚಂಸದರ ಉದಯವಾದನು./ ಚಂದ್ರೋದಯ ಆಯಿತು.
5. **ಪುಂಸ್ತ್ರೀಲಿಂಗ** : ಇವರ್ ಪುರುಷರ್/ಇವರ್ ಸ್ತ್ರೀಯರ್. ಅವರ್ ಗಂಡರ್/ಅವರ್ ಪೆಂಡಿರ್. ಉವರ್ ದೇವರ್/ಉವರ್ ದೇವಿಯರ್. ಇವಂ ದೇವರ ತೊಟ್ಟು/ಇವಳ್ ದೇವರ ತೊಟ್ಟು.
6. **ಸ್ತ್ರೀನಪುಂಸಕ** : ಆ ಪೆಣ್ಬಾಣೆ/ಆ ಪೆಣ್ಬಂದುದು. ಆ ಕನ್ನಿಕೆ ಸಲಕ್ಷಣೆ/ ಆ ಕನ್ನಿಕೆ ಪೊಲ್ಲದು. ಅವಳ್ ಸಜ್ಜನವೆಣ್/ಅದು ಸಜ್ಜನವೆಣ್. ಸಿರಿ. ಸರಸ್ವತಿ. ದೇವತೆ ಇತ್ಯಾದಿ.
   ದೇವತೆ ಒಲಿದಳು./ದೇವತೆ ಒಲಿಯಿತು. ಲಕ್ಷ್ಮಿ ಒಲಿದಳು./ಲಕ್ಷ್ಮಿ ಒಲಿಯಿತು. ಸರಸ್ವತಿ ಕೃಪೆ ಮಾಡಿದಳು./ಸರಸ್ವತಿ ಕೃಪೆ ಮಾಡಿತು. ಹುಡುಗಿ ಓದುವಳು./ಹುಡುಗಿ ಓದುತ್ತದೆ.
7. **ತ್ರಿಲಿಂಗ** : ನೀನರಸಂ/ನೀನರಸಿ/ನೀಂ ಪಶು. ತಾನ್, ಆನ್, ಏನ್, ಆರ್, ಶಿಶು, ಹಸುಳೆ, ಮಗುವು, ಕೂಸು, ಸೊಂದಿ, ಪಗೆ, ಕಳೆ, ಅರಸು, ತರುವಲಿ ಇತ್ಯಾದಿ.
   ನೀನು ತಂದೆ/ನೀನು ತಾಯಿ/ನೀನು ಪಶು.
   ಈ ಮೇಲಿನ ಉದಾಹರಣೆಗಳಲ್ಲಿ 'ನೀನು' ಶಬ್ದವು ಮೂರು ಲಿಂಗಗಳಲ್ಲಿಯೂ ಪ್ರಯೋಗವಾಗಿದೆ. ಪುರುಷಾರ್ಥಕ ಸರ್ವನಾಮದ ಉತ್ತಮ ಪುರುಷ ಮತ್ತು ಮಧ್ಯಮ ಪುರುಷ ಸರ್ವನಾಮ ಶಬ್ದಗಳು ಮೂರುಲಿಂಗಗಳಲ್ಲಿಯೂ ಪ್ರಯೋಗವಾಗುತ್ತವೆ.
8. **ವಾಚ್ಯಲಿಂಗ/ವಿಶೇಷ್ಯಾಧೀನಲಿಂಗ** : ನೇರಿದನಿವಂ/ನೇರಿದಳಿವಲ್/ನೇರಿತ್ತಿದು. ಅಭಿಮಾನಿ, ದಾನಿ, ಸಾಧು, ಹಡಣಂ, ಚಂಡಿ, ಕಟ್ಟೆ ರಾಗಿ, ಭೋಗಿ, ಸುಖಿ, ಹೇಡಿ, ಕಲಿ ಇತ್ಯಾದಿ.
   ನೀನ್ (ನೀಂ); ನೀಂ ಕಾಮಂ/ನೀಂ ರತಿ/ನೀಂ ಗಿಳಿ.
   ಆನ್ (ಆಂ); ಆಂ ಶಿವಂ/ಆಂ ಗೌರಿ/ ಆಂ ನಂದಿ.
   ತಾನ್ (ತಾಂ); ತಾನವಂ/ತಾನವಳ್/ತಾನದು.
   ಗುಣವಚನ : ಇನಿಯಂ/ಇನಿಯಳ್/ಇನಿಯದು/ಇನಿದು.
   ಒಳ್ಳೆಯ ಹುಡುಗ/ಒಳ್ಳೆಯ ಹುಡುಗಿ/ಒಳ್ಳೆಯ ನಾಯಿ.
   ಕೆಟ್ಟ ಮನುಷ್ಯ/ ಕೆಟ್ಟ ಹೆಂಗಸು/ ಕೆಟ್ಟ ನಾಯಿ.
   ಸರ್ವನಾಮ : ಪೆಱಂ/ಪೆಱಳ್/ಪೆಱತು. ಇವನು/ಇವಳು/ಇದು
   ಬಹುವ್ರೀಹಿ : ಅವಂ ವಿಮಲಮತಿ/ಅವಳ್ ವಿಮಲಮತಿ/ಅದು ವಿಮಲಮತಿ.
   ಅವಂ ಕುಸಿಗೊರಲಂ/ಅವಳ್ ಕುಸಿಗೊರಲಿ/ಅದು ಕುಸಿಗೊರಲ್
   ಕೃದಂತ : ಪಾಡಿದಂ, ಪಾಡಿದಳ್, ಪಾಡಿದುದು.
   ತದ್ಧಿತ : ಓದಾಳಿ ಇವಂ/ಓದಾಳಿ ಇವಳ್/ಓದಾಳಿ ಇದು.
   ಸಂಖ್ಯೆ : ಸಾಯಿರ ಗಂಡರ್/ ಸಾಯಿರ ಪೆಂಡಿರ್/ಸಾಯಿರ ಮನೆಗಳ್. ಒಬ್ಬನು/ಒಬ್ಬಳು/ಒಂದು
   ಅವನು ಅಭಿಮಾನಿ/ಅವಳು ಅಭಿಮಾನಿ/ಅದು ಅಭಿಮಾನಿ.
   ಇಲ್ಲಿ ಅವನು/ಅವಳು/ಅದು ಎನ್ನುವುದು ವಿಶೇಷ್ಯ. ಅಭಿಮಾನಿ ಎನ್ನುವುದು ವಿಶೇಷ್ಯದ ಲಿಂಗವನ್ನು ಹೊಂದಿ ಪುಲ್ಲಿಂಗ/ಸ್ತ್ರೀಲಿಂಗ/ನಪುಂಸಕಲಿಂಗ ಆಗುವುದು. ಹೀಗೆ ವಿಶೇಷ್ಯದ ಲಿಂಗವನ್ನು ಅನುಸರಿಸುವ ಶಬ್ದಗಳು ವಿಶೇಷಾಧೀನಲಿಂಗ ಅಥವಾ ವಾಚ್ಯಲಿಂಗಲಿಂಗ ಎನಿಸುತ್ತವೆ.

9. **ಅವ್ಯಯಲಿಂಗ** : ಕಮ್ಮಿದಂ/ಕಮ್ಮಿದಳ್/ಕಮ್ಮಿತು. ಭೋಂಕನೆ ಬಂದಂ/ಭೋಂಕನೆ ಬಂದಳ್/ ಭೋಂಕನೆ ಬಂದುದು. ತೊಟ್ಟನೆ, ಮೆಲ್ಲನೆ, ಕಮ್ಮನೆ, ಇಮ್ಮನೆ, ಸುಮ್ಮನೆ, ಸೀಯನೆ, ಕೆಚ್ಚನೆ, ಪಚ್ಚನೆ, ತೆಳ್ಳನೆ, ಬೆಳ್ಳನೆ, ಬೆಳ್ಪಳಂ, ಚೆಚ್ಚರಂ, ನಿರ್ನೆರಂ, ಸೋಡಂಬಾಡಂ, ಅಂತೆವೊಲ್, ಮಿಗೆ, ದಲ್, ವಲಂ, ವೆಱಂ, ಕೆನ್ನಂ ಮತ್ತೆ ಭೋಂಕನೆ ಬಂದಂ/ಭೋಂಕನೆ ಬಂದಳ್/ ಭೋಂಕನೆ ಬಂದುದು. ಇಲ್ಲಿ ಬೋಂಕನೆ ಎನ್ನುವುದು ಅವ್ಯಯ. ಅವ್ಯಯಗಳೊಡನೆ ಸೇರಿ ಆಗುವ ಲಿಂಗಗಳು ಅವ್ಯಯಲಿಂಗಗಳು. ಅವ್ಯಯಲಿಂಗವು ಸಪ್ತವಿಭಕ್ತಿಗಳಲ್ಲಿಯೂ ಪುಲ್ಲಿಂಗ / ಸ್ತ್ರೀಲಿಂಗ / ನಪುಂಸಕಲಿಂಗಗಳಲ್ಲಿಯೂ, ಏಕವಚನ / ಬಹುವಚನಗಳಲ್ಲಿಯೂ ಯಾವ ವ್ಯತ್ಯಾಸವನ್ನೂ ಹೊಂದದೆ ಸ್ವಸ್ವರೂಪದಲ್ಲಿಯೇ ಇದ್ದು ಅರ್ಥವನ್ನು ಕೊಡುತ್ತದೆ.

➢ **ವಿಶೇಷ ವಿಚಾರ : ಗುಣವಾಚಕ ಶಬ್ದಗಳು ಮೂರು ಲಿಂಗಗಳಲ್ಲಿ :**

| **ಪುಲ್ಲಿಂಗ** | **ಸ್ತ್ರೀಲಿಂಗ** | **ನಪುಂಸಕಲಿಂಗ** |
|---|---|---|
| ಒಳ್ಳೆಯವನು | ಒಳ್ಳೆಯವಳು | ಒಳ್ಳೆಯದು |
| ಇನಿಯನು | ಇನಿಯಳು | ಇನಿಯದು |
| ದೊಡ್ಡವನು | ದೊಡ್ಡವಳು | ದೊಡ್ಡದು |
| ಚಿಕ್ಕವನು | ಚಿಕ್ಕವಳು | ಚಿಕ್ಕದು |
| ಹೊಸಬನು | ಹೊಸಬಳು | ಹೊಸತು |
| ಹಳೆಯವನು | ಹಳೆಯವಳು | ಹಳೆಯದು |

➢ ಸರ್ವನಾಮಗಳು ಮೂರು ಲಿಂಗಗಳಲ್ಲಿ.

| **ಪುಲ್ಲಿಂಗ** | **ಸ್ತ್ರೀಲಿಂಗ** | **ನಪುಂಸಕಲಿಂಗ** |
|---|---|---|
| ಅವನು | ಅವಳು | ಅದು |
| ಇವನು | ಇವಳು | ಇದು |
| ಆವನು | ಆವಳು | ಆವುದು |
| ಯಾವನು | ಯಾವಳು | ಯಾವುದು |

➢ ಸಂಖ್ಯಾವಾಚಕಗಳು ಮೂರು ಲಿಂಗಗಳಲ್ಲಿ

| **ಪುಲ್ಲಿಂಗ** | **ಸ್ತ್ರೀಲಿಂಗ** | **ನಪುಂಸಕಲಿಂಗ** |
|---|---|---|
| ಒಬ್ಬನು | ಒಬ್ಬಳು | ಒಂದು |
| ಇಬ್ಬರು | ಇಬ್ಬರು | ಎರಡು |
| ಮೂವರು | ಮೂವರು | ಮೂರು |

➢ ಕೆಲವು ಅಕಾರಾಂತ ಪುಲ್ಲಿಂಗ ಶಬ್ದಗಳಿಗೆ ಸ್ತ್ರೀಲಿಂಗದಲ್ಲಿ 'ಇ'/ಇತಿ/ಇತ್ತಿ/ಗಿತ್ತಿ/ಅಳು/ಎ' ಪ್ರತ್ಯಯಗಳು ಬಂದು ಸೇರಿ ಸ್ತ್ರೀಲಿಂಗಗಳಾಗುತ್ತವೆ.

| **ಪುಲ್ಲಿಂಗ** | **ಸ್ತ್ರೀಲಿಂಗ** | **ಪ್ರತ್ಯಯ** | **ಪುಲ್ಲಿಂಗ** | **ಸ್ತ್ರೀಲಿಂಗ** | **ಪ್ರತ್ಯಯ** |
|---|---|---|---|---|---|
| ಅರಸ | ಅರಸಿ | ಇ | ಜಾಣ | ಜಾಣೆ | ಎ |
| ಅಣುಗ | ಅಣುಗಿ | ಇ | ದಡ್ಡ | ದಡ್ಡೆ | ಎ |
| ನಿಡುಮೂಗ | ನಿಡುಮೂಗಿ | ಇ | ಹಣವಂತ | ಹಣವಂತೆ | ಎ |
| ಹುಡುಗ | ಹುಡುಗಿ | ಇ | ಗುಣವಂತ | ಗುಣವಂತೆ | ಎ |
| ಮುದುಕ | ಮುದುಕಿ | ಇ | ಶಿವ | ಶಿವೆ | ಎ |
| ಕಳ್ಳ | ಕಳ್ಳಿ | ಇ | ಕಳ್ಳ | ಕಳ್ಳೆ | ಎ |
| ಬೀಗ | ಬೀಗಿತಿ | ಇತಿ | ಬ್ರಾಹ್ಮಣ | ಬ್ರಾಹ್ಮಣಿತಿ | ಇತಿ |
| ಒಕ್ಕಲಿಗ | ಒಕ್ಕಲಗಿತ್ತಿ | ಇತ್ತಿ | ಮಗ | ಮಗಳು | ಅಳು |
| ಅಗಸ | ಅಗಸಗಿತ್ತಿ | ಗಿತ್ತಿ | | | |

➢ ಕೆಲವು ಪುಲ್ಲಿಂಗ ಪ್ರಕೃತಿಗಳ ಕೊನೆಯಲ್ಲಿ ಸ್ತ್ರೀವಾಚಕ ಪ್ರತ್ಯಯಗಳು ಸೇರುವಾಗ ಬದಲಾವಣೆಗಳು ಆಗುತ್ತವೆ.

ಉದಾಹರಣೆ : ಮಾಟಗಾರ > ಮಾಟಗಾರ್ತಿ > ಮಾಟಗಾತಿ

ಹಾಡುಗಾರ > ಹಾಡುಗಾರ್ತಿ > ಹಾಡುಗಾತಿ

➢ ನಪುಂಸಕಲಿಂಗವಾದ ಪ್ರಾಣಿಗಳ ಹೆಸರಿನ ಹಿಂದೆ ಗಂಡು/ಹೆಣ್ಣು ಎಂಬ ಪದಗಳನ್ನು ಸೇರಿಸಿ ಲಿಂಗಭೇದವನ್ನು ಗುರುತಿಸಲಾಗುವುದು.

ಉದಾಹರಣೆ :

| | | | |
|---|---|---|---|
| ಗಂಡು + ಆನೆ | = ಗಂಡಾನೆ | ಹೆಣ್ಣು + ಆನೆ | = ಹೆಣ್ಣಾನೆ |
| ಗಂಡು + ಹುಲಿ | = ಗಂಡುಹುಲಿ | ಹೆಣ್ಣು + ಹುಲಿ | = ಹೆಣ್ಣುಹುಲಿ |
| ಗಂಡು + ಗಿಳಿ | = ಗಂಡುಗಿಳಿ | ಹೆಣ್ಣು + ಗಿಳಿ | = ಹೆಣ್ಣುಗಿಳಿ |

➢ **ವಿಶೇಷ ವಿಚಾರ :** ನಾಗವರ್ಮನು "ಕನ್ನಡದಲ್ಲಿನ ಲಿಂಗ ವ್ಯವಸ್ಥೆಯ ಬಗ್ಗೆ ಪ್ರಾಸಂಗಿಕವಾಗಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗ ವಿವಕ್ಷೆಯು ಕಂಡುಬರುತ್ತದೆ" ಎಂದು ಹೇಳುತ್ತಾನೆ. ಕೇಶಿರಾಜನು "ಒಂಬತ್ತು ರೀತಿಯ ಲಿಂಗ ವಿವಕ್ಷೆಯನ್ನು ನಿರೂಪಿಸಿದರೂ ಕೊನೆಯಲ್ಲಿ ಕನ್ನಡ ಭಾಷೆಯಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳು ಪ್ರಸಿದ್ಧವಾಗಿವೆ" ಎಂದು ಹೇಳುತ್ತಾನೆ.

ಭಟ್ಟಾಕಳಂಕನು "ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಲ್ಲದೆ ಶುದ್ಧ, ಮಿಶ್ರ, ಸಂಕೀರ್ಣ, ಉಪಸರ್ಜನ, ಆವಿಷ್ಟ ಮತ್ತು ಅವ್ಯಕ್ತ ಲಿಂಗವೆಂಬ ಆರು ಉಪಭೇದಗಳನ್ನು ನಿರೂಪಿಸಿ, ಈ ಉಪಭೇದಗಳೆಲ್ಲವೂ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳ ಅವಲಂಬಿಗಳಾಗಿರುವುದರಿಂದ ಕನ್ನಡ ಭಾಷೆಯಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳು ಮಾತ್ರ ಪ್ರಸಿದ್ಧವಾದವು" ಎಂದು ಹೇಳುತ್ತಾನೆ.

ಆಧುನಿಕ ವ್ಯಾಕರಣಕಾರರು ಪ್ರಾಚೀನ ಲಾಕ್ಷಣಿಕರ ನಿಲುವನ್ನು ಒಪ್ಪುವುದಿಲ್ಲ. ಏಕೆಂದರೆ ಮೂಲ ದ್ರಾವಿಡ ಭಾಷೆಯ ಸ್ವರೂಪವನ್ನು ಪ್ರತಿನಿಧಿಸಬಲ್ಲ ತಮಿಳು ಭಾಷೆಯಲ್ಲಿ ಮತ್ತು ತೆಲುಗು ಭಾಷೆಯಲ್ಲಿ ದ್ವಿವಿಧ (ಎರಡು ವಿಧ) ಗಳ ಲಿಂಗ ವಿವಕ್ಷೆ ಕಂಡುಬರುವುದು ಇದಕ್ಕೆ ಕಾರಣವಾಗಿದೆ. ಮೂಲ ದ್ರಾವಿಡ ಭಾಷೆಯಿಂದ ಪ್ರತ್ಯೇಕವಾಗಿ ಬೆಳೆಯಲು ಆರಂಭವಾದ ಕನ್ನಡ ಭಾಷೆಯು ಅನ್ಯ ಭಾಷಾ ಪ್ರಭಾವಕ್ಕೆ ಒಳಗಾಗಿ ತ್ರಿವಿಧ (ಮೂರು ವಿಧ) ಗಳ ಲಿಂಗ ವಿವಕ್ಷೆಯನ್ನು ಒಪ್ಪಿಕೊಂಡಿದೆ ಎಂಬುದು ಆಧುನಿಕರ ನಿಲುವಾಗಿದೆ. ಕನ್ನಡ ಕೈಪಿಡಿಕಾರರು "ದ್ರಾವಿಡರು ಲಿಂಗ ನಿರ್ಣಯ ಮಾಡುವಾಗ ಒಂದು ಶಬ್ದದಿಂದ ಸೂಚಿತವಾದ ವಸ್ತುವು ಸಜೀವವೇ, ನಿರ್ಜೀವೇ. ಹೇಣ್ಣೇ. ಗಂಡೇ ಎಂಬ ವ್ಯತ್ಯಾಸಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡದೇ ಬುದ್ಧಿಶಕ್ತಿಯುಳ್ಳದ್ದೇ, ಇಲ್ಲದ್ದೇ ಎಂಬ ಭೇದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಂತೆ ತೋರುತ್ತದೆ" ಎನ್ನುವರು. ಬುದ್ಧಿಶಕ್ತಿಯನ್ನುಳ್ಳ (ಮಹತ್) ಪುಲ್ಲಿಂಗ ಮತ್ತು ಸ್ತ್ರೀಲಿಂಗ ಶಬ್ದಗಳೆರಡೂ ಒಂದು ಜಾತಿಯವೆಂದೂ, ಬುದ್ಧಿಶಕ್ತಿಯಿಲ್ಲದ (ಅಮಹತ್) ಇನ್ನಿತರ ಶಬ್ದಗಳು ಮತ್ತೊಂದು ಜಾತಿಯವೆಂದೂ ದ್ವಿವಿಧ ಲಿಂಗ ವಿವಕ್ಷೆಯನ್ನು ತಮಿಳು ಮತ್ತು ತೆಲುಗಿನಲ್ಲಿ ಕಂಡು ಬರುತ್ತದೆ. ಮಹತ್ ವರ್ಗದಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳು ಕಂಡುಬರುತ್ತವೆಯೋ ಹೊರತು ಅಮಹತ್ ವರ್ಗಗಳಲ್ಲಿ ಕಂಡುಬರುವುದಿಲ್ಲ. ಅಮಹತ್ ವರ್ಗದಲ್ಲಿ ಗಂಡು, ಹೆಣ್ಣು ಎಂಬ ಭೇದವನ್ನು ಗುರುತಿಸಲು ಅಮಹತ್ ಶಬ್ದಗಳ ಹಿಂದೆ ಗಂಡು, ಹೆಣ್ಣು ಎಂಬ ಶಬ್ದಗಳನ್ನು ಸೇರಿಸಬೇಕಾಗುತ್ತದೆ. (ಉದಾಹರಣೆಗೆ ಗಂಡು ಮಗು, ಹೆಣ್ಣು ಮಗು) ಇವುಗಳಿಗೆ ಹತ್ತುವ ಬಹುವಚನ ಪ್ರತ್ಯಯ, ಪ್ರತಿಯಾಗಿ ಬರುವ ಸರ್ವನಾಮ ಮತ್ತು ಇವುಗಳ ಕ್ರಿಯೆಯನ್ನು ಸೂಚಿಸುವ ಕ್ರಿಯಾಪದಗಳೆಲ್ಲವೂ ನಪುಂಸಕಲಿಂಗದಲ್ಲಿಯೇ ಇರುತ್ತವೆ.

ಆದರೆ ಇಂದು ನಾವು ಬಳಸುವ ಕನ್ನಡದ ಗ್ರಾಂಥಿಕ ಮತ್ತು ವ್ಯಾವಹಾರಿಕ ಭಾಷೆಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳನ್ನು ಮಾತ್ರ ಬಳಸುತ್ತಿರುವುದು ಗಮನಾರ್ಹ ವಿಷಯವಾಗಿದೆ.}

## ವಚನಗಳ ವ್ಯವಸ್ಥೆ

- ವ್ಯಾಕರಣದ ಪರಿಭಾಷೆಯಲ್ಲಿ ಸಂಖ್ಯೆಯನ್ನು ಸೂಚಿಸುವುದಕ್ಕೆ 'ವಚನ' ಎನ್ನುವರು.
- **ವಚನ :** ವಚನ ಎಂದರೆ ವಸ್ತುಗಳ ಎಣಿಕೆ/ಸಂಖ್ಯೆ
- **ವಚನಗಳ** ಎರಡು ವಿಧಗಳು :

  1. ಏಕ ವಚನ 2. ಬಹು ವಚನ
- **ಏಕ ವಚನ ಪದ :** ಒಂದು ವಸ್ತು ಅಥವಾ ವ್ಯಕ್ತಿಯನ್ನು ಸೂಚಿಸುವ ಪದಗಳನ್ನು 'ಏಕವಚನ ಪದ' ಎನ್ನುವರು.

  ಉದಾಹರಣೆ :– ರಾಜ, ಮರ, ರಾಣಿ, ಅಣ್ಣ
- **ಬಹುವಚನ ಪದ :** ಒಂದಕ್ಕಿಂತ ಹೆಚ್ಚು ವಸ್ತುಗಳು ಅಥವಾ ವ್ಯಕ್ತಿಗಳನ್ನು ಸೂಚಿಸುವ ಪದಗಳನ್ನು 'ಬಹುವಚನ ಪದ' ಎನ್ನುವರು.

  ಏಕವಚನ ನಾಮಪ್ರಕೃತಿಗಳಿಗೆ ಬಹುವಚನದಲ್ಲಿ ನಾಮಪ್ರಕೃತಿ ಮತ್ತ ವಿಭಕ್ತಿ ಪ್ರತ್ಯಯಗಳ ನಡುವೆ **~ಗಳ್/ಗಳು, ~ವು/ಅವು/ಅವುಗಳ್, ~ಅರ್/ಅರು/ಅರುಗಳ್, ~ಅಂದಿರ್/ಅಂದಿರು/ಅಂದಿರುಗಳು, ಇರ್/ಇರು, ವಿರ್/ವಿರು, ಕಳ್/ಕಳು, ವರ್/ವರು** ಇತ್ಯಾದಿ ಬಹುವಚನ ಸೂಚಕ ಪ್ರತ್ಯಯಗಳು ಆಗಮವಾಗಿ ಬಂದು ಬಹುವಚನ ಪದಗಳಾಗುತ್ತವೆ.
- ಎಣಿಕೆಗೆ ಸಿಗದಿರುವ ಪದಗಳು ಯಾವಾಗಲೂ ಏಕವಚನದಲ್ಲಿಯೇ ಇರುತ್ತವೆ.

  ಉದಾಹರಣೆ : ಗೌರವ, ಜಾಣತನ, ಬೆಳಕು, ಬಿಸಿಲು, ಮೇಲೆ, ಕೆಳಗೆ ಇತ್ಯಾದಿ.
- **ವಿಶೇಷ ವಿಚಾರ** : ಪ್ರಯತ್ನವಿಲ್ಲದೆಯೇ ಗೌರವ ಸೂಚಿಸಬೇಕಾದ ಸಂದರ್ಭದಲ್ಲಿಯೂ, ಗುರುಮುನೀಶ್ವರರುಗಳನ್ನು ಸಂಬೋಧಿಸುವಾಗಲೂ, ತಿರಸ್ಕಾರ ನಿಂದೆಗಳಲ್ಲಿಯೂ ಏಕವಚನಕ್ಕೆ ಬಹುವಚನವು ಬರುತ್ತದೆ.

  ಉದಾಹರಣೆ :

  * ಪ್ರಯತ್ನವಿಲ್ಲದೆಯೇ ಗೌರವ ಸೂಚಿಸಬೇಕಾದ ಸಂದರ್ಭದಲ್ಲಿ ಬಹುವಚನ ಪ್ರಯೋಗಕ್ಕೆ :
    ಎಮ್ಮ ತಂದೆಗಳ್/ನಮ್ಮ ತಂದೆಯವರು. ಎಮ್ಮ ತಾಯ್ಗಳು/ನಮ್ಮ ತಾಯಿಯವರು.
  * ಗುರುಮುನೀಶ್ವರರುಗಳನ್ನು ಸಂಬೋಧಿಸುವ ಸಂದರ್ಭದಲ್ಲಿ ಬಹುವಚನ ಪ್ರಯೋಗಕ್ಕೆ :
    ಗುರುಗಳ್/ಗುರುಗಳು. ಸ್ವಾಮಿಗಳ್/ಸ್ವಾಮಿಗಳು.
  * ತಿರಸ್ಕಾರ ನಿಂದೆಗಳ ಸಂದರ್ಭದಲ್ಲಿ ಬಹುವಚನ ಪ್ರಯೋಗಕ್ಕೆ :
    ತಾವು ದೊಡ್ಡ ಮನುಷ್ಯರು. (ಅಯೋಗ್ಯ ಎನ್ನುವ ಅರ್ಥ)}
  * ಗೌರವಾರ್ಥದಲ್ಲಿ ಪುಲ್ಲಿಂಗ / ಸ್ತ್ರೀಲಿಂಗಗಳ ಕೆಲವು ಶಬ್ದಗಳಿಗೆ 'ಅವರು' ಎಂಬುದನ್ನು ಸೇರಿಸಿ ಪ್ರಯೋಗ
    ಮಾಡಲಾಗುತ್ತದೆ. ಆದರೆ ಅವು ಬಹುವಚನರೂಪಗಳಲ್ಲ ಎಂಬುದನ್ನು ಗಮನಿಸಬೇಕು.

  ಉದಾಹರಣೆ : ವಿಶ್ವೇಶ್ವರಯ್ಯನವರು ಬಸವಣ್ಣನವರು
  ಅಕ್ಕಮಹಾದೇವಿಯವರು ನೀಲಮ್ಮನವರು

➢ '~ಗಳ್/ಗಳು' ಬಹುವಚನ ಪ್ರತ್ಯಯ ಬರುವುದಕ್ಕೆ :

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಮರ | ಗಳ್ / ಗಳು | ಮ್/ಉ | ಮರಂಗಳ್/ಮರಗಳು |
| ಗುರು | ಗಳ್ / ಗಳು | ಅಮ್/ಅನ್ನು | ಗುರುಗಳಂ/ಗುರುಗಳನ್ನು |

➢ '~ವು/ಅವು/ + ಗಳ್/ಗಳು' ಬಹುವಚನ ಪ್ರತ್ಯಯ ಬರುವುದಕ್ಕೆ :

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಅದು | ವು | ಉ | ಅವು |
| ಯಾವುದು | ವು | ಅನ್ನು | ಯಾವುದನ್ನು |
| ಇನಿದು | ಅವು | ಉ | ಇನಿಯವು |
| ಕಿರಿದು | ಅವು | ಅನ್ನು | ಕಿರಿಯವನ್ನು |
| ದೊಡ್ಡ | ವು + ಗಳ್/ ಗಳು | ಉ | ದೊಡ್ಡವುಗಳು |
| ಚಿಕ್ಕ | ವು + ಗಳ್/ ಗಳು | ಅನ್ನು | ಚಿಕ್ಕವುಗಳನ್ನು |

➢ '~ಅರ್/ಅರು/ಅರುಗಳ್' ಬಹುವಚನ ಪ್ರತ್ಯಯ ಬರುವುದಕ್ಕೆ :

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಅರಸು | ಅರ್/ಅರು | ಮ್/ಉ | ಅರಸರ್/ಅರಸರು |
| ಹುಡುಗ | ಅರ್/ಅರು | ಅಮ್/ಅನ್ನು | ಹುಡುಗರಂ/ಹುಡುಗರನ್ನು |
| ಹೆಂಗಸು | ಅರುಗಳು | ಅನ್ನು | ಹೆಂಗಸರುಗಳನ್ನು |
| ಪುರುಷ | ಅರುಗಳು | ಇಂದ | ಪುರುಷರುಗಳಿಂದ |

➢ '~ಅಂದಿರ್/ಅಂದಿರು/ಅಂದಿರುಗಳು' ಬಹುವಚನ ಪ್ರತ್ಯಯ ಬರುವುದಕ್ಕೆ :

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಅಣ್ಣ | ಅಂದಿರ್/ಅಂದಿರು | ಮ್/ಉ | ಅಣ್ಣಂದಿರ್/ಅಣ್ಣಂದಿರು |
| ಅಕ್ಕ | ಅಂದಿರ್/ಅಂದಿರು | ಅಮ್/ಅನ್ನು | ಅಕ್ಕದಿರಂ/ಅಕ್ಕದಿರನ್ನು |
| ತಮ್ಮ | ಅಂದಿರುಗಳು | ಇಂದ | ತಮ್ಮಂದಿರುಗಳಿಂದ |
| ಸೊಸೆ | ಅಂದಿರುಗಳು | ಅಲ್ಲಿ | ಸೊಸೆಯಂದಿರುಗಳಲ್ಲಿ |

➢ 'ಇರ್/ಇರು' ಬಹುವಚನ ಪ್ರತ್ಯಯ ಬರುವುದಕ್ಕೆ :

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಹೆಂಡತಿ | ಇರ್/ಇರು | ಮ್/ ಉ | ಹೆಂಡಿರ್/ಹೆಂಡಿರು |
| ಹೆಂಡತಿ | ಇರ್/ಇರು | ಅಮ್/ಅನ್ನು | ಹೆಂಡಿರಂ/ಹೆಂಡಿರಂ |

➢ 'ವಿರ್/ವಿರು' ಬಹುವಚನ ಪ್ರತ್ಯಯ ಬರುವುದಕ್ಕೆ :

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಅತ್ತೆ | ವಿರ್/ವಿರು | ಮ್/ಉ | ಅತ್ತೆವಿರ್/ಅತ್ತೆವಿರು |
| ತಾಯಿ | ವಿರ್/ವಿರು | ಮ್/ಉ | ತಾಯ್ವಿರ್/ತಾಯ್ವಿರು |

➢ 'ಕಳ್/ಕಳು' ಬಹುವಚನ ಪ್ರತ್ಯಯ ಬರುವುದಕ್ಕೆ :

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಮಗು | ಕಳ್/ಕಳು | ಮ್/ಉ | ಮಕ್ಕಳ್/ಮಕ್ಕಳು |
| ಮಗು | ಕಳ್/ಕಳು | ಅಮ್/ಅನ್ನು | ಮಕ್ಕಳಂ/ಮಕ್ಕಳನ್ನು |
| | | | |

➢ **'ವರ್/ವರು' ಬಹುವಚನ ಪ್ರತ್ಯಯ ಬರುವುದಕ್ಕೆ :**

| ನಾಮಪ್ರಕೃತಿ | ಬಹುವಚನ ಪ್ರತ್ಯಯ | ವಿಭಕ್ತಿ ಪ್ರತ್ಯಯ | ಪದರೂಪ |
|---|---|---|---|
| ಮೂರು | ವರ್/ವರು | ಮ್/ಉ | ಮೂವರ್/ಮೂವರು |
| ನಾಲ್ಕು | ವರ್/ವರು | ಅಮ್/ಅನ್ನು | ನಾಲ್ವರಂ/ನಾಲ್ವರನ್ನು |

➢ 'ಜನ' ಎಂಬ ನಾಮಪ್ರಕೃತಿಯು ಬಹುವಚನದಲ್ಲಿ ಜನ/ಜನರು/ಜನಗಳು ಎಂಬ ಮೂರುಗಳಲ್ಲಿಯೂ ಪ್ರಯೋಗವಾಗುತ್ತದೆ.

➢ ಗೌರವಸೂಚಕವಾಗಿ ಏಕವಚನದ ಬದಲು ಬಹುವಚನ ಪ್ರಯೋಗವಾಗುತ್ತದೆ.

## ವಿಭಕ್ತಿಗಳು

➢ **ವಿಭಕ್ತಿ :** ವಾಕ್ಯದಲ್ಲಿ ಪ್ರಯೋಗವಾಗುವ ನಾಮಪದದ ಕಾರಕಾರ್ಥಗಳನ್ನು ವಿಭಾಗಿಸಿ ಕೊಡುವ ಶಬ್ದರೂಪಕ್ಕೆ **'ವಿಭಕ್ತಿ'** ಎನ್ನುವರು.

➢ **ವಿಭಕ್ತಿ ಪ್ರತ್ಯಯಗಳು :** ವಾಕ್ಯದಲ್ಲಿ ಪ್ರಯೋಗವಾಗುವ ನಾಮಪದದ ಹಾಗೂ ವಾಕ್ಯಾರ್ಥಕ್ಕೆ ಸಂಬಂಧ ಕಲ್ಪಿಸಿ ಕೊಡುವ ಪ್ರತ್ಯಯಗಳನ್ನು **'ವಿಭಕ್ತಿ ಪ್ರತ್ಯಯಗಳು'** ಎನ್ನುವರು.

➢ **ಕನ್ನಡದ 7** ವಿಭಕ್ತಿ ಪ್ರತ್ಯಯಳು

| ಕ್ರ. ಸಂ | ವಿಭಕ್ತಿಯ ಹೆಸರು | ಹಳಗನ್ನಡ ವಿಭಕ್ತಿ ಪ್ರತ್ಯಯ | ಹಳಗನ್ನಡ ಪದರೂಪ | ಹೊಸಗನ್ನಡ ವಿಭಕ್ತಿ ಪ್ರತ್ಯಯ | ಹೊಸಗನ್ನಡ ಪದರೂಪ | ಕಾರಕ |
|---|---|---|---|---|---|---|
| 1 | ಪ್ರಥಮಾ | ಮ್ | ಶರಣಂ | ಉ | ಶರಣನು | ಕರ್ತೃ |
| | ಸಂಬೋಧನಾ | ಆ / ಏ | ಏ ಶರಣನೇ | ಆ / ಏ | ಏ ಶರಣನೇ | ಅಭಿಮುಖೀಕರಣ |
| 2 | ದ್ವಿತೀಯಾ | ಅಮ್ | ಶರಣನಂ | ಅನ್ನು | ಶರಣನನ್ನು | ಕರ್ಮ |
| 3 | ತೃತೀಯಾ | ಇಮ್ | ಶರಣನಿಂ | ಇಂದ | ಶರಣನಿಂದ | ಕರಣ |
| 4 | ಚತುರ್ಥೀ | ಕೆ/ಕ್ಕೆ/ಗೆ/ಇಗೆ | ಶರಣಂಗೆ | ಕೆ/ಕ್ಕೆ/ಗೆ/ಇಗೆ | ಶರಣನಿಗೆ | ಸಂಪ್ರದಾನ |
| 5 | ಪಂಚಮೀ | ಅತ್ತಣಿಂ | ಶರಣನತ್ತಣಿಂ | ದೆಸೆಯಿಂದ | ಶರಣನದೆಸೆಯಿಂದ | ಅಪಾದಾನ |
| 6 | ಷಷ್ಠೀ | ಅ | ಶರಣನ | ಅ | ಶರಣನ | ಸಂಬಂಧಾರ್ಥ |
| 7 | ಸಪ್ತಮೀ | ಒಳ್ | ಶರಣನೊಳ್ | ಅಲ್ಲಿ | ಶರಣನಲ್ಲಿ | ಅಧಿಕರಣ |

➢ **ವಿಶೇಷ ವಿಚಾರ :** ಈ ಏಳು ವಿಭಕ್ತಿಗಳಲ್ಲಿ ಆರು ಕಾರಕಗಳು ಮತ್ತು ಒಂದು ಸಂಬಂಧಾರ್ಥ. ಈ ಕಾರಕಗಳು ಕ್ರಮವಾಗಿ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ ಮತ್ತು ಅಧಿಕರಣ ಕಾರಕಗಳು ಮತ್ತು ಷಷ್ಠಿ ವಿಭಕ್ತಿಯೊಂದು ಸಂಬಂಧಾರ್ಥ ಎನಿಸುತ್ತದೆ.
* ಸಂಬೋಧನಾ ವಿಭಕ್ತಿಯನ್ನು ಪ್ರಥಮ ವಿಭಕ್ತಿಯಲ್ಲಿಯೇ ಸೇರಿಸುವುದರಿಂದ ಅದನ್ನು ಗಣನೆಗೆ ತೆಗದುಕೊಳ್ಳಬಾರದು. ಸಂಬೋಧನಾ ವಿಭಕ್ತಿಯು ಪ್ರಥಮಾ ವಿಭಕ್ತಿಯಲ್ಲಯೇ ಸೇರಿ ಸಂಬೋಧನಾ ಪ್ರಥಮಾ ವಿಭಕ್ತಿ ಎನಿಸುವುದು. ಆದ್ದರಿಂದ ವಿಭಕ್ತಿಗಳು ಏಳು; ಪ್ರತ್ಯಯಗಳು ಏಳು; ಆದರೆ ಕಾರಕಗಳು ಮಾತ್ರ ಆರು. ಷಷ್ಠಿ ವಿಭಕ್ತಿ ಕಾರಕವಲ್ಲ; ಅದು ಸಂಬಂಧಾರ್ಥವನ್ನು ಸೂಚಿಸುತ್ತದೆ.

➢ **ಕಾರಕ ವಿಭಕ್ತಿ :** ವಾಕ್ಯದಲ್ಲಿ ಬಳಕೆಯಾಗಿರುವ ಪದಗಳ ಅರ್ಥವನ್ನು ವಿಭಾಗಿಸಿಕೊಡುವುದು 'ವಿಭಕ್ತಿ'. ನಾಮಪದ ಮತ್ತು ಕ್ರಿಯಾಪದದ ನಡುವಿನ ಸಂಬಂಧವನ್ನು ತೋರಿಸಿಕೊಡುವುದೇ **'ಕಾರಕ ವಿಭಕ್ತಿ.'**

➢ ಕಾರಕ : ವಾಕ್ಯದಲ್ಲಿ ನಾಮಪದ ಹಾಗೂ ಕ್ರಿಯಾಪದದ ನಡುವೆ ಇರುವ ಸಂಬಂಧವನ್ನು ಸೂಚಿಸುವುದೇ 'ಕಾರಕ.'

ಯಾವುದೇ ಕ್ರಿಯೆಯಾಗಲೀ ಸ್ವತಃ ತನ್ನಿಂದ ತಾನೇ ಕಾರ್ಯ ನಿರ್ವಹಿಸಲಾರದು. ಯಾವುದಾದರೂ ಕರ್ತೃ, ಕರಣ, ಸ್ಥಾನ ಇವುಗಳ ಆವಶ್ಯಕತೆ ಇದ್ದೇ ಇರುತ್ತದೆ. ಇದನ್ನು ತಿಳಿಸುವುದೇ ಕಾರಕ.

- ವಿಭಕ್ತಿಗಳು ಏಳು. ಕಾರಕಗಳು ಆರು. ಷಷ್ಠೀ ವಿಭಕ್ತಿಯು ಕಾರಕವಲ್ಲ; ಅದು ಸಂಬಂಧ ಸೂಚಕ. ಪ್ರತಿಯೊಂದು ನಾಮಪದಗಳಿಗೂ ಏಳು ವಿಭಕ್ತಿರೂಪಗಳು ಇರುತ್ತವೆ. ಷಷ್ಠಿ ವಿಭಕ್ತಿಯೊಂದನ್ನು ಬಿಟ್ಟು ಉಳಿದ ಆರು ವಿಭಕ್ತಿಗಳಿಗೂ ಆರು ಕಾರಕಾರ್ಥಗಳು ಇರುತ್ತವೆ. ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಮತ್ತು ಅಧಿಕರಣ – ಇವುಗಳೇ ಕಾರಕಗಳು.
- ಕರ್ತೃ ಕಾರಕ – ಪ್ರಥಮಾ ವಿಭಕ್ತಿ : ಕರ್ತೃ ಎಂದರೆ ಕಾರ್ಯವನ್ನು ಮಾಡುವವನು. ಕ್ರಿಯಾಪದವು ಸೂಚಿಸುವ ಕ್ರಿಯೆಯನ್ನು ಮಾಡುವವನು 'ಕರ್ತೃ.' ಕಾರ್ಯವನ್ನು ಸ್ವತಂತ್ರವಾಗಿ ಮಾಡುವವನು ಕರ್ತೃ.
- ಹಳಗನ್ನಡದ ಪ್ರಥಮಾ ವಿಭಕ್ತಿ ಪ್ರತ್ಯಯವಾದ 'ಮ್' / ಹೊಸಗನ್ನಡದ ಪ್ರಥಮಾ ವಿಭಕ್ತಿ ಪ್ರತ್ಯಯವಾದ 'ಉ' ಕಾರವೇ 'ಕರ್ತೃಕಾರಕ'. ಪ್ರಥಮಾ ವಿಭಕ್ತಿ ಪ್ರತ್ಯಯವು ಸೇರಿರುವ ನಾಮಪದವೇ 'ಕರ್ತ್ರರ್ಥ ನಾಮಪದ.'

  ಕರ್ತರಿ ಪ್ರಯೋಗದಲ್ಲಿ ಕರ್ತೃವಾಚಕವು ಪ್ರಥಮಾ ವಿಭಕ್ತಿಯಲ್ಲಿರುತ್ತದೆ.
  ಕರ್ಮಣಿ ಪ್ರಯೋಗದಲ್ಲಿ ಕರ್ತೃವಾಚಕವು ತೃತೀಯಾ ವಿಭಕ್ತಿಯಲ್ಲಿರುತ್ತದೆ.
  ಉದಾಹರಣೆ : ಕರ್ತರೀ ಪ್ರಯೋಗ :
  ಸಕರ್ಮಕ ವಾಕ್ಯ : ಶರಣಂ ವಚನಮಂ ಓದುವಂ.
  (ಶರಣ + ಮ್ = ಶರಣಂ)
  ಶರಣನು ವಚನವನ್ನು ಓದುವನು.
  (ಶರಣ + ನ್ + ಉ = ಶರಣನು)
  ಅಕರ್ಮಕ ವಾಕ್ಯ : ಶರಣಂ ಮಲಗಿದಂ
  (ಶರಣಂ = ಶರಣ + ಮ್)
  ಶರಣನು ಮಲಗಿದನು.
  (ಶರಣನು = ಶರಣ + ನ್ + ಉ)
  ಕರ್ಮಣೀ ಪ್ರಯೋಗ : ಶರಣನಿಂ ವಚನಂ ಓದಲ್ಪಟ್ಟಿತು.
  (ಶರಣ + ನ್ + ಇಮ್)
  ಶರಣನಿಂದ ವಚನವು ಓದಲ್ಪಟ್ಟಿತು.
  (ಶರಣ + ನ್ + ಇಂದ)
- ಸಂಬೋಧನಾ ಕಾರಕ – ಸಂಬೋಧನಾ ವಿಭಕ್ತಿ : ಕಾರ್ಯದಲ್ಲಿ ತೊಡಗಿದವರನ್ನಾಗಲಿ, ದೂರದಲ್ಲಿದ್ದವರನ್ನಾಗಲಿ ಅಥವಾ ಹತ್ತಿರದಲ್ಲಿದ್ದವರನ್ನಾಗಲಿ ಕರೆಯುವಿಕೆಯಿಂದ, ಇಲ್ಲವೆ ಮೊರೆಯಿಡುವಿಕೆಯಿಂದ ನಮ್ಮ ಕಡೆಗೆ ಅಭಿಮುಖ (ಅಭಿಮುಖೀಕರಣ) ಮಾಡಿಕೊಳ್ಳುವುದೇ 'ಸಂಬೋಧನಾ ವಿಭಕ್ತಿ'.
- ಸಂಬೋಧನಾ ವಿಭಕ್ತಿಯಲ್ಲಿ ಆ, ಈ, ಏ, ಇರಾ ಎಂಬ ಪ್ರತ್ಯಯ ಮೊದಲಾದ ಪ್ರತ್ಯಯಗಳು ಬಂದರೂ ನಾಮಪದವು ಪ್ರಥಮಾ ವಿಭಕ್ತಿಯಲ್ಲಿಯೇ ಇರುವುದರಿಂದ ಇದನ್ನು 'ಸಂಬೋಧನಾ ಪ್ರಥಮಾ' ಎಂದು ಕರೆಯಲಾಗುತ್ತದೆ. ಸರ್ವನಾಮಗಳಿಗೆ ಸಂಬೋಧನಾ ಪ್ರಥಮಾ ವಿಭಕ್ತಿ ಪ್ರತ್ಯಯವು ಸೇರುವುದಿಲ್ಲ.

  ಉದಾಹರಣೆಗಳು :

  ಅಕ್ಕಾ, ಬೇಗ ಬಾ. (ಅಕ್ಕ + ಆ – ಕರೆಯುವಿಕೆಯಲ್ಲಿ ಸಂಬೋಧನಾ ವಿಭಕ್ತಿ ಪ್ರತ್ಯಯ 'ಆ')
  ತಂಗೀ, ಅಲ್ಲಿ ನೋಡು. (ತಂಗಿ + ಈ– ಕರೆಯುವಿಕೆಯಲ್ಲಿ ಸಂಬೋಧನಾ ವಿಭಕ್ತಿಪ್ರತ್ಯಯ 'ಈ')

ಶರಣನೇ, ವಚನವನ್ನು ಹಾಡು. (ಶರಣ+ನ್+ಏ – ಮೊರೆಯಿಡುವಿಕೆಯಲ್ಲಿ ಸಂಬೋಧನಾ ವಿಭಕ್ತಿಪ್ರತ್ಯಯ 'ಏ')
ಶರಣರಿರಾ, ದಾಸೋಹಕ್ಕೆ ಬನ್ನಿರಿ.

(ಶರಣ + ಅರ್ + ಇರಾ– ಕರೆಯುವಿಕೆಯಲ್ಲಿ ಸಂಬೋಧನಾ ವಿಭಕ್ತಿ ಪ್ರತ್ಯಯ 'ಇರಾ')

- ಕರ್ಮ ಕಾರಕ – ದ್ವಿತೀಯಾ ವಿಭಕ್ತಿ : ಕರ್ಮ ಎಂದರೆ ಕಾರ್ಯ. ಕರ್ತೃವು ತನಗೆ ಇಷ್ಟವಾದ ಯಾವ ಕ್ರಿಯೆಯನ್ನು ಮಾಡುವನೋ ಅದೇ 'ಕರ್ಮ'. ವಾಕ್ಯದಲ್ಲಿರುವ ಕ್ರಿಯಾಪದದಿಂದ ಸೂಚಿತವಾದ ಕ್ರಿಯೆಯ ಪರಿಣಾಮವು ಯಾವುದರ ಮೇಲೆ ಆಗುವುದೋ ಅದೇ 'ಕರ್ಮ.' ಕರ್ತೃವಿಗೆ ಇಷ್ಟವಾದುದು ಕರ್ಮ.
- ಹಳಗನ್ನಡದ ದ್ವಿತೀಯಾ ವಿಭಕ್ತಿ ಪ್ರತ್ಯಯವಾದ 'ಅಮ್' / ಹೊಸಗನ್ನಡದ ದ್ವಿತೀಯಾ ವಿಭಕ್ತಿ ಪ್ರತ್ಯಯವಾದ 'ಅನ್ನು' ಕಾರವೇ 'ಕರ್ಮ ಕಾರಕ'.
- ದ್ವಿತೀಯಾ ವಿಭಕ್ತಿ ಪ್ರತ್ಯಯವು ಸೇರಿರುವ ನಾಮಪದವೇ 'ಕರ್ಮಾರ್ಥ ನಾಮಪದ.'
ಉದಾಹರಣೆ :

(ಅ) ಸಕರ್ಮಕ ಕರ್ತರೀ ಪ್ರಯೋಗದಲ್ಲಿ ಕರ್ಮಪದಕ್ಕೆ ದ್ವಿತೀಯಾ ವಿಭಕ್ತಿ ಬರುತ್ತದೆ.
ಶರಣಂ ವಚನಮಂ ಓದುವಂ. (ವಚನಮಂ = ವಚನ + ಮ್ + ಅಮ್)
ಶರಣನು ವಚನವನ್ನು ಓದುವನು. (ವಚನವನ್ನು = ವಚನ + ವ್ + ಅನ್ನು)

(ಆ) ಸಕರ್ಮಕ ಕರ್ತರೀ ಪ್ರಯೋಗದಲ್ಲಿ ಕೆಲವೆಡೆ ಎರಡು ಕರ್ಮಪದಗಳು ಬರುತ್ತವೆ.
ಶರಣಂ ವಚನಮಂ ಪಾಡಂ ಪಾಡಿದಂ.
(ವಚನಮಂ = ವಚನ + ಮ್ + ಅಮ್/ ಪಾಡು + ಅಮ್)
ಶರಣನು ವಚನವನ್ನು, ಹಾಡನ್ನು ಹಾಡಿದನು.
(ವಚನವನ್ನು = ವಚನ +ವ್+ ಅನ್ನು/ಹಾಡು + ಅನ್ನು)

(ಇ) ಅಕರ್ಮಕ ಕರ್ತರೀ ಪ್ರಯೋಗದಲ್ಲಿ ಕರ್ಮ ಇರುವುದಿಲ್ಲವಾದ್ದರಿಂದ ದ್ವಿತೀಯಾ ವಿಭಕ್ತಿ ಬರುವುದಿಲ್ಲ.
ಶರಣಂ ಅನುಭವಮಂಟಪಕ್ಕೆ ಪೋದಂ. (ಕರ್ಮಪದವಿಲ್ಲ)
ಶರಣನು ಅನುಭವಮಂಟಪಕ್ಕೆ ಹೋದನು. (ಕರ್ಮಪದವಿಲ್ಲ)

(ಈ) ಒಂದು ಕಾರ್ಯವು ಸತತವಾಗಿ (ಎಡೆಬಿಡದೆ) ನಡೆಯಿತು ಎಂಬರ್ಥದಲ್ಲಿ ದ್ವಿತೀಯಾ ವಿಭಕ್ತಿ ಬರುತ್ತದೆ.
ಶರಣಂ ಎರಡು ಗಾವುದಗಳಂ ಓಡಿದಂ. (ಗಾವುದಮಂ = ಗಾವುದ + ಗಳ್ + ಅಮ್)
ಶರಣನು ಎರಡು ಗಾವುದಗಳನ್ನು ಓಡಿದನು. (ಗಾವುದಗಳನ್ನು = ಗಾವುದ + ಗಳ್ + ಅನ್ನು)

- ಕರಣ ಕಾರಕ – ತೃತೀಯಾ ವಿಭಕ್ತಿ : ಕರಣ ಎಂದರೆ ಸಾಧನ. ಯಾವ ವಸ್ತುವಿನಿಂದ ಅಥವಾ ವ್ಯಕ್ತಿಯಿಂದ ಮಾತ್ರ ಆ ಕಾರ್ಯವು ಸಂಪನ್ನವಾಗುವುದೋ ಅದರ ಮೇಲೆ ತೃತೀಯಾ ವಿಭಕ್ತಿ ಪ್ರತ್ಯಯವು ಬರುತ್ತದೆ. ಇದನ್ನು 'ಕರಣ ಕಾರಕ' ಎನ್ನುವರು.
- ಹಳಗನ್ನಡದ ತೃತೀಯಾ ವಿಭಕ್ತಿ ಪ್ರತ್ಯಯವಾದ 'ಇಮ್' / ಹೊಸಗನ್ನಡದ ತೃತೀಯಾ ವಿಭಕ್ತಿ ಪ್ರತ್ಯಯವಾದ 'ಇಂದ' ಕಾರವೇ 'ಕರಣ ಕಾರಕ'.
- ತೃತೀಯಾ ವಿಭಕ್ತಿ ಪ್ರತ್ಯಯವು ಸೇರಿರುವ ನಾಮಪದವೇ 'ಕರಣಾರ್ಥ ನಾಮಪದ.'
ಉದಾಹರಣೆ :

(ಅ) ಕರ್ಮಣೀ ಪ್ರಯೋಗ ವಾಕ್ಯದಲ್ಲಿ 'ಕರ್ತೃಪದ'ಕ್ಕೆ ತೃತೀಯಾ ವಿಭಕ್ತಿ ಬರುತ್ತದೆ.
ಕರ್ಮಣಿ ಪ್ರಯೋಗ : ಶರಣನಿಂ ವಚನಂ ಓದಲ್ಪಟ್ಟಿತು.
(ಶರಣನಿಂ = ಶರಣ + ನ್ + ಇಮ್)

ಶರಣನಿಂದ ವಚನವು ಓದಲ್ಪಟ್ಟಿತು.
(ಶರಣನಿಂದ = ಶರಣ + ನ್ + ಇಂದ)
(ಆ) ಕರ್ತರೀ ಪ್ರಯೋಗ ವಾಕ್ಯದಲ್ಲಿ 'ಕರಣಾರ್ಥ'ದಲ್ಲಿ (ಸಾಧನ) ತೃತೀಯಾ ವಿಭಕ್ತಿ ಬರುತ್ತದೆ.
ಕರಣಾರ್ಥ : ಶರಣಂ ಲೇಖನಿಯಿಂ ವಚನಮಂ ಬರೆದಂ.
(ಲೇಖನಿಯಿಂ = ಲೇಖನಿ + ಯ್ + ಇಮ್)
ಶರಣನು ಲೇಖನಿಯಿಂದ ವಚನವನ್ನು ಬರೆದನು.
(ಲೇಖನಿಯಿಂದ=ಲೇಖನಿ+ಯ್+ಇಂದ)
(ಇ) ಕರ್ತರೀ ಪ್ರಯೋಗ ವಾಕ್ಯದಲ್ಲಿ 'ಕಾರಣಾರ್ಥ'ದಲ್ಲಿ ತೃತೀಯಾ ವಿಭಕ್ತಿ ಬರುತ್ತದೆ.
ಕಾರಣಾರ್ಥ : ವಿದ್ಯೆ ಜ್ಞಾನದಿಂ ಬರ್ಪುದು. (ಜ್ಞಾನದಿಂ = ಜ್ಞಾನ + ದ್ + ಇಮ್)
ವಿದ್ಯೆಯು ಜ್ಞಾನದಿಂದ ಬರುವುದು. (ಜ್ಞಾನದಿಂದ = ಜ್ಞಾನ + ದ್ + ಇಂದ)
(ಈ) ವಸ್ತುವಿಗೆ ಯಾವ ಅಂಗದ ಪ್ರಕಾರದಿಂದ ಹೆಸರು ಬಂದಿರುವುದೋ ಅದನ್ನು ಹೇಳುವ ಶಬ್ದಕ್ಕೆ ತೃತೀಯಾ ವಿಭಕ್ತಿಯು ಬರುತ್ತದೆ.
ಪ್ರಕಾರಾರ್ಥ : ಶರಣಂ ಕಾಲಿನಿಂ ಕುಂಟಂ. (ಕಾಲ್ + ಇನ್ + ಇಮ್)
ಶರಣನು ಕಾಲಿನಿಂದ ಕುಂಟನು. (ಕಾಲು + ಇನ್ + ಇಂದ)
ಶರಣಂ ರೂಪಿನಿಂ ಚೆಲುವಂ. (ರೂಪ + ಇನ್ + ಇಮ್)
ಶರಣನು ರೂಪಿನಿಂದ ಚೆಲುವನು. (ರೂಪ + ಇನ್ + ಇಂದ)
ಶರಣಂ ಗುಣದಿಂ ಒಳ್ಳೆಯವಂ (ಗುಣ + ದ್ + ಇಮ್)
ಶರಣನು ಗುಣದಿಂದ ಒಳ್ಳೆಯವನು. (ಗುಣ + ದ್ + ಇಂದ)
(ಉ) ವಿಶಿಷ್ಟ ಲಕ್ಷಣ ಹೊಂದಿದ ವ್ಯಕ್ತಿಯನ್ನು ಸೂಚಿಸುವ ಶಬ್ದಕ್ಕೆ ತೃತೀಯಾ ವಿಭಕ್ತಿ ಬರುತ್ತದೆ.
ಲಕ್ಷಣಾರ್ಥ : ಶರಣಂ ಜ್ಞಾನದಿಂ ವೃದ್ಧಂ. (ಜ್ಞಾನದಿಂ = ಜ್ಞಾನ + ದ್ + ಇಮ್)
ಶರಣನು ಜ್ಞಾನದಿಂದ ವೃದ್ಧನು. (ಜ್ಞಾನದಿಂದ = ಜ್ಞಾನ + ದ್ + ಇಂದ)
(ಊ) ಒಂದು ಕಾರ್ಯವು ಎಡೆಬಿಡದೆ ನಡೆಯಿತು ಎಂದು ತೋರುವಾಗ ತೃತೀಯಾ ವಿಭಕ್ತಿ ಬರುತ್ತದೆ..
ಶರಣಂ ಒಂದು ವರ್ಷದಿಂ ಗ್ರಂಥಮಂ ಓದಿದಂ. (ವರ್ಷದಿಂ = ವರ್ಷ + ದ್ + ಇಮ್)
ಶರಣನು ಒಂದು ವರ್ಷದಿಂದ ಗ್ರಂಥವನ್ನು ಓದಿದನು. (ವರ್ಷದಿಂದ=ವರ್ಷ+ದ್+ಇಂದ)
(ಋ) ಸಕರ್ಮಕಧಾತುವು ಪ್ರೇರಣಾರ್ಥದಲ್ಲಿ ಇಸು ಪ್ರತ್ಯಯವನ್ನು ಹೊಂದಿದಾಗ ಪ್ರೇರ್ಯ ಕರ್ತೃವಾಚಕದ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ.
ಶರಣಂ ಶಿಷ್ಯರಿಂ ವಚನಂಗಳಂ ಓದಿಸಿದಂ. (ಶಿಷ್ಯರಿಂ = ಶಿಷ್ಯ + ಅರ್ + ಇಮ್)
ಶರಣನು ಶಿಷ್ಯರಿಂದ ವಚನಗಳನ್ನು ಓದಿಸಿದನು. (ಶಿಷ್ಯರಿಂದ = ಶಿಷ್ಯ + ಅರ್ + ಇಂದ)

- ಸಂಪ್ರದಾನ ಕಾರಕ – ಚತುರ್ಥೀ ವಿಭಕ್ತಿ : ಸಂಪ್ರದಾನ ಎಂದರೆ ಕೊಡುವುದು. ಕೊಡುವ ವಸ್ತುವು ಯಾರಿಗೆ ಸೇರುವುದೋ ಆ ಶಬ್ದಕ್ಕೆ ಚತುರ್ಥೀ ವಿಭಕ್ತಿಯು ಬರುತ್ತದೆ. ಇದನ್ನು 'ಸಂಪ್ರದಾನ ಕಾರಕ' ಎನ್ನುವರು. ಯಾವ ವ್ಯಕ್ತಿಯು ಸಂತೋಷದಿಂದ ದಾನ ಕೊಡುವನೋ ಅದನ್ನು ತೆಗೆದುಕೊಳ್ಳುವ ವ್ಯಕ್ತಿಗೆ ಚತುರ್ಥೀ ವಿಭಕ್ತಿಯು ಬರುತ್ತದೆ. ಇದನ್ನು ಸಂಪ್ರದಾನ ಕಾರಕ ಎನ್ನುವರು.
- ಹಳಗನ್ನಡದ ಚತುರ್ಥೀ ವಿಭಕ್ತಿ ಪ್ರತ್ಯಯವಾದ 'ಕೆ / ಗೆ' ಹೊಸಗನ್ನಡದ ಚತುರ್ಥೀ ವಿಭಕ್ತಿ ಪ್ರತ್ಯಯವಾದ 'ಕೆ / ಗೆ' ಕಾರವೇ 'ಸಂಪ್ರದಾನ ಕಾರಕ'. (ಚತುರ್ಥೀ ವಿಭಕ್ತಿಯ ವಿವಿಧ ಪ್ರತ್ಯಯಗಳು ಕೆ / ಕ್ಕೆ / ಅಕ್ಕೆ / ಗೆ / ಇಗೆ )
- ಚತುರ್ಥೀ ವಿಭಕ್ತಿ ಪ್ರತ್ಯಯವು ಸೇರಿರುವ ನಾಮಪದವೇ 'ಸಂಪ್ರದಾನಾರ್ಥ ನಾಮಪದ.'

(ಅ) ಸಂಪ್ರದಾನಾರ್ಥದಲ್ಲಿ ಚತುರ್ಥೀ ವಿಭಕ್ತಿ ಬರುತ್ತದೆ.
ಶರಣಂ ಶಿಷ್ಯಂಗೆ ಪಾಲಂ ಕೊಟ್ಟಂ. (ಶಿಷ್ಯಂಗೆ = ಶಿಷ್ಯ + ಮ್ + ಗೆ)

ಶರಣನು ಶಿಷ್ಯನಿಗೆ ಹಾಲನ್ನು ಕೊಟ್ಟನು. (ಶಿಷ್ಯನಿಗೆ = ಶಿಷ್ಯ + ನ್ + ಇಗೆ)
(ಆ) ಉದ್ದೇಶಾರ್ಥದಲ್ಲಿ ಚತುರ್ಥೀ ವಿಭಕ್ತಿ ಬರುತ್ತದೆ.
ಶರಣಂ ವಿನೋದಕ್ಕೆ ಪರಿಹಾಸ್ಯಮಂ ಮಾಡಿದಂ. (ವಿನೋದಕ್ಕೆ = ವಿನೋದ + ಕ್ಕೆ)
ಶರಣನು ವಿನೋದಕ್ಕೆ ಪರಿಹಾಸ್ಯವನ್ನು ಮಾಡಿದನು. (ವಿನೋದಕ್ಕೆ = ವಿನೋದ + ಕ್ಕೆ)
(ಇ) ಸೂಚಕಾರ್ಥದಲ್ಲಿ ಚತುರ್ಥೀ ವಿಭಕ್ತಿ ಬರುತ್ತದೆ.
ವಿನಾಶಕಾಲಕ್ಕೆ ವಿಪರೀತ ಬುದ್ಧಿ ಬರ್ಪುದು. (ವಿನಾಶಕಾಲಕ್ಕೆ = ವಿನಾಶಕಾಲ + ಕ್ಕೆ)
ವಿನಾಶಕಾಲಕ್ಕೆ ವಿಪರೀತ ಬುದ್ಧಿಯು ಬರುವುದು. (ವಿನಾಶಕಾಲಕ್ಕೆ = ವಿನಾಶಕಾಲ + ಕ್ಕೆ)
(ಈ) ಕಾರಣಾರ್ಥದಲ್ಲಿ ಚತುರ್ಥೀ ವಿಭಕ್ತಿ ಬರುತ್ತದೆ.
ದುರ್ಬುದ್ಧಿ ಹುಟ್ಟುವುದು ಕೇಡಿಗೆ. (ಕೇಡಿಗೆ = ಕೇಡು + ಇಗೆ)
(ಉ) ಸಾಮಾನ್ಯವಾಗಿ ಅಸಹನೆ, ದ್ರೋಹ, ಮಾತ್ಸರ್ಯ, ಭಯ, ಆಧಿಕ್ಯ (ಹೆಚ್ಚೆಂದು ತೋರುವಿಕೆ), ಸ್ವಭಾವ,
ನಮಸ್ಕಾರ, ಹಿತ, ಅಹಿತ, ಹೋಲಿಕೆ ಮೊದಲಾದವು ತೋರುವಾಗಲೂ ಚತುರ್ಥೀ ವಿಭಕ್ತಿಯು ಬರುತ್ತದೆ.

ಅಸಹನೆಗೆ : ಬೇಹಾರಿಂಗೆ ಬೇಹಾರಿ ಅಸಹನೆಯಂ ತೋರುವಂ.
(ಬೇಹಾರಿಂಗೆ = ಬೇಹಾರಿ+ಮ್+ಗೆ)
: ವ್ಯಾಪಾರಿಗೆ ವ್ಯಾಪಾರಿಯು ಅಸಹನೆಯನ್ನು ತೋರುವರು.
(ವ್ಯಾಪಾರಿಗೆ=ವ್ಯಾಪಾರ+ಇಗೆ)

ದ್ರೋಹಕ್ಕೆ : ದುರ್ಜನರ್ ಸಜ್ಜನರಿಂಗೆ ದ್ರೋಹಮಂ ಬಗೆವರ್.
(ಸಜ್ಜನರಿಂಗೆ= ಸಜ್ಜನ+ಅರ್+ಮ್+ಗೆ)
: ದುರ್ಜನರು ಸಜ್ಜನರಿಗೆ ದ್ರೋಹವನ್ನು ಬಗೆಯುವರು.
(ಸಜ್ಜನರಿಗೆ=ಸಜ್ಜನ+ಅರ್+ಇಗೆ)

ಮಾತ್ಸರ್ಯಕ್ಕೆ : ಸವತಿಗೆ ಸವತಿ ಮಾತ್ಸರ್ಯಮಂ ತೋರುವಳ್.
(ಸವತಿಗೆ = ಸವತಿ + ಗೆ)
: ಸವತಿಗೆ ಸವತಿಯು ಮಾತ್ಸರ್ಯವನ್ನು ತೋರುವಳು.
(ಸವತಿಗೆ = ಸವತಿ + ಗೆ)

ಭಯಕ್ಕೆ : ಸತ್ಪುರುಷರ್ ಪಾಪಕ್ಕೆ ಅಂಜುವರ್. (ಪಾಪಕ್ಕೆ = ಪಾಪ + ಕ್ಕೆ)
: ಸತ್ಪುರುಷರು ಪಾಪಕ್ಕೆ ಅಂಜುವರು. (ಪಾಪಕ್ಕೆ = ಪಾಪ + ಕ್ಕೆ)

ಆಧಿಕ್ಯ : ರಾಮಂ ಲಕ್ಷ್ಮಣಂಗೆ ದೊಡ್ಡವಂ. (ಲಕ್ಷ್ಮಣಂಗೆ = ಲಕ್ಷ್ಮಣ + ಮ್ + ಗೆ)
: ರಾಮನು ಲಕ್ಷ್ಮಣನಿಗಿಂತ ದೊಡ್ಡವನು.
(ಲಕ್ಷ್ಮಣನಿಗಿಂತ= ಲಕ್ಷ್ಮಣ+ನ್+ಇಗೆ+ಇಂತ)

ಸ್ವಭಾವ : ಮಕ್ಕಳಿಂಗೆ ಚಾಪಲ್ಯಂ ಸಹಜಂ. (ಮಕ್ಕಳಿಂಗೆ = ಮಕ್ಕಳು + ಇಮ್ + ಗೆ)
: ಮಕ್ಕಳಿಗೆ ಚಾಪಲ್ಯವು ಸಹಜವಾದುದು. (ಮಕ್ಕಳಿಗೆ = ಮಕ್ಕಳು + ಇಗೆ)

ಅಹಿತಕ್ಕೆ : ಲೋಕಕ್ಕೆ ಮಳೆಯಾಗದಿರುವುದು ಅಹಿತಂ. (ಲೋಕಕ್ಕೆ = ಲೋಕ + ಕ್ಕೆ)
: ಲೋಕಕ್ಕೆ ಮಳೆಯಾಗದಿರುವುದು ಅಹಿತವಾದದ್ದು.
(ಲೋಕಕ್ಕೆ = ಲೋಕ + ಕ್ಕೆ)

ಹಿತಕ್ಕೆ : ರೋಗಿಗೆ ಔಷಧಂ ಹಿತಂ. (ರೋಗಿಗೆ = ರೋಗಿ + ಗೆ)
: ರೋಗಿಗೆ ಔಷಧವು ಹಿತವಾದದ್ದು. (ರೋಗಿಗೆ = ರೋಗಿ + ಗೆ)

ಹೋಲಿಕೆಗೆ : ರಾಮಂ ಕೃಷ್ಣಂಗೆ ಸಮಾನಂ. (ಕೃಷ್ಣಂಗೆ = ಕೃಷ್ಣ + ಮ್ + ಗೆ)
: ರಾಮನು ಕೃಷ್ಣನಿಗೆ ಸಮಾನನು. (ಕೃಷ್ಣ +ನ್ + ಇಗೆ)

ಧಾತುಗಳಿಗೆ ಪ್ರೇರಣಾರ್ಥದಲ್ಲಿ 'ಇಸು' ಪ್ರತ್ಯಯಗಳು ಬಂದು, ಅವು ಆಖ್ಯಾತ ಪ್ರತ್ಯಯವನ್ನು ಪಡೆದು ಕ್ರಿಯಾಪದಗಳಾದಾಗ ಪ್ರೇರ್ಯ ಕರ್ತೃವಾಚಕದ ಮೇಲೆ ಚತುರ್ಥೀ ವಿಭಕ್ತಿ ಬರುತ್ತದೆ.
ಉದಾಹರಣೆ :
ತಾಯಿ ಮಗುವಿಂಗೆ ಪಾಲಂ ಕುಡಿಸಿದಳ್. (ಮಗುವಿಂಗೆ = ಮಗು + ವ್ + ಇಮ್ + ಗೆ)
ತಾಯಿಯು ಮಗುವಿಗೆ ಹಾಲನ್ನು ಕುಡಿಸಿದಳು. (ಮಗುವಿಗೆ = ಮಗು + ವ್ + ಇಗೆ)

- ಅಪಾದಾನ ಕಾರಕ – ಪಂಚಮೀ ವಿಭಕ್ತಿ : ಅಪಾದಾನ ಎಂದರೆ ಅಗಲಿಕೆ. ಯಾವುದರ ದೆಸೆಯಿಂದ ಅಗಲಿಕೆಯುಂಟಾಗುವುದೋ ಆ ಶಬ್ದದ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ. ಇದನ್ನು 'ಅಪಾದಾನ ಕಾರಕ' ಎನ್ನುವರು. ಯಾವುದರ ದೆಸೆಯಿಂದ ಬೇರ್ಪಡುವ ಅಥವಾ ವಿಯೋಗವಿರುವುದೋ, ಅಪಾಯವಿರುವುದೋ, ಎರಡು ವಸ್ತುಗಳಲ್ಲಿ ಅಗಲಿಕೆಯುಂಟಾದಾಗ ಯಾವುದು ಅಚಲವಾಗಿದೆಯೋ ಆ ಶಬ್ದಕ್ಕೆ ಪಂಚಮೀ ವಿಭಕ್ತಿಯು ಬರುತ್ತದೆ.
- ಹಳಗನ್ನಡದ ಪಂಚಮೀ ವಿಭಕ್ತಿ ಪ್ರತ್ಯಯವಾದ 'ಅತ್ತಣಿಮ್' / ಹೊಸಗನ್ನಡದ ಪಂಚಮೀ ವಿಭಕ್ತಿ ಪ್ರತ್ಯಯವಾದ 'ದೆಸೆಯಿಂದ' ಕಾರವೇ 'ಅಪಾದಾನ ಕಾರಕ'.
- ಪಂಚಮೀ ವಿಭಕ್ತಿ ಪ್ರತ್ಯಯವು ಸೇರಿರುವ ನಾಮಪದವೇ 'ಅಪಾದಾನಾರ್ಥ ನಾಮಪದ.'
  ಉದಾಹರಣೆ :
  (ಅ) ಅಗಲುವಿಕೆ ಉಂಟಾದಾಗ ಪಂಚಮೀ ವಿಭಕ್ತಿ ಬರುತ್ತದೆ.
  ಮರದತ್ತಣಿಂ ಪಣ್ಣು ಉದುರಿತು,
  (ಮರದತ್ತಣಿಂ = ಮರ + ದ್ + ಅತ್ತಣಿಮ್)
  ಮರದ ದೆಸೆಯಿಂದ ಹಣ್ಣು ಉದುರಿತು.
  (ಮರದ ದೆಸೆಯಿಂದ = ಮರ + ದ + ದೆಸೆಯಿಂದ)
  (ಆ) ನಿಮಿತ್ತ ಕಾರಣ ತೋರುವಾಗ ಪಂಚಮೀ ವಿಭಕ್ತಿ ಬರುತ್ತದೆ,
  ಬೆಂಕಿಯತ್ತಣಿಂ ಪೊಗೆ ಬರ್ಪುದು.
  ಬೆಂಕಿಯದೆಸೆಯಿಂದ ಹೊಗೆ ಬರುವುದು.
  (ಇ) 'ಭಯ' ತೋರುವಾಗ ಯಾವುದರ ದೆಸೆಯಿಂದ ಭಯವು ಉಂಟಾಗುವುದೋ ಆ ಶಬ್ದದ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ.
  ಕಳ್ಳರತ್ತಣಿಂ ಭಯಂ.
  ಕಳ್ಳರದೆಸೆಯಿಂದ ಭಯವು.
- ವಿಶೇಷ ವಿಚಾರ : ಹೊಸಗನ್ನಡದಲ್ಲಿ 'ದೆಸೆಯಿಂದ' ಪ್ರತ್ಯಯವನ್ನು ಬಳಸುವ ರೂಢಿಯಿಲ್ಲ. ಇದರ ಬದಲು 'ಇಂದ' ಪ್ರತ್ಯಯವನ್ನೇ ಬಳಸಲಾಗುತ್ತದೆ.
- ಸಂಬಂಧ – ಷಷ್ಠೀ ವಿಭಕ್ತಿ : ಇದು ಕಾರಕವಲ್ಲ. ಇದು ವಾಕ್ಯದಲ್ಲಿಯ ಎರಡು ನಾಮಪದಗಳ ಸಂಬಂಧವನ್ನು ಮಾತ್ರ ತಿಳಿಸುತ್ತದೆ. ಕಾರಕ ಪ್ರಾತಿಪದಿಕಾರ್ಥಗಳಿಗೆ ಅತಿರಿಕ್ತವಾದ ಸ್ವಸ್ವಾಮಿಭಾವಗಳ ಸಂಬಂಧವಿದ್ದಾಗ ಷಷ್ಠೀ ವಿಭಕ್ತಿಯು ಬರುತ್ತದೆ. ಎಲ್ಲೆಲ್ಲಿ ಸಂಬಂಧವು ಕಂಡುಬರುವುದೋ ಅಲ್ಲೆಲ್ಲ ಷಷ್ಠೀ ವಿಭಕ್ತಿಯು ಬರುತ್ತದೆ. ಉಳಿದ ಆರೂ ವಿಭಕ್ತಿಗಳ ಕಾರಕಾರ್ಥ ಸಂಬಂಧದಲ್ಲೆಲ್ಲ ಇದು ಬರುವುದರಿಂದ 'ಷಷ್ಠೀ ವಿಭಕ್ತಿ'ಯು ಕಾರಕವಲ್ಲ.
- ಹಳಗನ್ನಡದ ಷಷ್ಠೀ ವಿಭಕ್ತಿ ಪ್ರತ್ಯಯವಾದ 'ಅ' / ಹೊಸಗನ್ನಡದ ಷಷ್ಠೀ ವಿಭಕ್ತಿ ಪ್ರತ್ಯಯವಾದ 'ಅ' ಕಾರವೇ ' ಎರಡು ನಾಮಪದಗಳ ಸಂಬಂಧವನ್ನು ಹೇಳುವ 'ಸಂಬಂಧಾರ್ಥಕ'.
- ಷಷ್ಠೀ ವಿಭಕ್ತಿ ಪ್ರತ್ಯಯವು ಸೇರಿರುವ ನಾಮಪದವೇ 'ಸಂಬಂಧಾರ್ಥಕ.'
  ಉದಾಹರಣೆ : ರಾಜನ ಪುತ್ರಂ. ರಾಜನ ಪುತ್ರನು.
  ತೇರಿನ ಕಳಸಂ. ತೇರಿನ ಕಳಸ.
  ಮಸಿಯ ಬರೆಹಂ. ಮಸಿಯ ಬರೆಹ.

➢ ಅಧಿಕರಣ ಕಾರಕ – ಸಪ್ತಮೀ ವಿಭಕ್ತಿ : ಅಧಿಕರಣ ಎಂದರೆ ಆಧಾರ (ಸ್ಥಳ). ಕ್ರಿಯಾಪದದಿಂದ ನಿರ್ದಿಷ್ಟವಾದ ಕ್ರಿಯೆಯು ನಡೆಯುವ ಸ್ಥಳ ಅಥವಾ ಆಧಾರವನ್ನು ಸೂಚಿಸುವ ಶಬ್ದಕ್ಕೆ ಸಪ್ತಮೀ ವಿಭಕ್ತಿಯು ಬರುತ್ತದೆ. ಇದನ್ನು 'ಅಧಿಕರಣ ಕಾರಕ' ಎನ್ನುವರು. ಕ್ರಿಯಾಪದವು ಹೇಳುವ ಕ್ರಿಯೆಯು ಕರ್ತೃವಿನ ಕರ್ಮದ ಮೂಲಕವಾಗಿ ನಡೆಯುವ ಸ್ಥಳ ಅಥವಾ ಆಧಾರವೇ 'ಅಧಿಕರಣ ಕಾರಕ'.

➢ ಹಳಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯವಾದ 'ಒಳ್' / ಹೊಸಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯವಾದ 'ಅಲ್ಲಿ' ಕಾರವೇ "ಅಧಿಕರಣ ಕಾರಕ'. (ಸಪ್ತಮೀ ವಿಭಕ್ತಿಯ ವಿವಿಧ ಪ್ರತ್ಯಯಗಳು ಒಳ್ / ಒಳು / ಎ / ಅಲ್ಲಿ / ಅಲಿ)

➢ ಸಪ್ತಮೀ ವಿಭಕ್ತಿ ಪ್ರತ್ಯಯವು ಸೇರಿರುವ ನಾಮಪದವೇ 'ಅಧಿಕರಣಾರ್ಥ ನಾಮಪದ.'
ಉದಾಹರಣೆ :
(ಅ) ಆಧಾರಾರ್ಥದಲ್ಲಿ ಸಪ್ತಮೀ ವಿಭಕ್ತಿ ಬರುತ್ತದೆ.
ಪುಸ್ತಕದೊಳ್ ವಿವರಣೆ ಇರ್ಕುಂ.
ಪುಸ್ತಕದಲ್ಲಿ ವಿವರಣೆ ಇದೆ.
(ಆ) ಗುಂಪಿನಿಂದ (ಸಮುದಾಯದಿಂದ) ಒಂದನ್ನು ಬೇರ್ಪಡಿಸಿ ಹೇಳುವಾಗ ಗುಂಪನ್ನು ಸೂಚಿಸುವ ಶಬ್ದದ ಮೇಲೆ ಸಪ್ತಮೀ ವಿಭಕ್ತಿ ಬರುತ್ತದೆ.
ದೇಶದೊಳೆಮ್ಮ ದೇಶಂ ಶ್ರೇಷ್ಠಂ.
ದೇಶಗಳಲ್ಲಿ ನಮ್ಮ ದೇಶವೇ ಶ್ರೇಷ್ಠ.
(ಇ) ನಿಪುಣ, ಕುಶಲ, ಸಾಧು, ಚತುರ – ಇತ್ಯಾದಿ ಅರ್ಥಗಳಿರುವಲ್ಲಿ ಸಪ್ತಮೀ ವಿಭಕ್ತಿಯು ಬರುತ್ತದೆ.

| | | |
|---|---|---|
| ನಿಪುಣ : | ಮಾತಿನೊಳ್ ನಿಪುಣಂ. | ಮಾತಿನಲ್ಲಿ ನಿಪುಣನು. |
| ಕುಶಲ : | ಕಾರ್ಯದೊಳ್ ಕುಶಲಂ. | ಕಾರ್ಯದಲ್ಲಿ ಕುಶಲನು. |
| ಸಾಧು : | ಪುರುಷರೊಳ್ ಸಾಧು. | ಪುರುಷರಲ್ಲಿ ಸಾಧುವು. |
| ಚತುರ : | ಕೆಲಸದೊಳ್ ಚತುರಂ. | ಕೆಲಸದಲ್ಲಿ ಚತುರನು. |

## ವಿಭಕ್ತಿ ಪಲ್ಲಟ

➢ ನಾವು ಮಾತನಾಡುವಾಗ / ಬರೆಯುವಾಗ ಶಬ್ದಗಳಿಗೆ ಯಾವ ಯಾವ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಹೇಳಬೇಕೋ ಅದನ್ನು ಬಿಟ್ಟು ಬೇರೆ ಬೇರೆ ವಿಭಕ್ತಿಗಳನ್ನು ಸೇರಿಸಿ ಹೇಳುತ್ತೇವೆ / ಬರೆಯುತ್ತೇವೆ. ಕಾರಕಾರ್ಥಕ್ಕನುಗುಣವಾಗಿ ಬರಬೇಕಾದ ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ ಬೇರೊಂದು ವಿಭಕ್ತಿ ಪ್ರತ್ಯಯವನ್ನು ಬಳಸುವುದಕ್ಕೆ 'ವಿಭಕ್ತಿ ಪಲ್ಲಟ' ಎನ್ನುವರು.
ಉದಾಹರಣೆ :
ಬಂಡಿಯಂ ಪತ್ತಿದಂ. ಬಂಡಿಯನ್ನು ಹತ್ತಿದನು.
(ದ್ವಿತೀಯಾ ವಿಭಕ್ತಿ ಬಂದಿರುವ ಸರಿರೂಪ)
ಬಂಡಿಗೆ ಪತ್ತದಂ. ಬಂಡಿಗೆ ಹತ್ತಿದನು.
(ದ್ವಿತೀಯಾ ವಿಭಕ್ತಿಗೆ ಬದಲಾಗಿ ಚತುರ್ಥೀ ವಿಭಕ್ತಿ ಬಂದಿದೆ. ಇದು ವಿಭಕ್ತಿ ಪಲ್ಲಟ ರೂಪ)
ಮರದತ್ತಣಿಂ ಪಣ್ಣು ಉದುರಿತು. ಮರದದೆಸೆಯಿಂದ ಹಣ್ಣು ಉದುರಿತು,
(ಪಂಚಮೀ ವಿಭಕ್ತಿ ಬಂದಿರುವ ಸರಿರೂಪ)
ಮರದಿಂ ಪಣ್ಣು ಉದುರಿತು. ಮರದಿಂದ ಹಣ್ಣು ಉದುರಿತು.
(ಪಂಚಮೀ ವಿಭಕ್ತಿಗೆ ಬದಲಾಗಿ ತೃತೀಯಾ ವಿಭಕ್ತಿ ಬಂದಿದೆ. ಇದು ವಿಭಕ್ತಿ ಪಲ್ಲಟ ರೂಪ)
ಮನೆ ಯಜಮಾನಂ. ಮನೆಯ ಯಜಮಾನನು.
(ಷಷ್ಠೀ ವಿಭಕ್ತಿ ಬಂದಿರುವ ಸರಿರೂಪ)

ಮನೆಗೆ ಯಜಮಾನಂ. ಮನೆಗೆ ಯಜಮಾನನು.
(ಷಷ್ಠೀ ವಿಭಕ್ತಿಗೆ ಬದಲಾಗಿ ಚತುರ್ಥೀ ವಿಭಕ್ತಿ ಬಂದಿದೆ. ಇದು ವಿಭಕ್ತಿ ಪಲ್ಲಟ ರೂಪ)
ಹಳ್ಳದೊಳ್ ಬಿದ್ದಂ. ಹಳ್ಳದಲ್ಲಿ ಬಿದ್ದನು.
(ಸಪ್ತಮೀ ವಿಭಕ್ತಿ ಬಂದಿರುವ ಸರಿರೂಪ)
ಹಳ್ಳಕ್ಕೆ ಬಿದ್ದಂ. ಹಳ್ಳಕ್ಕೆ ಬಿದ್ದನು.
(ಸಪ್ತಮೀ ವಿಭಕ್ತಿಗೆ ಬದಲಾಗಿ ಚತುರ್ಥೀ ವಿಭಕ್ತಿ ಬಂದಿದೆ. ಇದು ವಿಭಕ್ತಿ ಪಲ್ಲಟ ರೂಪ)

## ವಿಭಕ್ತಿ ಪ್ರತ್ಯಯಗಳು

- ಪದಗಳ ಅರ್ಥವನ್ನು ವಿಭಾಗಿಸಿಕೊಡುವುದೇ 'ವಿಭಕ್ತಿ'. ವಿಭಕ್ತಿಯ ಅರ್ಥಕ್ಕೆ ಪ್ರತಿಯಾಗಿ ಬರುವುದೇ 'ಪ್ರತ್ಯಯ'.
- ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ ಕಾರಕಾರ್ಥಗಳನ್ನು ವಿಭಾಗಿಸಿಕೊಡುವ ಅಕ್ಷರಗಳ ಸಮೂಹವು 'ವಿಭಕ್ತಿ ಪ್ರತ್ಯಯ' ಎನಿಸುವುದು.
- ವಿಭಕ್ತಿ ಪ್ರತ್ಯಯ : ಶಬ್ದ / ಪ್ರಾತಿಪದಿಕ / ನಾಮಪ್ರಕೃತಿಯ ಅಂತ್ಯಕ್ಕೆ (ಕೊನೆಗೆ) ಬಂದು ಸೇರುವ ಕೆಲವು ಅಕ್ಷರಗಳ ಸಮೂಹವೇ 'ವಿಭಕ್ತಿಪ್ರತ್ಯಯ'; ವಿಭಕ್ತಿ ಪ್ರತ್ಯಯವು ಪದದ ಕೊನೆಗೆ ಬಂದು ಸೇರಿ ಪದದ ಅರ್ಥವನ್ನು ಬದಲಾಯಿಸುವುದು; ಇದು ಪದದ ಒಂದು ಭಾಗವೇ ಹೊರತು; ಸ್ವತಂತ್ರ ಪದವಲ್ಲ.
- ವಿಭಕ್ತಿ ಪ್ರತ್ಯಯಗಳು ಏಳು. ಕಾರಕಗಳು ಆರು.
- ಹಳಗನ್ನಡದಲ್ಲಿ ಮ್, ಅಮ್, ಇಮ್, ಕೆ, ಅತ್ತಣಿಂ. ಅ, ಒಳ್ ಎಂಬುದು ಏಳು ವಿಧ ವಿಭಕ್ತಿಗಳು
- ಹೊಸಗನ್ನಡದಲ್ಲಿ ಉ, ಅನ್ನು, ಇಂದ, ಕೆ, ದೆಸೆಯಿಂದ, ಅ. ಅಲ್ಲಿ ಎಂಬ ಏಳು ವಿಭಕ್ತಿ ಪ್ರತ್ಯಯಗಳಿವೆ.
- ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ ಮುಖ್ಯವಾಗಿ ದ, , ನ. ಇನ, ಇರ ಮೊದಲಾದ ಆಗಮಗಳು ಬರುತ್ತವೆ.
- ಬಹುವಚನದ ಗಳ್/ಗಳು ಪ್ರತ್ಯಯಕ್ಕೆ ಹಳಗನ್ನಡದಲ್ಲಿ/ಹೊಸಗನ್ನಡದಲ್ಲಿ ಅರ್/ಅರು, ಅರುಗಳ್/ಅರುಗಳು, ಅಂದಿರ್/ಅಂದಿರು, ಅಂದಿರಗಳ್/ಅಂದಿರುಗಳು, ಇರ್/ಇರು, ವಿರ್/ವಿರು, ವು, ಅವು, ಕಳ್/ಕಳು, ವರ್/ವರು ಮೊದಲಾದ ಆದೇಶಗಳು ಬರುತ್ತವೆ.
- ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವಾಗ ಲೋಪ, ಆಗಮ ಮತ್ತು ಆದೇಶ ಸಂಧಿಗಳು ಸಹ ಆಗುತ್ತವೆ.
- ಸಂಬೋಧನಾ ವಿಭಕ್ತಿಯು ಪ್ರಥಮಾ ವಿಭಕ್ತಿಯಲ್ಲಿಯೇ ಸೇರಿ 'ಸಂಬೋಧನಾ ಪ್ರಥಮಾ ವಿಭಕ್ತಿ' ಎನಿಸುವುದು. ಇದು ಎಂಟನೆಯ ವಿಭಕ್ತಿಯಲ್ಲ.
- ಸರ್ವನಾಮಗಳಿಗೆ ಸಂಬೋಧನಾ ಪ್ರಥಮಾ ವಿಭಕ್ತಿ ಪ್ರತ್ಯಯವು ಸೇರುವುದಿಲ್ಲ.
- ದಿಗ್ವಾಚಕ ಶಬ್ದಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ 'ಅಣ' ಎಂಬ ಆಗಮವು ಬರುವುದು.

  ಉದಾಹರಣೆ :

  ಮೂಡಲು + ಮ್ > ಮೂಡಲು + ಅಣ + ಮ್ = ಮೂಡಣಂ
  ಮೂಡಲು + ಉ > ಮೂಡಲು + ಅಣ + ಉ = ಮೂಡಣವು

- ದೊಡ್ಡದು. ಚಿಕ್ಕದು, ಸಣ್ಣದು ನಪುಂಸಕಲಿಂಗ ಶಬ್ದಗಳು ಪುಲ್ಲಿಂಗ ಏಕವಚನದಲ್ಲಿ ದೊಡ್ಡವನು, ಚಿಕ್ಕವನು, ಸಣ್ಣವನು ಎಂದೂ, ಸ್ತ್ರೀಲಿಂಗ ಏಕವಚನದಲ್ಲಿ ದೊಡ್ಡವಳು, ಚಿಕ್ಕವಳು, ಸಣ್ಣವಳು ಎಂದೂ, ಬಹುವಚನದಲ್ಲಿ ದೊಡ್ಡವರು, ಚಿಕ್ಕವರು, ಸಣ್ಣವರು ಎಂದೂ ರೂಪಪಡೆಯುತ್ತವೆ.
- ಪ್ರಥಮಾ ವಿಭಕ್ತಿ ಪ್ರತ್ಯಯವು ಹಳಗನ್ನಡ ಮತ್ತು ಹೊಸಗನ್ನಡಗಳಲ್ಲಿ ಇಲ್ಲ; ನಾಮಪ್ರಕೃತಿಗಳೇ ಪ್ರಥಮಾ ವಿಭಕ್ತಿಯ ಹೊಂದಿರುವ ರೂಪಗಳಾಗುತ್ತವೆ; ಎಂಬುದು ಭಾಷಾ ವಿಜ್ಞಾನಿಗಳ ಅಭಿಪ್ರಾಯ.

  ಉದಾಹರಣೆ : ಶರಣಂ ಬಂದಂ. ಶರಣ ಬಂದಂ.

  ಶರಣನು ಬಂದನು. ಶರಣ ಬಂದನು.

- ದ್ವಿತೀಯಾ, ತೃತೀಯಾ, ಚತುರ್ಥೀ ಮತ್ತು ಸಪ್ತಮೀ ವಿಭಕ್ತಿಗಳಲ್ಲಿ ಒಂದಕ್ಕಿಂತ ಹೆಚ್ಚು ಪ್ರತ್ಯಯಗಳಿರುತ್ತವೆ. ಅವೆಲ್ಲವೂ ಒಂದೇ ನಾಮಪ್ರಕೃತಿಯ ಮೇಲೆ ಬರುವುದಿಲ್ಲ. ಒಂದೊಂದು ನಾಮಪ್ರಕೃತಿಯಲ್ಲಿ ಒಂದೊಂದು ಬರುತ್ತದೆ.

  ಉದಾಹರಣೆ :

| ವಿಭಕ್ತಿಗಳು | ಪ್ರತ್ಯಯಗಳು | ಪದರೂಪಗಳು |
|---|---|---|
| ದ್ವಿತೀಯಾ | ಅಮ್, ಅನ್ನು, ಅನು. | ಶರಣನಂ, ಶರಣನನ್ನು, ಶರಣನನು. |
| ತೃತೀಯಾ | ಇಮ್, ಇಂದ, ಇಂದೆ, ಎ. | ಶರಣನಿಂ, ಶರಣನಿಂದ, ಶರಣನಿಂದೆ, ಕ್ರಮದೆ, |
| ಚತುರ್ಥೀ | ಗೆ, ಇಗೆ, ಕೆ, ಕ್ಕೆ, ಅಕ್ಕೆ. | ಶರಣಂಗೆ. ಅಕ್ಕನಿಗೆ, ಮನಕೆ, ವಚನಕ್ಕೆ, ಒಂದಕ್ಕೆ. |
| ಸಪ್ತಮೀ | ಒಳ್, ಒಳು, ಅಲ್ಲಿ, ಅಲಿ, ಎ. | ಶರಣನೊಳ್, ಅವನೊಳು, ಶಿವನಲ್ಲಿ, ಮನೆಯಲಿ, ಕೆಳಗೆ |
| ಸಂಬೋಧನಾ | ಆ, ಈ, ಏ, ಇರಾ, | ರಾಮಾ, ತಂಗೀ, ಶರಣನೇ, ಅಣ್ಣಂದಿರಾ, |

- ಕನ್ನಡದಲ್ಲಿ ಪಂಚಮೀ ವಿಭಕ್ತಿ ಪ್ರತ್ಯಯ ಇಲ್ಲ; ತೃತೀಯಾ ವಿಭಕ್ತಿ ಪ್ರತ್ಯಯವೇ ಪಂಚಮೀ ವಿಭಕ್ತಿ ಪ್ರತ್ಯಯದ ಕಾರ್ಯವನ್ನು ಮಾಡುವುದು ಎನ್ನುವುದು ಭಾಷಾ ವಿಜ್ಞಾನಿಗಳ ಅಭಿಪ್ರಾಯ.
- ಷಷ್ಠೀ ವಿಭಕ್ತಿ ಪ್ರತ್ಯಯವು ಸಂಬಂಧಾರ್ಥವನ್ನು ಮಾತ್ರ ತಿಳಿಸುತ್ತದೆ. ಅದು ಕಾರಕಾರ್ಥವನ್ನು ತಿಳಿಸುವುದಿಲ್ಲ; ಆದ್ದರಿಂದ ಅದು ಕಾರಕವಲ್ಲ.
- ನಾಮಪ್ರಕೃತಿಗೆ ವಿಭಕ್ತಿ ಪ್ರತ್ಯಯವು ಸೇರುವಾಗ ನಡುವೆ 'ನ್ / ಳ್ / ದ್ / ಇನ್ / ಅರ್' ಮೊದಲಾದ ಆಗಮಗಳು ಏಕವಚನದಲ್ಲಿ ಮಾತ್ರ ಬರುತ್ತವೆ.

  ಉದಾಹರಣೆ :

  ಶರಣ + ಅಮ್ > ಶರಣ + ನ್ + ಅಮ್ > ಶರಣನಂ
  ಶರಣ + ಅನ್ನು > ಶರಣ + ನ್ + ಅನ್ನು > ಶರಣನನ್ನು
  ರಮಾ + ಅನ್ನು > ರಮಾ + ಳ್ + ಅಮ್ > ರಮಾಳಂ
  ರಮಾ + ಅನ್ನು > ರಮಾ + ಳ್ + ಅನ್ನು > ರಮಾಳನ್ನು
  ಮನ + ಒಳ್ > ಮನ + ದ್ + ಒಳ್ > ಮನದೊಳ್
  ಮನ + ಅಲ್ಲಿ > ಮನ + ದ್ + ಅಲ್ಲಿ > ಮನದಲ್ಲಿ
  ಗುರು + ಇಮ್ > ಗುರು + ಇನ್ + ಇಮ್ > ಗುರುವಿನಿಂ
  ಗುರು + ಇಂದ > ಗುರು + ಇನ್ + ಇಂದ > ಗುರುವಿನಿಂದ
  ಹಿರಿದು + ಒಳ್ > ಹಿರಿದು + ಅರ್ + ಒಳ್ > ಹಿರಿದರೊಳ್
  ಹಿರಿದು + ಅಲ್ಲಿ > ಹಿರಿದು + ಅರ್ + ಅಲ್ಲಿ > ಹಿರಿದರಲ್ಲಿ

## ➢ ವಿಭಕ್ತಿಗಳು – ಕಾರಕಾರ್ಥಗಳು – ಪ್ರತ್ಯಯಗಳು – ನಾಮಪದಗಳು

| ಕ್ರ. ಸಂ. | ವಿಭಕ್ತಿಗಳು | ಹಳಗನ್ನಡ ವಿಭಕ್ತಿ ಪ್ರತ್ಯಯ | ನಾಮಪದ ರೂಪಗಳು | | ಹೊಸಗನ್ನಡ ವಿಭಕ್ತಿ ಪ್ರತ್ಯಯ | ನಾಮಪದ ರೂಪಗಳು | | ಕಾರಕಾರ್ಥಗಳು |
|---|---|---|---|---|---|---|---|---|
| | | | ಏಕವಚನ | ಬಹುವಚನ | | ಏಕವಚನ | ಬಹುವಚನ | |
| 1 | ಪ್ರಥಮಾ | ಮ್ | ಶರಣಂ | ಶರಣರ್ | ಉ | ಶರಣನು | ಶರಣರು | ಕರ್ತ್ರರ್ಥ |
| | ಸಂಬೋಧನಾ | ಆ/ಈ/ಏ/ಇರಾ | ಶರಣನೇ | ಶರಣರಿರಾ | ಆ/ಈ/ಏ/ಇರಾ | ಶರಣನೇ | ಶರಣರಿರಾ | ಅಭಿಮುಖೀಕರಣ |
| 2 | ದ್ವಿತೀಯಾ | ಅಮ್ | ಶರಣನಂ | ಶರಣರಂ | ಅನ್ನು/ಅನು | ಶರಣನನ್ನು | ಶರಣರನ್ನು | ಕರ್ಮಾರ್ಥ |
| 3 | ತೃತೀಯಾ | ಇಮ್/ಎ | ಶರಣನಿಂ | ಶರಣರಿಂ | ಇಂದ/ಇಂದೆ | ಶರಣನಿಂದ | ಶರಣರಿಂದ | ಕರಣಾರ್ಥ |
| 4 | ಚತುರ್ಥೀ | ಗೆ/ಕೆ/ಕೈ/ಅಕ್ಕೆ | ಶರಣಂಗೆ | ಶರಣರಿಗೆ | ಗೆ/ಕೆ/ಕೈ/ಅಕ್ಕೆ | ಶರಣನಿಗೆ | ಶರಣರಿಗೆ | ಸಂಪ್ರದಾನಾರ್ಥ |
| 5 | ಪಂಚಮೀ | ಅತ್ತಣಿಮ್ | ಶರಣನತ್ತಣಿಂ | ಶರಣರತ್ತಣಿಂ | ದೆಸೆಯಿಂದ | ಶರಣನದೆಸೆಯಿಂದ | ಶರಣರದೆಸೆಯಿಂದ | ಅಪಾದಾನಾರ್ಥ |
| 6 | ಷಷ್ಠೀ | ಅ | ಶರಣನ | ಶರಣರ | ಅ | ಶರಣನ | ಶರಣರ | ಸಂಬಂಧಾರ್ಥ |
| 7 | ಸಪ್ತಮೀ | ಒಳ್/ಒಳು/ಎ | ಶರಣನೊಳ್ | ಶರಣರೊಳ್ | ಅಲ್ಲಿ/ಅಲಿ | ಶರಣನಲ್ಲಿ | ಶರಣರಲ್ಲಿ | ಅಧಿಕರಣಾರ್ಥ |

## ಪದಗಳು

- **ಪದ ರಚನೆ :** ಅಕ್ಷರಗಳನ್ನು ಅರ್ಥವತ್ತಾಗಿ ಜೋಡಿಸಿದಾಗ ಪದರಚನೆ ಆಗುತ್ತದೆ. ಕೆಲವೊಮ್ಮೆ ಒಂದೇ ಅಕ್ಷರವೂ ಪದವೆಂದು ಕರೆಯಲ್ಪಡುತ್ತದೆ.
  ಉದಾಹರಣೆ : ಆ ಮನೆ, ಈ ತೋಟ ಇಲ್ಲಿರುವ ಆ, ಈ ಎಂಬ ಅಕ್ಷರಗಳು ಪದಗಳೇ ಆಗಿರುತ್ತವೆ.
- **ದೇಶ್ಯ ಪದಗಳು :** ಕನ್ನಡದಲ್ಲಿರುವ ಮೂಲಪದಗಳನ್ನು **(ಶುದ್ಧ ಕನ್ನಡ ಪದಗಳನ್ನು) 'ದೇಶ್ಯ ಪದಗಳು'** ಎನ್ನುವರು. **ಉದಾಹರಣೆ :**
  **ಅಂಗಾಂಗಳು :** ಕೈ, ತಲೆ, ಹೊಟ್ಟೆ, ಕಾಲು, ಬೆನ್ನು ಇತ್ಯಾದಿ.
  **ಸಂಬಂಧ ವಾಚಕಗಳು :** ಅಪ್ಪ, ಅಮ್ಮ, ಅಜ್ಜ, ಅಜ್ಜಿ, ಚಿಕ್ಕಪ್ಪ, ಮಾವ, ಭಾವ, ಅಣ್ಣ, ತಂಗಿ, ತಮ್ಮ ಇತ್ಯಾದಿ.
  **ಪ್ರಾಣಿಗಳು :** ಇಲಿ, ಹಾವು, ಎತ್ತು, ಎಮ್ಮೆ, ದನ, ಕೋಳಿ ಇತ್ಯಾದಿ.
  **ಪದಾರ್ಥಗಳು :** ಬಾಗಿಲು, ಉಪ್ಪು, ಹಾಲು, ಚಿಲಕ ಇತ್ಯಾದಿ.
  **ಸರ್ವನಾಮಗಳು :** ನಾನು, ಅವನು, ನೀನು, ಅವಳು, ಅದು, ಅವು, ಅವರು ಇತ್ಯಾದಿ.
  **ಸಂಖ್ಯಾವಾಚಕಗಳು :** ಒಂದರಿಂದ ಒಂಬೈನೂರ ತೊಂಬತ್ತೊಂಬತ್ತರವರೆಗಿನ ಸಂಖ್ಯೆಗಳು.
  **ಧಾತುಗಳು :** ತಿನ್ನು, ಹೋಗು, ಕೇಳು, ಬಿಡು ಇತ್ಯಾದಿ.
- **ಅನ್ಯದೇಶ್ಯ ಪದಗಳು :** ಸಂಸ್ಕೃತ, ಪ್ರಾಕೃತ ಭಾಷೆಯ ಪದಗಳನ್ನು ಹೊರತು ಪಡಿಸಿ ಇತರ ಭಾಷೆಗಳಿಂದ ಕನ್ನಡ ಭಾಷೆಗೆ ಬಂದ ಪದಗಳನ್ನು **'ಅನ್ಯದೇಶ್ಯ ಪದಗಳು'** ಎನ್ನುವರು.
  **ಉದಾಹರಣೆ :**
  **ಗ್ರೀಕ್ ಮತ್ತು ರೋಮನ್ ಭಾಷೆಯಿಂದ ಕನ್ನಡಕ್ಕೆ ಬಂದ ಪದಗಳು :** ದಮ್ಮಡಿ, ದಮಡಿ, ದಮ್ಮ, ದೀನಾರ, ಗದ್ಯಾಣ ಇತ್ಯಾದಿ.
  **ಪಾರ್ಸಿ (ಪರ್ಷಿಯನ್) ಭಾಷೆಯಿಂದ ಕನ್ನಡಕ್ಕೆ ಬಂದ ಪದಗಳು :** ಅಬಕಾರಿ, ರಸ್ತೆ, ದವಾಖಾನೆ, ಚೌಕಾಷಿ, ಜಮೀನು, ಅಜಮಾಯಿಷಿ, ಆಮದು, ದಲ್ಲಾಳಿ ಇತ್ಯಾದಿ.
  **ಅರಬ್ಬೀ (ಅರೇಬಿಕ್) ಭಾಷೆಯಿಂದ ಕನ್ನಡಕ್ಕೆ ಬಂದ ಪದಗಳು :** ಅಮಾನತು, ಅಸಲು, ಇನಾಮು, ಕಾಯ್ದೆ, ಗಲೀಜು, ತಕರಾರು, ತರಬೇತು, ನಕಲಿ ಇತ್ಯಾದಿ.
  **ಪೋರ್ಚುಗೀಸ್ ಭಾಷೆಯಿಂದ ಕನ್ನಡಕ್ಕೆ ಬಂದ ಪದಗಳು :** ಮೇಜು, ತಂಬಾಕು, ಅನಾನಸು, ಸಾಬೂನು, ಆಸ್ಪತ್ರೆ, ಚೊಂಬು, ಚಾ, ಇಸ್ತ್ರಿ, ರಸೀದಿ ಇತ್ಯಾದಿ.
  **ಉರ್ದು ಭಾಷೆಯಿಂದ ಕನ್ನಡಕ್ಕೆ ಬಂದ ಪದಗಳು :** ಕಿಮ್ಮತ್ತು, ತಾರೀಖು, ತಾಲೂಕು, ಅಹವಾಲು, ಇಲಾಖೆ, ದರ್ಜೆ, ಬಂದೂಕು, ರುಜು, ಶುರು, ಶಾಮೀಲು ಇತ್ಯಾದಿ.
  **ಹಿಂದೂಸ್ಥಾನಿ ಭಾಷೆಯಿಂದ ಕನ್ನಡಕ್ಕೆ ಬಂದ ಪದಗಳು :** ಅರ್ಜಿ, ಕಚೇರಿ, ಕಾರ್ಖಾನೆ, ಸಲಾಮು, ದರ್ಬಾರು, ಕುರ್ಚಿ, ಕಾಗದ, ಹುಕುಂ ಇತ್ಯಾದಿ.
  **ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಬಂದ ಪದಗಳು :** ಬಸ್ಸು, ಕಾರು, ಕಾಲೇಜು, ಲೈಟು, ಪೆನ್ನು ಇತ್ಯಾದಿ.
- **ತತ್ಸಮ ಪದಗಳು :** ಸಂಸ್ಕೃತ ಬಾಷೆಯ ಪದಗಳನ್ನು ಕನ್ನಡ ಭಾಷೆಯಲ್ಲಿ ಬಳಸುವಾಗ ಯಾವುದೇ ಬದಲಾವಣೆ ಮಾಡದೆ ಹಾಗೆಯೇ ಬಳಸಿದರೆ ಅಂತಹ ಪದಗಳನ್ನು **'ತತ್ಸಮ ಪದಗಳು'** ಎನ್ನುವರು.
  (ತತ್ = ಅದಕ್ಕೆ (ಸಂಸ್ಕೃತಕ್ಕೆ), ಸಮ = ಸಮಾನ. ತತ್ + ಸಮ = ತತ್ಸಮ)
  **ಉದಾಹರಣೆ :** ರಾಮ, ವಸಂತ, ಸೋಮ, ಚಂದ್ರ, ಗ್ರಹ, ಸ್ತ್ರೀ, ಶ್ರೀ, ಭುವನ, ಶ್ರುತಿ ಕಾವ್ಯ ಪಶು ಇತ್ಯಾದಿ

- **ತದ್ಭವ ಪದಗಳು :** ಸಂಸ್ಕೃತ ಭಾಷೆಯ ಪದಗಳನ್ನು ಕನ್ನಡ ಭಾಷೆಯಲ್ಲಿ ಬಳಸುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ಬದಲಾವಣೆ ಮಾಡಿಕೊಂಡು ಬಳಸಿದರೆ ಅಂತಹ ಪದಗಳನ್ನು **'ತದ್ಭವ'** ಎನ್ನುವರು.

  (ತತ್ = ಅದರಿಂದ (ಸಂಸ್ಕೃತದಿಂದ), ಭವ = ಹುಟ್ಟಿದ್ದು. ತತ್ + ಭವ = ತದ್ಭವ)

  **ಉದಾಹರಣೆ :**

**ಅಲ್ಪಸ್ವಲ್ಪ ಬದಲಾವಣೆಗೊಂಡ ಪದಗಳು :**

| **ತತ್ಸಮ > ತದ್ಭವ** | **ತತ್ಸಮ > ತದ್ಭವ** | **ತತ್ಸಮ > ತದ್ಭವ** |
|---|---|---|
| ಶಶಿ > ಸಸಿ | ಶಿರ > ಸಿರ | ಕಲಶ > ಕಳಸ |
| ಅಂಕುಶ > ಅಂಕುಸ | ವರ್ಷ > ವರುಸ ಇತ್ಯಾದಿ | |

**ಪೂರ್ಣ ಬದಲಾಣೆಗೊಂಡ ಪದಗಳು :**

| **ತತ್ಸಮ > ತದ್ಭವ** | **ತತ್ಸಮ > ತದ್ಭವ** | **ತತ್ಸಮ > ತದ್ಭವ** |
|---|---|---|
| ದ್ಯೂತ > ಜೂಜು | ವಂಧ್ಯಾ > ಬಂಜೆ | ವಿದ್ಯಾಧರ > ಬಿಜ್ಜೋದರ |
| ವೈಶಾಖ > ಬೇಸಗೆ | ಕುಠಾರ > ಕೊಡಲಿ | ಪಾದುಕಾ > ಹಾವುಗೆ |
| ಅರ್ಕ > ಎಕ್ಕ ಇತ್ಯಾದಿ | ವರ್ಷ > ವರುಷ | ಶ್ರೀ > ಸಿರಿ |
| ರಾಜ > ರಾಯ | ವೀರ > ಬೀರ | ಭಕ್ತ > ಬಕುತ |
| ವಿಜ್ಞಾಪನೆ > ಬಿನ್ನಹ | ದಿಶಾ > ದೆಸೆ | ಚಂದ್ರ > ಚಂದಿರ |
| ಸುಧಾ > ಸೊದೆ | ಸಾಮಂತ > ಸಾವಂತ | ತಟ > ತಡಿ |
| ಪೃಥ್ವಿ > ಪೊಡವಿ | ಪಟ್ಟಣ > ಪತ್ತನ | ಸಕಲ > ಸಕಳ |
| ದರ್ಶನ > ದರುಶನ | ವಸತಿ > ಬಸದಿ (ಬಸ್ತಿ) | ಕೀರ್ತಿ > ಕೀರುತಿ |
| ಅಗ್ನಿ > ಅಗ್ಗಿ | | |

## ದ್ವಿರುಕ್ತಿಗಳು

- **ದ್ವಿರುಕ್ತಿ :** ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ ಅಥವಾ ಒಂದು ವಾಕ್ಯವನ್ನೋ ಅವಕಾಶ ಅಥವಾ ಬಿಡುವು ಇಲ್ಲದೆ ಎರಡು ಸಲ ಪ್ರಯೋಗಿಸುವುದನ್ನು **'ದ್ವಿರುಕ್ತಿ'** ಎನ್ನುವರು.

  (ದ್ವಿಃ = ಎರಡು, ಉಕ್ತಿ = ಮಾತು)

  ದ್ವಿರುಕ್ತಿಯನ್ನು ಬಳಸುವ ಸಂದರ್ಭಗಳ ಉದಾಹರಣೆಗಳು :

1. ಉತ್ಸಾಹ : ಹೌದುಹೌದು ನಾನೇ ಗೆದ್ದೆ. / ನಿಲ್ಲುನಿಲ್ಲು ನಾನೂ ಬರುವೆ. / ಬಂದೆಬಂದೆ
2. ಆಧಿಕ್ಯ : ದೊಡ್ಡದೊಡ್ಡ ಹಣ್ಣುಗಳು. / ಹೆಚ್ಚುಹೆಚ್ಚು ಜನ.
3. ವೀಪ್ಸೆ : ಮನೆಮನೆ ಗಣತಿ. / ಕೇರಿಕೇರಿಗಳಲ್ಲಿ ಅಲೆದರು.
   ಊರೂರು ತಿರುಗು. / ಊರೂರಿಗೆ ಶಾಲೆ ವಾಚನಾಲಯಗಳಿವೆ.
4. ಕೋಪ : ಎಲಾ ಮೂರ್ಖ ನಿಲ್ಲುನಿಲ್ಲು. / ಎಲೇಎಲೇ ಹೋಗಬೇಡ.
5. ಸಂಭ್ರಮ : ಬನ್ನಿಬನ್ನಿ ಕುಳಿತುಕೊಳ್ಳಿ. / ಹತ್ತಿರಹತ್ತಿರ ಬಾ. / ಅಗೋಅಗೋ.
6. ಆಶ್ಚರ್ಯ : ಅಬ್ಬಬ್ಬಾ! ಎಂಥ ರಮ್ಯ ದೃಶ್ಯ. / ಅಹಹಾ! ಅವನ ಆಟ ಅದ್ಭುತ.
7. ಆಕ್ಷೇಪ : ಬೇಡಬೇಡ ಕೊಡಬೇಡ. / ನಡೆನಡೆ ಸುಮ್ಮನೆ.
8. ಹರ್ಷ : ಅಮ್ಮಾಅಮ್ಮಾ, ಇದು ನಾನು ಬರೆದ ಚಿತ್ರ.
9. ಸಮ್ಮತಿ : ಆಗಲಿಆಗಲಿ, ನೀವು ಬಂದುದು ಸಂತೋಷ.
10. ತ್ವರೆ : ಬೇಗಬೇಗ ಓಡು, / ನಡೆನಡೆ ಬೇಗ. / ಓಡುಓಡು
11. ದುಃಖ : ಅಯ್ಯೋಅಯ್ಯೋ, ಹೀಗೆಕಾಯಿತು? / ದೇವರೆದೇವರೇ ಇನ್ನು ಏನು ಗತಿ.
12. ಆವೃತ್ತಿ : ನೋಡಿನೋಡಿ ನಕ್ಕನು.
13. ಭಯ : ಹಾವುಹಾವು, / ಕೆಟ್ಟೆಕೆಟ್ಟೆ, ಬೆಂಕಿಬೆಂಕಿ.
14. ಭರ್ತ್ಸನ : ದುರುಳಾದುರುಳಾ, / ಇದು ಲಾಕ್ಷಾಗೇಹಕ್ಕಿದು / ವಿಷಮವಿಷನ್ನಾಕ್ಕಿದು
    ಪೆಣ್ಣುಪೆಣ್ಣೆಂದೇತಕೆ ಬೀಳುಗಳೆವರು
15. ಪ್ರಾರ್ಥನೆ : ಚಿಲಿಮಿಲಿ ಎಂದೋದುವ ಗಿಳಿಗಳಿರಾ / ನೀವು ಕಾಣಿರೇ ನೀವು ಕಾಣಿರೇ
16. ನಿಷೇಧ : ಸಾಕುಸಾಕು

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು.**

ಮೊದಲುಮೊದಲು = ಮೊತ್ತಮೊದಲು / ಮೊಟ್ಟಮೊದಲು
ಕಡೆಗೆಕಡೆಗೆ = ಕಟ್ಟಕಡೆಗೆ / ಕಡೆಕಡೆಗೆ
ನಡುವೆನಡುವೆ = ನಟ್ಟನಡುವೆ / ನಡುನಡುವೆ
ಬಯಲುಬಯಲು = ಬಟ್ಟಬಯಲು
ತುದಿತುದಿ = ತುತ್ತತುದಿ
ಕೊನೆಗೆಕೊನೆಗೆ = ಕೊನೆಕೊನೆಗೆ
ಮೆಲ್ಲನೆಮೆಲ್ಲನೆ = ಮೆಲ್ಲಮೆಲ್ಲನೆ

## ಜೋಡುನುಡಿಗಳು

- **ಜೋಡುನುಡಿ :** ವಿರುದ್ಧಾರ್ಥಕವಾದ ಎರಡು ಪದಗಳನ್ನೋ ಅಥವಾ ಬೇರೆಬೇರೆ ಅರ್ಥಗಳುಳ್ಳ ಪದಗಳನ್ನೋ ಒಟ್ಟಿಗೆ ಬಳಸಿದರೆ ಅದನ್ನು **'ಜೋಡುನುಡಿ'** ಎನ್ನುವರು. ಅಭಿಪ್ರಾಯವನ್ನು ಒತ್ತಿ ಹೇಳುವುದಕ್ಕೂ, ವಿವಿಧತೆಯನ್ನೂ ಸೂಚಿಸುವುದಕ್ಕೂ ಇಂತಹ ಪದಗಳನ್ನು ಬಳಸಲಾಗುತ್ತದೆ. ಇವುಗಳಲ್ಲಿ ಎರಡು ವಿಧಗಳಿವೆ.

1. ಎರಡೂ ಪದಗಳಿಗೆ ಬೇರೆಬೇರೆ ಅರ್ಥವಿರುವುದು.

   ಉದಾಹರಣೆ :

| | | | |
|---|---|---|---|
| ಸತಿಪತಿ | ಕೆನೆಮೊಸರು | ಹಾಲ್ಜೇನು | ಮಕ್ಕಳುಮರಿ |
| ಮನೆ–ಮಠ | ಆಟ–ಪಾಠ | ಓದು–ಬರಹ | ನಗು–ಅಳು |
| ಕಾಡು–ಮೇಡು | ಹುಟ್ಟು–ಸಾವು | ಬಡವ–ಬಲ್ಲಿದ | ಮೇಲೆ–ಕೆಳಗೆ |
| ಹಿಂದು–ಮುಂದು | ಕಲ್ಲು–ಮುಳ್ಳು | | |

2. ಎರಡು ಪದಗಳಲ್ಲಿ ಮೊದಲ ಪದಕ್ಕೆ ನಿರ್ದಿಷ್ಟ ಅರ್ಥವಿದ್ದು, ಎರಡನೆಯ ಪದಕ್ಕೆ ಅರ್ಥವಿಲ್ಲದಿರುದು. (ಇದನ್ನು **'ಮಾತಿಗೊಂದು ಗೀತು'** ಎಂದು ಸಹ ಎನ್ನುವರು)

   ಉದಾಹರಣೆ :

   ಕಾಫೀಗೀಫಿ, ಹುಳಹುಪ್ಪಡಿ, ದೇವರಿಗೀವರು,

**ಕೆಳಗಿನ ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. 'ಪೂಜಾರಿ' ಪದವು ಈ ನಾಮಪದಕ್ಕೆ ಉದಾಹರಣೆ.
   (ಎ) ಅಂಕಿತನಾಮ (ಬಿ) ರೂಢನಾಮ
   (ಸಿ) ಅನ್ವರ್ಥನಾಮ (ಡಿ) ಭಾವನಾಮ
2. ಹಳಗನ್ನಡದ ಪಂಚಮೀ ವಿಭಕ್ತಿ ಪ್ರತ್ಯಯ.
   (ಎ) ಅತ್ತಣಿಂ (ಬಿ) ಮ್
   (ಸಿ) ಅಂ (ಡಿ) ಒಳ್
3. ದ್ವಿರುಕ್ತಿಗೆ ಉದಾಹರಣೆಯಾದ ಪದವಿದು;
   (ಎ) ನನ್ನನಿನ್ನ (ಬಿ) ಬೇಗಬೇಗ
   (ಸಿ) ಟಪಟಪ (ಡಿ) ಜುಳುಜುಳು
4. ಅನ್ವರ್ಥನಾಮಪದಕ್ಕೆ ಉದಾಹರಣೆ:
   (ಎ) ಪಟ್ಟಣ (ಬಿ) ವಿಜ್ಞಾನಿ
   (ಸಿ) ಪರ್ವತ (ಡಿ) ಹುಡುಗ
5. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ:
   (ಎ) ನೀನು (ಬಿ) ನೀವು
   (ಸಿ) ತಾನು (ಡಿ) ನಾವು
6. 'ನಾನು' ಎಂಬುದು ಈ ಪುರುಷಾರ್ಥ ಸರ್ವನಾಮಕ್ಕೆ ಉದಾಹರಣೆ;
   (ಎ) ಉತ್ತಮ ಪುರುಷ (ಬಿ) ಮಧ್ಯಮ ಪುರುಷ
   (ಸಿ) ಪ್ರಥಮ ಪುರುಷ (ಡಿ) ಅನ್ಯ ಪುರುಷ
7. ಈ ಪದವು ಅನುಕರಣಾವ್ಯಯಕ್ಕೆ ಉದಾಹರಣೆ:
   (ಎ) ಬೇಗ ಬೇಗ (ಬಿ) ಓಡು ಓಡು
   (ಸಿ) ಗಿಡಗಂಟಿ (ಡಿ) ಧಗ ಧಗ
8. 'ದೀವಿಗೆ' ಪದದ ತತ್ಸಮ ರೂಪ
   (ಎ) ದೀವಳಿಗೆ (ಬಿ) ದೀಪಿಕಾ
   (ಸಿ) ದೀಪ (ಡಿ) ದೀವಟಿಗೆ
9. ಹಳಗನ್ನಡದ ದ್ವಿತೀಯ ವಿಭಕ್ತಿ ಪ್ರತ್ಯಯ:
   (ಎ) ಮ್ (ಬಿ) ಅ
   (ಸಿ) ಇಂದಂ (ಡಿ) ಅಮ್
10. 'ಅಂಕಿತನಾಮ' ಪದಕ್ಕೆ ಉದಾಹರಣೆ:
    (ಎ) ಶಾಲೆ (ಬಿ) ರಾಮನಾಥ
    (ಸಿ) ಶಿಕ್ಷಕ (ಡಿ) ತಾವು
11. 'ತಾವು' ಎಂಬುದು ಸರ್ವನಾಮದ ಈ ವಿಭಾಗಕ್ಕೆ ಸೇರಿದೆ;
    (ಎ) ಪ್ರಶ್ನಾರ್ಥಕ (ಬಿ) ನಿರ್ದೇಶನಾತ್ಮಕ
    (ಸಿ) ಪುರುಷಾರ್ಥಕ (ಡಿ) ಆತ್ಮಾರ್ಥಕ
12. 'ವಿದ್ವಾಂಸ' ಪದವು ಈ ನಾಮಪದಕ್ಕೆ ಸೇರಿದೆ;
    (ಎ) ರೂಢನಾಮ (ಬಿ) ಅನ್ವರ್ಥಕನಾಮ
    (ಸಿ) ಅಂಕಿತನಾಮ (ಡಿ) ಭಾವನಾಮ

13. 'ಅಬಕಾರಿ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ;

(ಎ) ಗ್ರೀಕ್ (ಬಿ) ಪೋರ್ಚುಗೀಸ್

(ಸಿ) ಉರ್ದು (ಡಿ) ಪರ್ಷಿಯನ್

14. 'ಒಳ್ಳೆಯ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆ.

(ಎ) ಸಂಖ್ಯಾವಾಚಕ (ಬಿ) ದಿಗ್ವಾಚಕ

(ಸಿ) ಗುಣವಾಚಕ (ಡಿ) ಭಾವನಾಮ

15. 'ಶಾಲೆಯಲ್ಲಿ' ಈ ಪದಲ್ಲಿರುವ ವಿಭಕ್ತಿ.

(ಎ) ಪ್ರಥಮ (ಬಿ) ದ್ವಿತೀಯ

(ಸಿ) ಸಪ್ತಮೀ (ಡಿ) ಪಂಚಮೀ

16. 'ಬಿರುಗಾಳಿಗೆ' ಪದದಲ್ಲಿರುವ ವಿಭಕ್ತಿಯ ಹೆಸರು;

(ಎ) ಚತುರ್ಥಿ (ಬಿ) ಪಂಚಮಿ

(ಸಿ) ತೃತೀಯ (ಡಿ) ದ್ವಿತೀಯ

17. 'ಮೇಜು' ಈ ಭಾಷೆಯಿಂದ ಬಂದಿದೆ.

(ಎ) ಪೋರ್ಚುಗೀಸ್ (ಬಿ) ಪರ್ಷಿಯನ್

(ಸಿ) ಇಂಗ್ಲೀಷ್ (ಡಿ) ಉರ್ದು

18. 'ಭರವಸೆಗಳ' – ಈ ಪದದಲ್ಲಿರುವ ವಿಭಕ್ತಿಯ ಹೆಸರು:

(ಎ) ಪ್ರಥಮ (ಬಿ) ಚತುರ್ಥಿ

(ಸಿ) ಷಷ್ಠಿ (ಡಿ) ತೃತೀಯ

19. 'ಅವನು' – ಎಂಬುದು ಈ ನಾಮಪದಕ್ಕೆ ಉದಾಹರಣೆ:

(ಎ) ಸರ್ವನಾಮ (ಬಿ) ಅಂಕಿತನಾಮ

(ಸಿ) ರೂಢನಾಮ (ಡಿ) ಅನ್ವರ್ಥಕ ನಾಮ

20. 'ಶಿಕ್ಷಕ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ :

(ಎ) ಸರ್ವನಾಮ (ಬಿ) ಭಾವನಾಮ

(ಸಿ) ಅನ್ವರ್ಥಕನಾಮ (ಡಿ) ಅಂಕಿತನಾಮ

21. 'ಉರ್ವಿಯೊಳ್' – ಈ ಪದಲ್ಲಿರುವ ವಿಭಕ್ತಿ :

(ಎ) ಸಪ್ತಮೀ (ಬಿ) ಷಷ್ಠೀ

(ಸಿ) ದ್ವಿತೀಯಾ (ಡಿ) ಪ್ರಥಮಾ

22. ಇವುಗಳಲ್ಲಿ ಗುಂಪಿಗೆ ಸೇರದ ಪದವಿದು;

(ಎ) ವಿಜ್ಞಾಪನಾ (ಬಿ) ವೀರ

(ಸಿ) ಚಂದಿರ (ಡಿ) ಕಾರ್ಯ

23. ಹಳಗನ್ನಡದ ಸಪ್ತಮಿ ವಿಭಕ್ತಿ ಪ್ರತ್ಯಯ;

(ಎ) ಮ್ (ಬಿ) ಒಳ್

(ಸಿ) ಅತ್ತಣಿಂ (ಡಿ) ಇಂದಂ

24. "ಸಹದೇವ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ.

(ಎ) ರೂಢನಾಮ (ಬಿ) ಅಂಕಿತನಾಮ

(ಸಿ) ಅನ್ವರ್ಥನಾಮ (ಡಿ) ಸರ್ವನಾಮ

25. ಇವುಗಳಲ್ಲಿ ದ್ವಿರುಕ್ತಿ ಅಲ್ಲದ ಪದ

(ಎ) ಕಟ್ಟಕಡೆ (ಬಿ) ದಿಟ್ಟನಿಲುವು

(ಸಿ) ಬಟ್ಟಬಯಲು (ಡಿ) ನಟ್ಟನಡುವೆ

26. “ಅವರ ಜ್ಞಾನಸಂಗ್ರಹ ನಿಜವಾದ ಶಕ್ತಿಯಾಗಿ ಪರಿಣಮಿಸಿದೆ” ಈ ವಾಕ್ಯದಲ್ಲಿಯ ಸರ್ವನಾಮ ಪದ;

(ಎ) ಅವರ (ಬಿ) ಶಕ್ತಿ

(ಸಿ) ಜ್ಞಾನ (ಡಿ) ಸಂಗ್ರಹ

27. ಸರ್ವನಾಮ ಪದಕ್ಕೆ ಉದಾಹರಣೆಯಿದು;

(ಎ) ವ್ಯಾಪಾರಿ (ಬಿ) ನದಿ

(ಸಿ) ಯಾರು (ಡಿ) ರಮೇಶ

28. ‘ಕೌರವನಿಂದ’ ಈ ಪದದಲ್ಲಿರುವ ವಿಭಕ್ತಿ;

(ಎ) ಪ್ರಥಮಾ (ಬಿ) ದ್ವಿತೀಯಾ

(ಸಿ) ತೃತೀಯಾ (ಡಿ) ಚತುರ್ಥೀ

29. ಪೋರ್ಚುಗೀಸ್ ಭಾಷೆಯಿಂದ ಕನ್ನಡಕ್ಕೆ ಬಂದಿರುವ ಪದ;

(ಎ) ಸಾಬೂನು (ಬಿ) ಜಮೀನು

(ಸಿ) ತಾಲ್ಲೂಕು (ಡಿ) ಸಲಾಮು

30. ಅಂಕಿತನಾಮ ಪದಕ್ಕೆ ಉದಾಹರಣೆಯಿದು;

(ಎ) ವ್ಯಾಪಾರಿ (ಬಿ) ಪರ್ವತ

(ಸಿ) ಸಹದೇವ (ಡಿ) ವಿದ್ವಾಂಸ

31. ಹಳಗನ್ನಡ ಪಂಚಮೀ ವಿಭಕ್ತಿ ಪ್ರತ್ಯಯವಿದು;

(ಎ) ಅತ್ತಣಿಂ (ಬಿ) ಇಂ

(ಸಿ) ಅಂ (ಡಿ) ಒಳ್

32. ‘ಚೌಕಾಷಿ’ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ;

(ಎ) ಫಾರ್ಸಿ (ಬಿ) ಅರಬ್ಬೀ

(ಸಿ) ಪೋರ್ಚುಗೀಸ್ (ಡಿ) ಉರ್ದು

33. ‘ಪಾಂಡುರಾಜಂಗೆ’ ಪದವು ಈ ವಿಭಕ್ತಿಯಲ್ಲಿದೆ.

(ಎ) ಪ್ರಥಮಾ (ಬಿ) ದ್ವಿತೀಯಾ

(ಸಿ) ತೃತೀಯಾ (ಡಿ) ಚತುರ್ಥೀ

34. ‘ಅನ್ವರ್ಥನಾಮ’ ಪದಕ್ಕೆ ಉದಾಹರಣೆಯಿದು :

(ಎ) ವಿಜ್ಞಾನಿ (ಬಿ) ಸಹದೇವ

(ಸಿ) ಪರ್ವತ (ಡಿ) ಊರು

35. ‘ಬಂದೂಕು’ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

(ಎ) ಪೋರ್ಚುಗೀಸ್ (ಬಿ) ಉರ್ದು

(ಸಿ) ಫಾರ್ಸಿ (ಡಿ) ರೋಮನ್

36. ರೂಢನಾಮ ಪದಕ್ಕೆ ಉದಾಹರಣೆಯಿದು;

(ಎ) ನದಿ (ಬಿ) ವಿಶ್ವೇಶ್ವರಯ್ಯ

(ಸಿ) ಐದು (ಡಿ) ಶಿಕ್ಷಕ

37. ‘ಲೋಕದೊಳ್’ ಪದದಲ್ಲಿರುವ ವಿಭಕ್ತಿ;

(ಎ) ಪ್ರಥಮ (ಬಿ) ತೃತೀಯ

(ಸಿ) ಪಂಚಮಿ (ಡಿ) ಸಪ್ತಮಿ

38. ಪರಿಮಾಣವಾಚಕಕ್ಕೆ ಉದಾಹರಣೆಯಿದು;

(ಎ) ಹಲವು (ಬಿ) ಹಳತು

(ಸಿ) ಹಿರಿಮೆ (ಡಿ) ಒಳ್ಳೆಯ

39. ಪಂಚಮೀ ವಿಭಕ್ತಿಯ ಕಾರಕಾರ್ಥ ಇದು;

(ಎ) ಸಂಬಂಧ (ಬಿ) ಅಧಿಕರಣ

(ಸಿ) ಸಂಪ್ರದಾನ (ಡಿ) ಅಪಾದಾನ

40. ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತಿರುವ ಹಿಂದೂಸ್ಥಾನಿ ಭಾಷೆಯ ಪದ ಇದಾಗಿದೆ;

(ಎ) ಇಲಾಖೆ (ಬಿ) ತರಬೇತು

(ಸಿ) ಕಾಗದ (ಡಿ) ರಸೀದಿ

41. ಅನ್ವರ್ಥನಾಮಕ್ಕೆ ಉದಾಹರಣೆಯಿದು;

(ಎ) ಪರ್ವತ (ಬಿ) ಸಹದೇವ

(ಸಿ) ವೈದ್ಯ (ಡಿ) ಒಳ್ಳೆಯ

42. ಸಪ್ತಮೀ ವಿಭಕ್ತಿ ಪ್ರತ್ಯಯಯುಕ್ತ ಪದ ಇದು;

(ಎ) ಮರದಿಂ (ಬಿ) ಮರದತ್ತಣಿಂ

(ಸಿ) ಮರದ (ಡಿ) ಮರದೊಳ್

**43. 'ವೈಶಾಖ' ಪದದ ತದ್ಭವ ರೂಪ**

**A) ಬೇಸಗೆ** B) ವರುಸ

C) ಬೆಸುಗೆ D) ಜೂಜು

**44. ಹಳೆಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯ**

A) ಮ್ B) ಅಂ

C) ಅತ್ತಣಿಂ **D) ಒಳ್**

**45. ಹಳಗನ್ನಡದ ದ್ವಿತೀಯಾ ವಿಭಕ್ತಿಯ ಪ್ರತ್ಯಯ**

A) ಮ್ B) ಒಳ್

C) ಅತ್ತಣಿಂ **D) ಅಂ**

**46. 'ಕಲಶ' ಪದದ ತದ್ಭವ ರೂಪ**

A) ವರುಸ B) ಅಂಕುಸ

**C) ಕಳಸ** D) ಕಲ್ಮಶ

47. 'ರಾಹುಲ' ಪದವು ನಾಮಪದದ ಈ ಗುಂಪಿಗೆ ಸೇರಿದೆ;

ಎ) ರೂಢನಾಮ (ಬಿ) ಅನ್ವರ್ಥನಾಮ

(ಸಿ) ಅಂಕಿತನಾಮ (ಡಿ) ಭಾವನಾಮ

48. ಚತುರ್ಥೀ ವಿಭಕ್ತಿ ಪ್ರತ್ಯಯದ ಕಾರಕಾರ್ಥ;

(ಎ) ಸಂಪ್ರದಾನ (ಬಿ) ಸಂಬಂಧ

(ಸಿ) ಅಪಾದಾನ (ಡಿ) ಅಧಿಕರಣ

49. 'ವ್ಯಾಪಾರಿ' ಪದದ ತದ್ಭವ ರೂಪ;

(ಎ) ಬಿಕಾರಿ (ಬಿ) ಬೀಮಾರಿ

(ಸಿ) ಬೇಹಾರಿ (ಡಿ) ಬಿಹಾರಿ

50. 'ಸಾವಿತ್ರಿಯೊಳ್' ಪದದಲ್ಲಿರುವ ವಿಭಕ್ತಿಯಿದು;

(ಎ) ಪ್ರಥಮಾ (ಬಿ) ತೃತೀಯಾ

(ಸಿ) ಪಂಚಮೀ (ಡಿ) ಸಪ್ತಮೀ

51. ಅನ್ವರ್ಥನಾಮಕ್ಕೆ ಉದಾಹರಣೆಯಾದ ಪದವಿದು;

(ಎ) ರಾಹುಲ (ಬಿ) ಪರ್ವತ

(ಸಿ) ಮನುಷ್ಯ (ಡಿ) ವಿಜ್ಞಾನಿ

52. 'ಸ್ಯಾನಿಟರಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ;

(ಎ) ಹಿಂದೂಸ್ಥಾನಿ (ಬಿ) ಇಂಗ್ಲಿಷ್

(ಸಿ) ಗ್ರೀಕ್ (ಡಿ) ಪೋರ್ಚುಗೀಸ್

53. 'ಊರನ್ನು' ಪದದಲ್ಲಿರುವ ವಿಭಕ್ತಿಯಿದು;

(ಎ) ಚತುರ್ಥೀ (ಬಿ) ತೃತೀಯಾ

(ಸಿ) ದ್ವಿತೀಯಾ (ಡಿ) ಪ್ರಥಮಾ

54. ಅನ್ವರ್ಥನಾಮ ಪದಕ್ಕೆ ಉದಾಹರಣೆಯಿದು;

(ಎ) ವಿಜ್ಞಾನಿ (ಬಿ) ರಾಹುಲ

(ಸಿ) ಮನುಷ್ಯ (ಡಿ) ಮೂವರು

## ಕನ್ನಡ ಸಂಧಿಗಳು

- **ಸಂಧಿ :** ಎರಡು ಅಥವಾ ಹಲವು ಅಕ್ಷರಗಳ ನಡುವೆ ಕಾಲವಿಳಂಬವಿಲ್ಲದೆ, ಅರ್ಥಕ್ಕೆ ವ್ಯತ್ಯಯ ಬಾರದಂತೆ ಸೇರಿ ಉಚ್ಚರಿಸುವುದಕ್ಕೆ **'ಸಂಧಿ'** ಎನ್ನುವರು. ಸಂಧಿಯೆಂದರೆ ಅಕ್ಷರಗಳು ಪರಸ್ಪರವಾಗಿ ಕೂಡುವುದು. ಸಂಧಿಯಲ್ಲಿ ಸ್ವರ ರಹಿತ ಅಕ್ಷರವು ಮುಂದಿನ ಅಕ್ಷರದೊಡನೆ ಸೇರಿಕೊಳ್ಳುತ್ತದೆ. ಅಕ್ಷರಗಳು ಪರಸ್ಪರ ಕೂಡುವಾಗ ನಡೆಯುವ ಕ್ರಿಯೆಯನ್ನು 'ಸಂಧಿಕಾರ್ಯ' ಎನ್ನುವರು. ಹೀಗೆ ಸಂಧಿಕಾರ್ಯ ನಡೆಯುವಾಗ ಒಂದು ಅಕ್ಷರವು ಬಿಟ್ಟು ಹೋದರೆ ಅದನ್ನು 'ಲೋಪ' ಎಂದೂ, ಒಂದು ಅಕ್ಷರವು ಹೊಸದಾಗಿ ಬಂದು ಸೇರಿದರೆ 'ಆಗಮ' ಎಂದೂ, ಒಂದು ಅಕ್ಷರಕ್ಕೆ ಬದಲಾಗಿ ಮತ್ತೊಂದು ಅಕ್ಷರವು ಬಂದರೆ ಅದನ್ನು 'ಆದೇಶ' ಎಂದೂ ಕರೆಯುವರು. ನಿಪಾತ (ಅವ್ಯಯ) ಮತ್ತು ಅವಧಾರಣೆ, ವಿಶಂಕೆಗಳ ಪೂರ್ವಾಂತ್ಯದಲ್ಲಿ ಎ, ಏ, ಒ, ಓ ಸ್ವರಗಳಿಗೆ ಸ್ವರಗಳು ಪರವಾದರೆ ಸಂಧಿಯಾಗುವುದಿಲ್ಲ. ಪ್ಲುತಸ್ವರಕ್ಕೆ ಸ್ವರ ಪರವಾದರೂ ಸಂಧಿಯಾಗುವುದಿಲ್ಲ. ಹೀಗೆ ಸಂಧಿಕಾರ್ಯಗಳು ನಡೆಯದೆ ಇರುವುದನ್ನು 'ಪ್ರಕೃತಿ ಭಾವ' ಎನ್ನುವರು.

  ಉದಾಹರಣೆ :

  | | | | | | |
  |---|---|---|---|---|---|
  | ನಮ್ಮ | + ಊರು | = ನಮ್ಮೂರು | ಪ್ರೀತಿ | + ಅನ್ನು | = ಪ್ರೀತಿಯನ್ನು |
  | ಜಾಣ್ | + ಉಂಟು | = ಜಾಣುಂಟು | ಸುಗಮ | + ಆಯಿತು | = ಸುಗಮವಾಯಿತು |
  | ಕಲ್ | + ಮಳೆ | = ಕಲ್ಮಳೆ | ಹೊಸ | + ಕನ್ನಡ | = ಹೊಸಗನ್ನಡ |

  ಪ್ರಕೃತಿ ಭಾವಕ್ಕೆ ಉದಾಹರಣೆ :

  | | | |
  |---|---|---|
  | ಓಹೋ | + ಇರಲಿ | = ಓಹೋ ಇರಲಿ |
  | ಪೊರೆವನೆ | + ಇಂದ್ರ | = ಪೊರೆವನೆ ಇಂದ್ರ |
  | ಆನೆಯೋ | + ಅದ್ರಿಯೋ | = ಆನೆಯೋ ಅದ್ರಿಯೋ |
  | ಕು ಕ್ಕೂ ಕ್ಕೂಽ | + ಎಂದು | = ಕು ಕ್ಕೂ ಕ್ಕೂಽ ಎಂದು |

- **ಪದಮಧ್ಯ ಸಂಧಿ :** ಪ್ರಕೃತಿ ಮತ್ತು ಪ್ರತ್ಯಯಗಳ ನಡುವೆ ನಡೆಯುವ ಸಂಧಿಯನ್ನು **'ಪದಮಧ್ಯ ಸಂಧಿ'** ಎನ್ನುವರು. ಇದು ನಿತ್ಯ (ಕಡ್ಡಾಯವಾಗಿ ಸಂಧಿ ಮಾಡಬೇಕು).

  ಉದಾಹರಣೆ :

  ಗುರು + ಅನ್ನು = ಗುರುವನ್ನು     ಶರಣ + ಇಂದ = ಶರಣನಿಂದ

- **ಪದಾಂತ್ಯ ಸಂಧಿ :** ಪದ ಪದಗಳ ನಡುವೆ ನಡೆಯುವ ಸಂಧಿಯನ್ನು **'ಪದಾಂತ್ಯ ಸಂಧಿ'** ಎನ್ನುವರು. ಇದು ವಿಕಲ್ಪ. (ಸಂಧಿಯನ್ನು ಬೇಕಾದರೆ ಮಾಡಬಹುದು / ಮಾಡದೇ ಹಾಗೆ ಬಿಡಬಹುದು)

  ಉದಾಹರಣೆ :

  ಶಿಖರವನ್ನು + ಏರಿದನು = ಶಿಖರವನ್ನೇರಿದನು / ಶಿಖರವನ್ನು ಏರಿದನು.

  ಆಟವನ್ನು + ಆಡಿದನು = ಆಟವನ್ನಾಡಿದನು / ಆಟವನ್ನು ಆಡಿದನು.

- ಸಂಧಿಯಲ್ಲಿ **2** ಪ್ರಕಾರಗಳಿವೆ. ಅವು ಯಾವುವೆಂದರೆ

  1. ಕನ್ನಡ ಸಂಧಿಗಳು 2. ಸಂಸ್ಕೃತ ಸಂಧಿಗಳು

- **ಕನ್ನಡ ಸಂಧಿಗಳು :** ಎರಡೂ ಕನ್ನಡ ಪದಗಳು ಅಥವಾ ಒಂದು ಕನ್ನಡ ಪದ ಇನ್ನೊಂದು ಸಂಸ್ಕೃತಪದಗಳು ಸೇರಿ ಆಗುವ ಸಂಧಿಯನ್ನು **'ಕನ್ನಡ ಸಂಧಿ'** ಎನ್ನುವರು.

  ಕನ್ನಡ ಸಂಧಿಯಲ್ಲಿ 2 ಪ್ರಕಾರಗಳಿವೆ. 1. ಸ್ವರ ಸಂಧಿಗಳು 2. ವ್ಯಂಜನ ಸಂಧಿ

- **ಸ್ವರ ಸಂಧಿ :** ಸ್ವರದ ಮುಂದೆ ಸ್ವರ ಬಂದು ಆಗುವ ಸಂಧಿಯನ್ನು **'ಸ್ವರ ಸಂಧಿ'** ಎನ್ನುವರು. ಕನ್ನಡ ಸ್ವರ ಸಂಧಿಗಳು **1. ಲೋಪ ಸಂಧಿ. 2. ಆಗಮ ಸಂಧಿ**

- **ಲೋಪ ಸಂಧಿ :** ಸ್ವರದ ಮುಂದೆ ಸ್ವರ ಬಂದು ಸಂಧಿಯಾದಾಗ ಪೂರ್ವಪದದ ಅಂತ್ಯದ ಸ್ವರವು ಇಲ್ಲವಾದರೆ ಅದನ್ನು **'ಲೋಪ ಸಂಧಿ'** ಎನ್ನುವರು. ಪದದ ಅರ್ಥವು ಕೆಡುವಂತಿದ್ದರೆ ಲೋಪ ಸಂಧಿಯನ್ನು ಮಾಡಬಾರದು.

  **ಉದಾಹರಣೆ :**

  ಉಸಿರು + ಆಡು > ಉಸಿರಾಡು – ಲೋಪ ಸಂಧಿ

  ಉಸಿರ್ + **ಉ** + ಆಡು > ಉಸಿರ್ + ಆಡು > ಉ ಲೋಪ

| | | | | | |
|---|---|---|---|---|---|
| ತುಪ್ಪಳದ + ಅಂತೆ | = | ತುಪ್ಪಳದಂತೆ | ಒಂದು + ಒಂದು | = | ಒಂದೊಂದು |
| ಊರು + ಊರು | = | ಊರೂರು | ಬಲ್ಲೆನು + ಎಂದು | = | ಬಲ್ಲೆನೆಂದು |
| ಮಾತು + ಅಂತು | = | ಮಾತಂತು | ಸಂಪನ್ನರು + ಆದ | = | ಸಂಪನ್ನರಾದ |

- ಸಾಮಾನ್ಯವಾಗಿ ಪೂರ್ವಾಂತ್ಯದಲ್ಲಿರುವ ಅ, ಇ, ಉ, ಎ, ಸ್ವರಗಳಿಗೆ ಸ್ವರವು ಪರವಾದರೆ ಲೋಪಸಂಧಿಯಾಗುತ್ತದೆ.

  ಉದಾಹರಣೆ :

| | | | | | |
|---|---|---|---|---|---|
| ಹಣದ + ಆಸೆ | = | ಹಣದಾಸೆ | ಕಲಿ + ಇಸು | = | ಕಲಿಸು |
| ಸುತ್ತು + ಓಲೆ | = | ಸುತ್ತೋಲೆ | ಕಲಿಯದೆ + ಇರುವನು | = | ಕಲಿಯದಿರುವನು. |

- **ಆಗಮ ಸಂಧಿ :** ಸ್ವರದ ಮುಂದೆ ಸ್ವರ ಬಂದು ಸಂಧಿಯಾದಾಗ ಪೂರ್ವಪದದ ಅಂತ್ಯದ ಸ್ವರ ಹಾಗೂ ಉತ್ತರಪದದ ಆದಿಸ್ವರದ ನಡುವೆ ಒಂದು ವ್ಯಂಜನವು ಹೊಸದಾಗಿ ಬಂದು ಸೇರಿದರೆ ಅದನ್ನು **'ಆಗಮ ಸಂಧಿ'** ಎನ್ನುವರು. ಲೋಪ ಸಂಧಿಯನ್ನು ಮಾಡಿದರೆ ಪದದ ಅರ್ಥವು ಕೆಡುವಂತಿದ್ದರೆ ಅಂತಹ ಸಂದರ್ಭದಲ್ಲಿ ಆ ಎರಡು ಸ್ವರಗಳ ನಡುವೆ 'ಯ್' ಅಥವಾ 'ವ್' ಕಾರವನ್ನು ಹೊಸದಾಗಿ ಸೇರಿಸಿ ಆಗಮ ಸಂಧಿಯನ್ನು ಮಾಡಬೇಕು.

  **ಉದಾಹರಣೆ :–**

  ಕೈ + ಆಡಿಸು > ಕೈ**ಯಾ**ಡಿಸು – ಆಗಮ ಸಂಧಿ

  ಕೈ + ಆಡಿಸು > ಕೈ + **ಯ್** + ಆಡಿಸು – ಯ್ ಆಗಮ

  ಗುರು + ಅನ್ನು > ಗುರು**ವ**ನ್ನು – ಆಗಮ ಸಂದಿ

  ಗುರು + ಅನ್ನು > ಗುರು + ವ್ + ಅನ್ನು – ವ್ ಆಗಮ

| | | | | | |
|---|---|---|---|---|---|
| ಕೈ + ಅನ್ನು | = | ಕೈ**ಯ**ನ್ನು | ಮಳೆ + ಇಂದ | = | ಮಳೆ**ಯಿ**ಂದ |
| ಶಾಲೆ + ಅಲ್ಲಿ | = | ಶಾಲೆ**ಯ**ಲ್ಲಿ | ಮರ + ಅನ್ನು | = | ಮರ**ವ**ನ್ನು |
| ಮಗು + ಇಗೆ | = | ಮಗುವಿಗೆ | ಸ್ವಾರಸ್ಯ + ಇಲ್ಲ | = | ಸ್ವರಾಸ್ಯವಿಲ್ಲ |

- ಸಾಮಾನ್ಯವಾಗಿ ಪೂರ್ವಾಂತ್ಯದಲ್ಲಿರುವ ಆ, ಇ, ಈ, ಎ, ಏ. ಐ ಓ ಸ್ವರಗಳಿಗೆ ಸ್ವರವು ಪರವಾದರೆ ಅವೆರಡರ ನಡುವೆ 'ಯ್' ಕಾರಾಗಮವಾಗುತ್ತದೆ.

  ಉದಾಹರಣೆ :

| | | | | | |
|---|---|---|---|---|---|
| ಕಾ + ಅಲು | = | ಕಾಯಲು | ಬಲಿ + ಅನ್ನು | = | ಬಲಿಯನ್ನು |
| ಸ್ತ್ರೀ + ಅರು | = | ಸ್ತ್ರೀಯರು | ತೊರೆ + ಅನ್ನು | = | ತೊರೆಯನ್ನು |
| ಮೇ + ಇಸು | = | ಮೇಯಿಸು | ಕೈ + ಅಲ್ಲಿ | = | ಕೈಯಲ್ಲಿ |
| ಜೋ + ಎಂದು | = | ಜೋಯೆಂದು | | | |

- ಸಾಮಾನ್ಯವಾಗಿ ಪೂರ್ವಾಂತ್ಯದಲ್ಲಿರುವ ಉ, ಊ, ಋ, ಓ, ಔ ಸ್ವರಗಳಿಗೆ ಸ್ವರವು ಪರವಾದರೆ ಅವೆರಡರ ನಡುವೆ 'ವ್' ಕಾರಾಗಮವಾಗುತ್ತದೆ.

  ಉದಾಹರಣೆ :

| | | | | | |
|---|---|---|---|---|---|
| ಕೊಡು + ಉದು | = | ಕೊಡುವುದು | ಹೂ + ಅನ್ನು | = | ಹೂವನ್ನು |
| ಪಿತೃ + ಅನ್ನು | = | ಪಿತೃವನ್ನು | ಗೋ + ಉ | = | ಗೋವು |

- **ವ್ಯಂಜನ ಸಂಧಿ :** ಸ್ವರ ಮತ್ತು ವ್ಯಂಜನಗಳ ಅಥವಾ ವ್ಯಂಜನ ಮತ್ತು ವ್ಯಂಜನಗಳ ನಡುವೆ ನಡೆಯುವ ಸಂಧಿಯನ್ನು **'ವ್ಯಂಜನ ಸಂಧಿ'** ಎನ್ನುವರು. ಆದೇಶ ಸಂಧಿಯು ಕನ್ನಡದ ವ್ಯಂಜನ ಸಂಧಿಯಾಗಿದೆ.
- **ಆದೇಶ ಸಂಧಿ :** ಪೂರ್ವಪದದ ಅಂತ್ಯದಲ್ಲಿ ಸ್ವರ ಅಥವಾ ವ್ಯಂಜನ ಅಕ್ಷರವಿದ್ದು ಉತ್ತರಪದದ ಆದಿಯಲ್ಲಿ ಕ / ತ / ಪ ವ್ಯಂಜನಗಳಿದ್ದರೆ ಸಂಧಿಯಾದಾಗ ಕ / ತ / ಪ ಗಳಿಗೆ ಕ್ರಮವಾಗಿ ಗ / ದ / ಬ ಗಳು ಆದೇಶವಾದರೆ ಅದನ್ನು **'ಆದೇಶ ಸಂಧಿ'** ಎನ್ನುವರು.

**ಉದಾಹರಣೆ :–**

| | | | | |
|---|---|---|---|---|
| ಹಳ | + **ಕ**ನ್ನಡ | = ಹಳ**ಗ**ನ್ನಡ | – ಆದೇಶ ಸಂಧಿ | |
| ಹಳ | + **ಕ**ನ್ನಡ | = ಹಳ + **ಗ**ನ್ನಡ | – **ಗ್** ಆದೇಶ ಸಂಧಿ | |
| ತಲೆ | + **ತೂ**ಗು | = ತಲೆ**ದೂ**ಗು | – ಆದೇಶ ಸಂಧಿ | |
| ತಲೆ | + **ತೂ**ಗು | = ತಲೆ + **ದೂ**ಗು | – **ದ್** ಆದೇಶ | |
| ಕಣ್ | + **ಪ**ನಿ | = ಕಂ**ಬ**ನಿ | – ಅದೇಶ ಸಂಧಿ | |
| ಕಣ್ | + **ಪ**ನಿ | = ಕಂ + **ಬ**ನಿ | – **ಬ್** ಆದೇಶ | |

| | | | | | |
|---|---|---|---|---|---|
| ಹುಲ್ಲು | + **ಕಾ**ವಲು | = ಹುಲ್ಲು**ಗಾ**ವಲು | ಹುಲಿ | + **ತೊ**ಗಲು | = ಹುಲಿ**ದೊ**ಗಲು |
| ಮಳೆ | + ಕಾಲ | = ಮಳೆಗಾಲ | ಮೈ | + ತೋರು | = ಮೈದೋರು |
| ಬೆನ್ | + ಪತ್ತು | = ಬೆಂಬತ್ತು | ತುದಿ | + ಕಾಲು | = ತುದಿಗಾಲು |

- **ಅ) ವಕಾರಾದೇಶ ಸಂಧಿ :–** ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ 'ಪ್/ಬ್/ಮ್' ವ್ಯಂಜನಗಳಿಗೆ 'ವ್' ವ್ಯಂಜನ ಆದೇಶವಾದರೆ ಅದನ್ನು **'ವಕಾರಾದೇಶ ಸಂಧಿ'** ಎನ್ನುವರು.

**ಉದಾಹರಣೆ :**

| | | | |
|---|---|---|---|
| ಕೆನೆ | + **ಪಾ**ಲು | = ಕೆನೆ**ವಾ**ಲು | ( ಪ್ ಸ್ಥಳದಲ್ಲಿ ವ್ ಆದೇಶ ) |
| ಬೆವರ್ | + **ಪ**ನಿ | = ಬೆವ**ರ್ವ**ನಿ | ( ಪ್ ಸ್ಥಳದಲ್ಲಿ ವ್ ಆದೇಶ ) |
| ಬೇರ್ | + **ಪೆ**ರಸಿ | = ಬೇ**ರ್ವೆ**ರಸಿ | ( ಪ್ ಸ್ಥಳದಲ್ಲಿ ವ್ ಆದೇಶ ) |
| ಮೆಲ್ | + **ಪಾ**ಸು | = ಮೆ**ಲ್ವಾ**ಸು | ( ಪ್ ಸ್ಥಳದಲ್ಲಿ ವ್ ಆದೇಶ ) |
| ತಲೆ | + **ಬಾ**ಗು | = ತಲೆ**ವಾ**ಗು | ( ಬ್ ಸ್ಥಳದಲ್ಲಿ ವ್ ಆದೇಶ ) |
| ತೆರೆ | + **ಬಾ**ಯಿ | = ತೆರೆ**ವಾ**ಯಿ | ( ಬ್ ಸ್ಥಳದಲ್ಲಿ ವ್ ಆದೇಶ ) |
| ಎಲೆ | + **ಬ**ಳ್ಳಿ | = ಎಲೆ**ವ**ಳ್ಳಿ | ( ಬ್ ಸ್ಥಳದಲ್ಲಿ ವ್ ಆದೇಶ ) |
| ಕಡು | + **ಬೆ**ಳ್ಪು | = ಕಡು**ವೆ**ಳ್ಪು | ( ಬ್ ಸ್ಥಳದಲ್ಲಿ ವ್ ಆದೇಶ ) |
| ಎಲೆ | + **ಮ**ನೆ | = ಎಲೆ**ವ**ನೆ | ( ಮ್ ಸ್ಥಳದಲ್ಲಿ ವ್ ಆದೇಶ) |
| ನಲ್ | + **ಮಾ**ತು | = ನ**ಲ್ವಾ**ತು | ( ಮ್ ಸ್ಥಳದಲ್ಲಿ ವ್ ಆದೇಶ) |
| ಮೆಲ್ | + ಮಾತು | = ಮೆಲ್ವಾತು | ( ಮ್ ಸ್ಥಳದಲ್ಲಿ ವ್ ಆದೇಶ) |

- **ಆ) ಚ, ಜ, ಛ ಕಾರಾದೇಶ ಸಂಧಿ :–** ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ 'ಸ್' ಕಾರಕ್ಕೆ ಚ್/ಜ್/ಛ್ ಕಾರಗಳು ಕೆಲವು ಕಡೆ ಆದೇಶವಾದರೆ ಅದನ್ನು **'ಚ, ಜ, ಛ ಕಾರಾದೇಶ ಸಂಧಿ'** ಎನ್ನುವರು.

**ಉದಾಹರಣೆ :–**

| | | | |
|---|---|---|---|
| ಇನ್ | + ಸರ | = ಇಂಚರ | ( ಸ್ ಕಾರಕ್ಕೆ ಚ್ ಕಾರಾದೇಶ ) |
| ನುಣ್ | + ಸರ | = ನುಣ್ಚರ | ( ಸ್ ಕಾರಕ್ಕೆ ಚ್ ಕಾರಾದೇಶ ) |
| ಮುನ್ | + ಸೊಡರ್ | = ಮುಂಜೊಡರ್ | ( ಸ್ ಕಾರಕ್ಕೆ ಜ್ ಕಾರಾದೇಶ ) |
| ತಣ್ | + ಸೊಡರ್ | = ತಣ್ಜೊಡರ್ | ( ಸ್ ಕಾರಕ್ಕೆ ಜ್ ಕಾರಾದೇಶ ) |
| ಮುನ್ | + ಸೆರಗು | = ಮುಂಜೆರಗು | ( ಸ್ ಕಾರಕ್ಕೆ ಜ್ ಕಾರಾದೇಶ ) |
| ಮುನ್ | + ಸೂರ್ | = ಮುಂಜೂರ್ | ( ಸ್ ಕಾರಕ್ಕೆ ಜ್ ಕಾರಾದೇಶ ) |

| | | | |
|---|---|---|---|
| ಪೊನ್ | + ಸುರಿಗೆ | = ಪೊಂಜುರಿಗೆ | ( ಸ್ ಕಾರಕ್ಕೆ ಜ್ ಕಾರಾದೇಶ ) |
| ಕಣ್ | + ಸೋಲ್ | = ಕಣ್ಜೋಲ್ | ( ಸ್ ಕಾರಕ್ಕೆ ಜ್ ಕಾರಾದೇಶ ) |
| ಇರ್ | + ಸಾಸಿರ | = ಇರ್ಛಾಸಿರ | ( ಸ್ ಕಾರಕ್ಕೆ ಛ್ ಕಾರಾದೇಶ ) |
| ನೂರ್ | + ಸಾಸಿರ | = ನೂರ್ಛಾಸಿರ | ( ಸ್ ಕಾರಕ್ಕೆ ಛ್ ಕಾರಾದೇಶ ) |
| ಪದಿನೆಣ್ | + ಸಾಸಿರ | = ಪದಿನೆಣ್ಛಾಸಿರ | ( ಸ್ ಕಾರಕ್ಕೆ ಛ್ ಕಾರಾದೇಶ ) |

➢ **ಪ್ರಕೃತಿಭಾವ :** ಯಾವುದೇ ರೀತಿಯ ಸಂಧಿ ಕಾರ್ಯ ನಡೆಯದೇ ಇದ್ದಹಾಗೆ ಇದ್ದರೆ ಅದನ್ನು **'ಪ್ರಕೃತಿಭಾವ'** ಎನ್ನುವರು.

ಉದಾಹರಣೆ :

| | | | | | |
|---|---|---|---|---|---|
| ಆ | + ಆಕಳು | = ಆ ಅಕಳು | ಹೊಸ | + ಅರಿಸಿನ | = ಹೊಸ ಅರಿಸಿನ |
| ಕಲ್ | + ಮಳೆ | = ಕಲ್ಮಳೆ | ಬಲ್ | + ಸೋನೆ | = ಬಲ್ಸೋನೆ |
| ಬಿಲ್ | + ಜಾಣ | = ಬಿಲ್ಜಾಣ | ದಿಕ್ | + ಪಾಲ | = ದಿಕ್ಪಾಲ |
| ನಾಲ್ | + ದೆಸೆ | = ನಾಲ್ದೆಸೆ | | | |

➢ **ಕನ್ನಡ ದ್ವಿತ್ವ ಸಂಧಿ :** ಪದದ ಆದಿಯಲ್ಲಿ ಹ್ರಸ್ವಸ್ವರವಿದ್ದು, ಅಂತ್ಯದಲ್ಲಿ ಣ, ನ, ಯ, ಲ, ಳ ಕಾರಗಳಿದ್ದರೆ ಅದಕ್ಕೆ ಸ್ವರವು ಪರವಾದರೆ ದ್ವಿತ್ವವು ಬಂದರೆ ಅದನ್ನು 'ದ್ವಿತ್ವ ಸಂಧಿ' ಎನ್ನುವರು.

ಉದಾಹರಣೆ :

| | | | | | |
|---|---|---|---|---|---|
| ಕಣ್ | + ಅಮ್ | = ಕಣ್ಣಂ | ಬೆನ್ | + ಅಮ್ | = ಬೆನ್ನಂ |
| ಮೆಯ್ | + ಅಮ್ | = ಮೆಯ್ಯಂ | ಕಲ್ | + ಅಮ್ | = ಕಲ್ಲಂ |
| ಮುಳ್ | + ಅಮ್ | = ಮುಳ್ಳಂ | | | |

➢ ಧಾತುವಿಗೆ ಭೂತಕಾಲದಲ್ಲಿ ಪ್ರತಿಷೇಧಾರ್ಥ ತಿಳಿಸುವ 'ಅದೆ' ಎಂಬುದು ಪರವಾದಾಗ ದ್ವಿತ್ವವು ನಿತ್ಯವಾಗಿ ಬರುತ್ತದೆ.

ಉದಾಹರಣೆ :

| | | | | | |
|---|---|---|---|---|---|
| ಉಣ್ | + ಅದೆ | = ಉಣ್ಣದೆ | ತಿನ್ | + ಅದೆ | = ತಿನ್ನದೆ |
| ಒಯ್ | + ಅದೆ | = ಒಯ್ಯದೆ | ಕೊಲ್ | + ಅದೆ | = ಕೊಲ್ಲದೆ |
| ಕೊಳ್ | + ಅದೆ | = ಕೊಳ್ಳದೆ | | | |

➢ ಉಯ್, ಸುಯ್, ನೆಯ್, ಬಯ್ – ಧಾತುಗಳಿಗೆ 'ಅಮ್' ಪರವಾದಾಗ ದ್ವಿತ್ವವು ನಿತ್ಯವಾಗಿ ಬರುತ್ತದೆ.

ಉದಾಹರಣೆ :

| | | | | | |
|---|---|---|---|---|---|
| ಉಯ್ | + ಅಮ್ | = ಉಯ್ಯಂ | ಸುಯ್ | + ಅಮ್ | = ಸಯ್ಯಂ |
| ನೆಯ್ | + ಅಮ್ | = ನೆಯ್ಯಂ | ಬಯ್ | + ಅಮ್ | = ಬಯ್ಯಂ |

➢ 'ಆರಯ್' ಎಂಬುದರಲ್ಲಿ ಆದಿಸ್ವರವು ದೀರ್ಘವಾಗಿದ್ದರೂ, ಅನೇಕಾಕ್ಷರಗಳಿಂದ ಕೂಡಿದ್ದರೂ 'ಅಲ್' ಅಥವಾ ಇತರ ಯಾವ ಸ್ವರವು ಪರವಾದರೂ ದ್ವಿತ್ವವು ವಿಕಲ್ಪವಾಗಿ ಬರುತ್ತದೆ.

ಉದಾಹರಣೆ :

| | | |
|---|---|---|
| ಆರಯ್ | + ಅಲ್ | = ಆರಯ್ಯಲ್ / ಆರಯಲ್ |
| ಆರಯ್ | + ಇಮ್ | = ಆರಯ್ಯಿಂ / ಆರಯ್ಯಿಂ |

➢ ಪದದಾದಿಯಲ್ಲಿ ದೀರ್ಘಸ್ವರವಿದ್ದರೆ ದ್ವಿತ್ವವು ಬರುವುದಿಲ್ಲ.

ಉದಾಹರಣೆ :

| | | | | | |
|---|---|---|---|---|---|
| ತಾಯ್ | + ಓರ್ವಳ್ | = ತಾಯೋರ್ವಳ್ | ಬಾಯ್ | + ಒಳ್ | = ಬಾಯೊಳ್ |
| ತೋಳ್ | + ಆಟಂ | = ತೋಳಾಟಂ | | | |

- ಅವ್ಯಯಕ್ಕೆ ಸ್ವರವು ಪರವಾದರೆ ದ್ವಿತ್ವವು ಬರುವುದಿಲ್ಲ.
  ಉದಾಹರಣೆ : ಕಲಿದಲ್ + ಇವಂ = ಕಲಿದಲಿವಂ
- ಅನೇಕಾಕ್ಷರಗಳಿಂದ ಕೂಡಿದ ಪದಕ್ಕೆ ಸ್ವರವು ಪರವಾದರೆ ದ್ವಿತ್ವವು ಬರುವುದಿಲ್ಲ.
  ಉದಾಹರಣೆ :
  ಪರರ್ + ಎಲ್ಲ = ಪರರೆಲ್ಲ ಸವಣರ್ + ಆರು = ಸವಣರಾರು
- ಪದದ ಆದಿಯಲ್ಲಿ ಹ್ರಸ್ವಸ್ವರವೂ, ಅಂತ್ಯದಲ್ಲಿ ಣ, ನ, ಯ, ಲ, ಳ ಕಾರಗಳಿದ್ದರೆ ಅದಕ್ಕೆ 'ಅಲ್' ಪರವಾದರೆ ದ್ವಿತ್ವವು ಬರುವುದಿಲ್ಲ.
  ಉದಾಹರಣೆ :
  ಉಣ್ + ಅಲ್ = ಉಣಲ್ ತಿನ್ + ಅಲ್ = ತಿನಲ್
  ಮೆಲ್ + ಅಲ್ = ಮೆಲಲ್ ಕಳ್ + ಅಲ್ = ಕಳಲ್
- ಧಾತುವು ಯಕಾರಾಂತವಾಗಿದ್ದು, ಅದಕ್ಕೆ 'ಅಲ್' ಪರವಾದರೆ ದ್ವಿತ್ವವು ವಿಕಲ್ಪವಾಗಿ ಬರುತ್ತದೆ.
  ಉದಾಹರಣೆ :
  ಪೊಯ್ + ಅಲ್ = ಪೊಯ್ಯಲ್ / ಪೊಯಲ್

## ಸಂಸ್ಕೃತ ಸಂಧಿಗಳು

- **ಸಂಸ್ಕೃತ ಸಂಧಿ :** ಎರಡು ಪದಗಳು ಸಂಸ್ಕೃತ ಪದಗಳು ಸೇರಿ ಆಗುವ ಸಂಧಿಯನ್ನು **'ಸಂಸ್ಕೃತ ಸಂಧಿ'** ಎನ್ನುವರು.
- **ಸಂಸ್ಕೃತ ಸ್ವರ ಸಂಧಿಗಳು :**
  1. ಸವರ್ಣದೀರ್ಘ ಸಂಧಿ
  2. ಗುಣ ಸಂಧಿ
  3. ವೃದ್ಧಿ ಸಂಧಿ
  4. ಯಣ್ ಸಂಧಿ
- **ಸಂಸ್ಕೃತ ವ್ಯಂಜನ ಸಂಧಿಗಳು**
  1. ಜಶ್ತ್ವ ಸಂಧಿ
  2. ಶ್ಚುತ್ವ ಸಂಧಿ
  3. ಷ್ಟುತ್ವ ಸಂಧಿ
  4. ಅನುನಾಸಿಕ ಸಂಧಿ
  5. ವಿಸರ್ಗ ಸಂಧಿ
  6. ಛತ್ವ ಸಂಧಿ
  7. ಲ ಕಾರ ದ್ವಿತ್ವ ಸಂಧಿ
- **ಸವರ್ಣದೀರ್ಘ ಸಂಧಿ :** ಪೂರ್ವಪದದ ಅಂತ್ಯದಲ್ಲಿರುವ ಸವರ್ಣಗಳಾದ **ಅಆ/ಇಈ/ಉಊ** ಅಕ್ಷರಗಳೊಡನೆ ಉತ್ತರ ಪದದ ಆದಿಯಲ್ಲಿರುವ ಸವರ್ಣಗಳಾದ **ಅಆ/ ಇಈ/ ಉಊ** ಅಕ್ಷರಗಳು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ ಆಯಾಯ **ಸವರ್ಣದ ದೀರ್ಘಸ್ವರವು** ಏಕಾದೇಶವಾಗಿ ಬಂದರೆ ಅದನ್ನು **'ಸವರ್ಣ ದೀರ್ಘ ಸಂಧಿ'** ಎನ್ನುವರು.

  **ಉದಾಹರಣೆ :**

| | | | | | | | | | |
|---|---|---|---|---|---|---|---|---|---|
| ಸುರ | + | ಅಸುರ | = | ಸುರಾಸುರ | ಕರತಲ | + | ಆಮಲಕ | = | ಕರತಲಾಮಲಕ |
| ವಿದ್ಯಾ | + | ಅರ್ಥಿ | = | ವಿದ್ಯಾರ್ಥಿ | ವಿದ್ಯಾ | + | ಆಲಯ | = | ವಿದ್ಯಾಲಯ |
| ಮಹಾ | + | ಆತ್ಮ | = | ಮಹಾತ್ಮ | ಮುನಿ | + | ಇಂದ್ರ | = | ಮುನೀಂದ್ರ |
| ಗಿರಿ | + | ಈಶ | = | ಗಿರೀಶ | ಲಕ್ಷ್ಮೀ | + | ಇಂದ್ರ | = | ಲಕ್ಷ್ಮೀಂದ್ರ |
| ಲಕ್ಷ್ಮೀ | + | ಈಶ | = | ಲಕ್ಷ್ಮೀಶ | ಗುರು | + | ಉಪದೇಶ | = | ಗುರೂಪದೇಶ |
| ವಧೂ | + | ಉಪೇತ | = | ವಧೂಪೇತ | ಬಹು | + | ಊರ್ಜಿತ | = | ಬಹೂರ್ಜಿತ |

- **ಗುಣ ಸಂಧಿ :** ಪೂರ್ವಪದದ ಅಂತ್ಯದಲ್ಲಿರುವ **'ಅಆ'** ಕಾರಗಳೊಡನೆ ಉತ್ತರ ಪದದ ಆದಿಯಲ್ಲಿರುವ **'ಇಈ'** ಕಾರಗಳು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ **'ಏ'** ಕಾರವೂ, ಪೂರ್ವಪದದ ಅಂತ್ಯದಲ್ಲಿರುವ **'ಅಆ'** ಕಾರಗಳೊಡನೆ ಉತ್ತರ ಪದದ ಆದಿಯಲ್ಲಿರುವ **'ಉಊ'** ಕಾರಗಳು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ **'ಓ'** ಕಾರವೂ, ಪೂರ್ವಪದದ ಅಂತ್ಯದಲ್ಲಿರುವ **'ಅಆ'** ಕಾರಗಳೊಡನೆ ಉತ್ತರ ಪದದ ಆದಿಯಲ್ಲಿರುವ **'ಋ'** ಕಾರಗಳು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ **'ಅರ್'** ಕಾರವೂ ಏಕಾದೇಶವಾಗಿ ಬಂದರೆ ಅದನ್ನು **'ಗುಣ ಸಂಧಿ'** ಎನ್ನುವರು.

  **ಉದಾಹರಣೆ :**

| | | | | | | | | | |
|---|---|---|---|---|---|---|---|---|---|
| ನರ | + | ಇಂದ್ರ | = | ನರೇಂದ್ರ | ದೇವ | + | ಇಂದ್ರ | = | ದೇವೇಂದ್ರ |
| ಜ್ಞಾನ | + | ಈಶ್ವರ | = | ಜ್ಞಾನೇಶ್ವರ | ಗಣ | + | ಈಶ | = | ಗಣೇಶ |
| ಧರಾ | + | ಇಂದ್ರ | = | ಧರೇಂದ್ರ | ಮಹಾ | + | ಈಶ್ವರ | = | ಮಹೇಶ್ವರ |
| ಸೂರ್ಯ | + | ಉದಯ | = | ಸೂರ್ಯೋದಯ | ಮಹಾ | + | ಉತ್ತಮ | = | ಮಹೋತ್ತಮ |

| | | | | | |
|---|---|---|---|---|---|
| ಸಪ್ತ | + ಋಷಿ | = ಸಪ್ತರ್ಷಿ | ಮಹಾ | + ಋಷಿ | = ಮಹರ್ಷಿ |

➢ **ವೃದ್ಧಿ ಸಂಧಿ :** ಪೂರ್ವಪದದ ಅಂತ್ಯದಲ್ಲಿರುವ **'ಅಆ'** ಕಾರಗಳೊಡನೆ ಉತ್ತರ ಪದದ ಆದಿಯಲ್ಲಿರುವ **'ಏಐ'** ಕಾರಗಳು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ **'ಐ'** ಕಾರವೂ, ಪೂರ್ವಪದದ ಅಂತ್ಯದಲ್ಲಿರುವ **'ಅಆ'** ಕಾರಗಳೊಡನೆ ಉತ್ತರ ಪದದ ಆದಿಯಲ್ಲಿರುವ **'ಓಔ'** ಕಾರಗಳು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ **'ಔ'** ಕಾರವೂ ಏಕಾದೇಶವಾಗಿ ಬಂದರೆ ಅದನ್ನು **'ವೃದ್ಧಿ ಸಂಧಿ'** ಎನ್ನುವರು.

ಉದಾಹರಣೆ :

| | | | | | |
|---|---|---|---|---|---|
| ಏಕ | + ಏಕ | = ಏಕೈಕ | ಲೋಕ | + ಏಕವೀರ | = ಲೋಕೈಕವೀರ |
| ಜನ | + ಐಕ್ಯ | = ಜನೈಕ್ಯ | ಅಷ್ಟ | + ಐಶ್ವರ್ಯ | = ಅಷ್ಟೈಶ್ವರ್ಯ |
| ವನ | + ಓಷಧಿ | = ವನೌಷಧಿ | ಮಹಾ | + ಓಘ | = ಮಹೌಘ |
| ಮಹಾ | + ಔಷಧ | = ಮಹೌಷಧ | ದಿವ್ಯ | + ಔಷಧ | = ದಿವ್ಯೌಷಧ |

➢ **ಯಣ್ ಸಂಧಿ :** ಪೂರ್ವಪದದ ಅಂತ್ಯದಲ್ಲಿರುವ **'ಇಈ'** ಕಾರಗಳೊಡನೆ ಉತ್ತರ ಪದದ ಆದಿಯಲ್ಲಿರುವ ಅಸವರ್ಣ ಸ್ವರಗಳು ಸೇರಿ ಸಂಧಿಯಾದಾಗ **'ಇಈ'** ಕಾರಗಳ ಸ್ಥಾನದಲ್ಲಿ **'ಯ್'** ಕಾರವೂ, ಪೂರ್ವಪದದ ಅಂತ್ಯದಲ್ಲಿರುವ **'ಉಊ'** ಕಾರಗಳೊಡನೆ ಉತ್ತರ ಪದದ ಆದಿಯಲ್ಲಿರುವ ಅಸವರ್ಣ ಸ್ವರಗಳು ಸೇರಿ ಸಂಧಿಯಾದಾಗ **'ಉಊ'** ಕಾರಗಳ ಸ್ಥಾನದಲ್ಲಿ **'ವ್'** ಕಾರವೂ, ಪೂರ್ವಪದದ ಅಂತ್ಯದಲ್ಲಿರುವ **'ಋ'** ಕಾರದೊಡನೆ ಉತ್ತರ ಪದದ ಆದಿಯಲ್ಲಿರುವ ಅಸವರ್ಣ ಸ್ವರಗಳು ಸೇರಿ ಸಂಧಿಯಾದಾಗ **'ಋ'** ಕಾರದ ಸ್ಥಾನದಲ್ಲಿ **'ರ್'** ಕಾರವೂ ಆದೇಶವಾಗಿ ಬಂದರೆ ಅದನ್ನು **'ಯಣ್ ಸಂಧಿ'** ಎನ್ನುವರು.

ಉದಾಹರಣೆ :

| | | | | | |
|---|---|---|---|---|---|
| ಅತಿ | + ಅವಸರ | = ಅತ್ಯವಸರ | ಅತಿ | + ಅಂತ | = ಅತ್ಯಂತ |
| ಇತಿ | + ಆದಿ | = ಇತ್ಯಾದಿ | ಅತಿ | + ಉತ್ತಮ | = ಅತ್ಯುತ್ತಮ |
| ಜಾತಿ | + ಅತೀತ | = ಜಾತ್ಯತೀತ | ಪ್ರತಿ | + ಉತ್ತರ | = ಪ್ರತ್ಯುತ್ತರ |
| ಕೋಟಿ | + ಅಧೀಶ್ವರ | = ಕೋಟ್ಯಧೀಶ್ವರ | ಕೋಟಿ | + ಅನುಕೋಟಿ | = ಕೋಟ್ಯನುಕೋಟಿ |
| ಮನು | + ಅಂತರ | = ಮನ್ವಂತರ | ಗುರು | + ಆಜ್ಞೆ | = ಗುರ್ವಾಜ್ಞೆ |
| ಅಣು | + ಅಸ್ತ್ರ | = ಅಣ್ವಸ್ತ್ರ | ವಧೂ | + ಆಭರಣ | = ವಧ್ವಾಭರಣ |
| ಪಿತೃ | + ಆಜ್ಞೆ | = ಪಿತ್ರಾಜ್ಞೆ | ಮಾತೃ | + ಅಂಶ | = ಮಾತ್ರಂಶ |

➢ **ಜಶ್ತ್ವ ಸಂಧಿ :** ಪೂರ್ವ ಪದದ ಅಂತ್ಯದಲ್ಲಿರುವ ವರ್ಗ ಪ್ರಥಮಾಕ್ಷರಗಳೊಡನೆ **(ಕ್, ಚ್, ಟ್, ತ್, ಪ್)** ಉತ್ತರ ಪದದಲ್ಲಿರುವ ಸ್ವರಾಕ್ಷರಗಳು / ವ್ಯಂಜನಾಕ್ಷರಗಳು ಸೇರಿ ಸಂಧಿಯಾದಾಗ ಪೂರ್ವ ಪದದ ಅಂತ್ಯ ದಲ್ಲಿರುವ ವರ್ಗ ಪ್ರಥಮಾಕ್ಷರಗಳಿಗೆ **(ಕ್, ಚ್, ಟ್, ತ್, ಪ್)** ಕ್ರಮವಾಗಿ ವರ್ಗ ತೃತೀಯಾಕ್ಷರಗಳು **(ಗ್, ಜ್, ಡ್, ದ್, ಬ್ )** ಆದೇಶವಾಗಿ ಬಂದರೆ ಅದನ್ನು **'ಜಶ್ತ್ವ ಸಂಧಿ'** ಎನ್ನುವರು. **(ಜಶ್** = ಜ ಬ ಗ ಡ ದ ಶ್)

ಉದಾಹರಣೆ :

| | | | |
|---|---|---|---|
| ವಾಕ್ | + ದೇವಿ | = ವಾಗ್ದೇವಿ | ( ಕ್ ಸ್ಥಾನದಲ್ಲಿ ಗ್ ಆದೇಶ ) |
| ದಿಕ್ | + ಅಂತ | = ದಿಗಂತ | ( ಕ್ ಸ್ಥಾನದಲ್ಲಿ ಗ್ ಆದೇಶ ) |
| ಅಚ್ | + ಅಂತ | = ಅಜಂತ | ( ಚ್ ಸ್ಥಾನದಲ್ಲಿ ಜ್ ಆದೇಶ ) |
| ಷಟ್ | + ಆನನ | = ಷಡಾನನ | ( ಟ್ ಸ್ಥಾನದಲ್ಲಿ ಡ್ ಆದೇಶ ) |
| ಚಿತ್ | + ಆನಂದ | = ಚಿದಾನಂದ | ( ತ್ ಸ್ಥಾನದಲ್ಲಿ ದ್ ಆದೇಶ ) |
| ಅಪ್ | + ಜ | = ಅಬ್ಜ | ( ಪ್ ಸ್ಥಾನದಲ್ಲಿ ಬ್ ಆದೇಶ ) |
| ಅಪ್ | + ಧೀ | = ಅಬ್ಧೀ | ( ಪ್ ಸ್ಥಾನದಲ್ಲಿ ಬ್ ಆದೇಶ ) |

➢ **ಶ್ಚುತ್ವ ಸಂದಿ :** ಪೂರ್ವ ಪದದ ಅಂತ್ಯದಲ್ಲಿರುವ **ಸ ಕಾರ / ತ ವರ್ಗ** ಅಕ್ಷರಗಳೊಡನೆ ಉತ್ತರ ಪದದ ಆದಿಯಲ್ಲಿರುವ **ಶ ಕಾರ / ಚ ವರ್ಗ** ಅಕ್ಷರಗಳು ಸೇರಿ ಸಂಧಿಯಾದಾಗ ಪೂರ್ವ ಪದದ ಅಂತ್ಯದಲ್ಲಿರುವ **ಸ ಕಾರ** / **ತ** ವರ್ಗಕ್ಕೆ ಕ್ರಮವಾಗಿ **ಶ ಕಾರ / ಚ ವರ್ಗ** ಆದೇಶವಾಗಿ ಬಂದರೆ ಅದನ್ನು **'ಶ್ಚುತ್ವ ಸಂಧಿ'** ಎನ್ನವರು.

(ಶ್+ ಚು = ಶ್ಚು, ಚು = ಚ ವರ್ಗ)

**ಉದಾಹರಣೆ :**

| | | | |
|---|---|---|---|
| ಪಯಸ್ + ಶಯನ | = | ಪಯಶ್ಶಯನ | (ಸ್ ಸ್ಥಾನದಲ್ಲಿ ಶ್ ಆದೇಶ) |
| ಮನಸ್ + ಶಾಂತಿ | = | ಮನಶ್ಶಾಂತಿ | (ಸ್ ಸ್ಥಾನದಲ್ಲಿ ಶ್ ಆದೇಶ) |
| ಮನಸ್ + ಚಂಚಲ | = | ಮನಶ್ಚಂಚಲ | (ಸ್ ಸ್ಥಾನದಲ್ಲಿ ಶ್ ಆದೇಶ) |
| ಸತ್ + ಚಿತ್ರ | = | ಸಚ್ಚಿತ್ರ | (ತ್ ಸ್ಥಾನದಲ್ಲಿ ಚ್ ಆದೇಶ) |
| ಶರತ್ + ಚಂದ್ರ | = | ಶರಚ್ಚಂದ್ರ | (ತ್ ಸ್ಥಾನದಲ್ಲಿ ಚ್ ಆದೇಶ) |
| ಜಗತ್ + ಜ್ಯೋತಿ | = | ಜಗಜ್ಜ್ಯೋತಿ | (ತ್ ಸ್ಥಾನದಲ್ಲಿ ಜ್ ಆದೇಶ) |
| ತದ್ + ಜಾತಿ | = | ತಜ್ಜಾತಿ | (ದ್ ಸ್ಥಾನದಲ್ಲಿ ಜ್ ಆದೇಶ) |
| ಬೃಹತ್ + ಛತ್ರ | = | ಬೃಹಚ್ಛತ್ರ | (ತ್ ಸ್ಥಾನದಲ್ಲಿ ಚ್ ಆದೇಶ) |

➢ **ಅನುನಾಸಿಕ ಸಂಧಿ :** ಪೂರ್ವ ಪದದ ಅಂತ್ಯದಲ್ಲಿರುವ ವರ್ಗ ಪ್ರಥಮಾಕ್ಷರಗಳೊಡನೆ **(ಕ್, ಚ್, ಟ್, ತ್, ಪ್)** ಉತ್ತರ ಪದದ ಆದಿಯಲ್ಲಿರುವ ಅನುನಾಸಿಕಾಕ್ಷರಗಳು ಸೇರಿ ಸಂಧಿಯಾದಾಗ ಪೂರ್ವಪದದ ಅಂತ್ಯದಲ್ಲಿರುವ ವರ್ಗ ಪ್ರಥಮಾಕ್ಷರಗಳಿಗೆ **(ಕ್, ಚ್, ಟ್, ತ್, ಪ್)** ಕ್ರಮವಾಗಿ ಅದೇ ವರ್ಗದ ಅನುನಾಸಿಕಾಕ್ಷರಗಳು **(ಙ್, ಞ್, ಣ್, ನ್, ಮ್)** ಅದೇಶವಾಗಿ ಬಂದರೆ ಅದನ್ನು **'ಅನುನಾಸಿಕ ಸಂಧಿ'** ಎನ್ನುವರು.

**ಉದಾಹರಣೆ :**

| | | | |
|---|---|---|---|
| ವಾಕ್ + ಮಯ | = | ವಾಙ್ಮಯ | (ಕ್ ಸ್ಥಾನದಲ್ಲಿ ಙ್ ಆದೇಶ) |
| ದಿಕ್ + ಮೂಡ | = | ದಿಙ್ಮೂಡ | (ಕ್ ಸ್ಥಾನದಲ್ಲಿ ಙ್ ಆದೇಶ) |
| ಷಟ್ + ಮಾಸ | = | ಷಣ್ಮಾಸ | (ಟ್ ಸ್ಥಾನದಲ್ಲಿ ಣ್ ಆದೇಶ) |
| ಷಟ್ + ಮುಖ | = | ಷಣ್ಮುಖ | (ಟ್ ಸ್ಥಾನದಲ್ಲಿ ಣ್ ಆದೇಶ) |
| ಉತ್ + ಮಾದ | = | ಉನ್ಮಾದ | (ತ್ ಸ್ಥಾನದಲ್ಲಿ ನ್ ಆದೇಶ) |
| ತತ್ + ಮಯ | = | ತನ್ಮಯ | (ತ್ ಸ್ಥಾನದಲ್ಲಿ ನ್ ಆದೇಶ) |
| ಚಿತ್ + ಮಯ | = | ಚಿನ್ಮಯ | (ತ್ ಸ್ಥಾನದಲ್ಲಿ ನ್ ಆದೇಶ) |
| ಸತ್ + ಮಾನ | = | ಸನ್ಮಾನ | (ತ್ ಸ್ಥಾನದಲ್ಲಿ ನ್ ಆದೇಶ) |
| ಅಪ್ + ಮಯ | = | ಅಮ್ಮಯ | (ಪ್ ಸ್ಥಾನದಲ್ಲಿ ಮ್ ಆದೇಶ) |

➢ ಪೂರ್ವಪದದ ಅಂತ್ಯದ 'ಚ' ಕಾರಕ್ಕೆ 'ಞ' ಕಾರ ಆದೇಶವಾಗಿ ಬರುವ ಉದಾಹರಣೆಗಳು ಪ್ರಸಿದ್ಧವಾಗಿಲ್ಲ.

➢ **ವಿಸರ್ಗ ಸಂಧಿ :** 'ಅ' ಕಾರದ ಮುಂದಿನ ವಿಸರ್ಗಕ್ಕೆ 'ಅ' ಕಾರವಾಗಲಿ, ಮೃದು ವ್ಯಂಜನವಾಗಲಿ ಪರವಾದರೆ ವಿಸರ್ಗದ ಸ್ಥಳದಲ್ಲಿ 'ಉ' ಕಾರ ಆದೇಶವಾಗುತ್ತದೆ. ಬಳಿಕ 'ಉ' ಕಾರವು ತನ್ನ ಹಿಂದಿನ 'ಅ' ಕಾರದೊಡನೆ ಸೇರಿ ಗುಣ ಸಂಧಿಯಾಗಿ 'ಓ' ಕಾರವಾಗುತ್ತದೆ. ಈ 'ಓ' ಕಾರದ ಮುಂದೆ 'ಅ' ಕಾರವಿದ್ದರೆ 'ಅ' ಕಾರ ಲೋಪವಾಗುತ್ತದೆ. ಇದನ್ನು **'ವಿಸರ್ಗ ಸಂಧಿ'**_ಎನ್ನುವರು.

ಉದಾಹರಣೆ :

ಮನಃ + ಅಭಿಪ್ರಾಯ

> ಮನ + ಉ + ಅಭಿಪ್ರಾಯ (ವಿಸರ್ಗಕ್ಕೆ 'ಉ' ಕಾರದೇಶ)

> ಮನೋ + ಅಭಿಪ್ರಾಯ (ಉ ಕಾರವು ಹಿಂದಿನ ಅಕಾರದೊಡನೆ ಸೇರಿ 'ಓ' ಕಾರ)

> ಮನೋಭಿಪ್ರಾಯ (ಪೂರ್ವಾಂತ್ಯ 'ಓ' ಕಾರದ ಮುಂದಿನ 'ಅ' ಕಾರ ಲೋಪ)

| | | | | | |
|---|---|---|---|---|---|
| ಮನಃ | + ರಂಜನ | = ಮನೋರಂಜನ | ತಪಃ | + ನಿಧಿ | = ತಪೋನಿಧಿ |
| ಮನಃ | + ಅಭಿಲಾಷ | = ಮನೋಭಿಲಾಷ | ಮನಃ | + ವಿಜ್ಞಾನ | = ಮನೋವಿಜ್ಞಾನ |

- ಅ, ಆ, ಕಾರಗಳ ಹೊರತು ಉಳಿದ ಸ್ವರಗಳ ಮುಂದೆ ಇರುವ ವಿಸರ್ಗಕ್ಕೆ ಸ್ವರವಾಗಲಿ, ವ್ಯಂಜನವಾಗಲಿ ಪರವಾದರೆ **'ರೇಫ'** ಆದೇಶವಾದರೆ ಅದನ್ನು **'ವಿಸರ್ಗ ಸಂಧಿ'** ಎನ್ನುವರು.

ಉದಾಹರಣೆ :

| | | |
|---|---|---|
| ಜ್ಯೋತಿಃ | + ವರ್ಷ | = ಜ್ಯೋತಿರ್ವರ್ಷ |
| ಹವಿಃ | + ಅಂಶ | = ಹವಿರಂಶ |

- **ಷ್ಟುತ್ವ ಸಂಧಿ :** 'ಸ' ಕಾರ, ತ ವರ್ಗ ವ್ಯಂಜನಗಳ ಮುಂದೆ 'ಷ' ಕಾರ, 'ಟ' ವರ್ಗ ವ್ಯಂಜನಗಳು ಬಂದರೆ ಕ್ರಮವಾಗಿ 'ಷ' ಕಾರ, 'ಟ' ವರ್ಗ ವ್ಯಂಜನಗಳು ಆದೇಶವಾದರೆ ಅದನ್ನು **'ಷ್ಟುತ್ವ ಸಂಧಿ'** ಎನ್ನುವರು.

ಉದಾಹರಣೆ :

| | | | | | |
|---|---|---|---|---|---|
| ತಪಸ್ | + ಷಡ್ಭಾಗ | = ತಪಷ್ಷಡ್ಭಾಗ | ಧನುಸ್ | + ಟಂಕಾರ | = ಧನುಷ್ಟಂಕಾರ |
| ತತ್ | + ಟಿಟ್ಟಿಭ | = ತಟ್ಟಿಟ್ಟಿಭ | ಉತ್ | + ಡಯನ | = ಉಡ್ಡಯನ |

- **ಛತ್ವ ಸಂಧಿ :** ಪೂರ್ವಪದಾಂತ್ಯದಲ್ಲಿ ಅನುನಾಸಿಕವಲ್ಲದ ವರ್ಗೀಯ ವ್ಯಂಜನಕ್ಕೆ ಪರವಾದ 'ಶ' ಕಾರಕ್ಕೆ 'ಛ' ಕಾರ ಆದೇಶವಾದರೆ ಅದನ್ನು **'ಛತ್ವ ಸಂಧಿ'** ಎನ್ನುವರು.

ಉದಾಹರಣೆ :

| | | | | |
|---|---|---|---|---|
| ವಿದ್ಯುತ್ | + ಶಕ್ತಿ | = ವಿದ್ಯುಚ್ | + ಶಕ್ತಿ | = ವಿದ್ಯುಚ್ಛಕ್ತಿ |
| ಚಿತ್ | + ಶಕ್ತಿ | = ಚಿಚ್ | + ಶಕ್ತಿ | = ಚಿಚ್ಛಕ್ತಿ |
| ಉತ್ | + ಶ್ವಾಸ | = ಉಚ್ | + ಶ್ವಾಸ | = ಉಚ್ಛ್ವಾಸ |

- **'ಲ' ಕಾರ ದ್ವಿತ್ವ ಸಂಧಿ :** 'ತ' ಕಾರದ ಮುಂದೆ 'ಲ' ಕಾರ ಬಂದರೆ 'ತ' ಕಾರದ ಸ್ಥಾನದಲ್ಲಿ 'ಲ' ಕಾರವು ಬಂದರೆ ಅದನ್ನು 'ಲ' ಕಾರ **'ದ್ವಿತ್ವ ಸಂಧಿ'** ಎನ್ನುವರು.

ಉದಾಹರಣೆ :

| | | | | | |
|---|---|---|---|---|---|
| ಸತ್ | + ಲಕ್ಷಣ | = ಸಲ್ಲಕ್ಷಣ | ಸತ್ | + ಲೇಖನ | = ಸಲ್ಲೇಖನ |
| ತತ್ | + ಲೀನ | = ತಲ್ಲೀನ | ಸತ್ | + ಲೀಲೆ | = ಸಲ್ಲೀಲೆ |

**ಈ ಮಾದರಿಯ ಪ್ರಶ್ನೆಗಳಿಗೆ ಉತ್ತರ ಬರೆದು ಅಭ್ಯಾಸ ಮಾಡಿರಿ.**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಬರೆಯಿರಿ.**

1. 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆ.
   (ಎ) ವೃದ್ಧಿ (ಬಿ) ಜಶ್ತ್ವ
   (ಸಿ) ಆದೇಶ (ಡಿ) ಆಗಮ
2. 'ಹೊಸಗಾಲ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ.
   (ಎ) ಲೋಪ ಸಂಧಿ (ಬಿ) ಆದೇಶ ಸಂಧಿ
   (ಸಿ) ಆಗಮ ಸಂಧಿ (ಡಿ) ಗುಣ ಸಂಧಿ
3. 'ಮಹಾತ್ಮ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:
   (ಎ) ಗುಣಸಂಧಿ (ಬಿ) ಲೋಪಸಂಧಿ
   (ಸಿ) ಸವರ್ಣದೀರ್ಘಸಂಧಿ (ಡಿ) ಅನುನಾಸಿಕ
4. 'ಧೃತಿಗೆಟ್ಟು' ಇದು ಈ ಸಂಧಿಗೆ ಉದಾಹರಣೆ:
   (ಎ) ಜಶ್ತ್ವ (ಬಿ) ಆದೇಶ
   (ಸಿ) ಗುಣ (ಡಿ) ಆಗಮ
5. 'ಜಗಜ್ಜ್ಯೋತಿ' ಪದದಲ್ಲಿ ಏರ್ಪಟ್ಟಿರುವ ಸಂಧಿ:
   (ಎ) ಯಣ್ (ಬಿ) ಅನುನಾಸಿಕ
   (ಸಿ) ಶ್ಚುತ್ವ (ಡಿ) ವೃದ್ಧಿ
6. ಆದೇಶ ಸಂಧಿಗೆ ಉದಾಹರಣೆ:
   (ಎ) ಕೈವಿಡಿದು (ಬಿ) ಕೈಯನ್ನು
   (ಸಿ) ಊರೂರು (ಡಿ) ಸದಾನಂದ
7. ಜಶ್ತ್ವಸಂಧಿಗೆ ಉದಾಹರಣೆಯಿದು;
   (ಎ) ಪಯಶ್ಶಯನ (ಬಿ) ಷಡಾನನ
   (ಸಿ) ಸನ್ಮಾನ (ಡಿ) ವನೌಷಧ
8. ಕೆಳಗಿನ ಪದಗಳಲ್ಲಿ ಈ ಪದವು ಆದೇಶ ಸಂಧಿಗೆ ಉದಾಹರಣೆ.
   (ಎ) ಮಳೆಯಿಂದ (ಬಿ) ಬಂದಲ್ಲದೆ
   (ಸಿ) ಕಂಬನಿ (ಡಿ) ಮರವನ್ನು
9. 'ಊರೂರು' – ಪದವು ಈ ಸಂಧಿಗೆ ಉದಾಹರಣೆಯಾಗಿದೆ:
   (ಎ) ಲೋಪ (ಬಿ) ಆಗಮ
   (ಸಿ) ಆದೇಶ (ಡಿ) ಗುಣ
10. 'ಮೈದೋರು' ಈ ಪದವು ಈ ಸಂಧಿಗೆ ಉದಾಹರಣೆಯಾಗಿದೆ:
   (ಎ) ಲೋಪ ಸಂಧಿ (ಬಿ) ಆಗಮ ಸಂಧಿ
   (ಸಿ) ಜಶ್ತ್ವ ಸಂಧಿ (ಡಿ) ಆದೇಶ ಸಂಧಿ
11. 'ಜಾತ್ಯತೀತ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ :
   (ಎ) ಗುಣಸಂಧಿ (ಬಿ) ಅನುನಾಸಿಕ ಸಂಧಿ
   (ಸಿ) ಯಣ್‌ಸಂಧಿ (ಡಿ) ವೃದ್ಧಿ ಸಂಧಿ
12. ಜಶ್ತ್ವಸಂಧಿಗೆ ಉದಾಹರಣೆ ಇದು;
   (ಎ) ಅಜಂತ (ಬಿ) ಶರಚ್ಚಂದ್ರ
   (ಸಿ) ತನ್ಮಯ (ಡಿ) ಅಷ್ಟೈಶ್ವರ್ಯ

13. 'ಮಾತಂತು' ಪದವು ಈ ಸಂಧಿಗೆ ಉದಾಹರಣೆಯಾಗಿದೆ;

(ಎ) ಆಗಮಸಂಧಿ (ಬಿ) ಆದೇಶಸಂಧಿ

(ಸಿ) ಲೋಪಸಂಧಿ (ಡಿ) ಗುಣಸಂಧಿ

14. 'ಬೆಂಬತ್ತು' ಪದವು ಈ ಸಂಧಿಗೆ ಉದಾಹರಣೆಯಾಗಿದೆ;

(ಎ) ಆಗಮ ಸಂಧಿ (ಬಿ) ಆದೇಶ ಸಂಧಿ

(ಸಿ) ಲೋಪ ಸಂಧಿ (ಡಿ) ಜಶ್ತ್ವ ಸಂಧಿ

15. 'ಯಣ್ ಸಂಧಿಗೆ' ಉದಾಹರಣೆಯಾದ ಪದ :

(ಎ) ಅಷ್ಟೈಶ್ವರ್ಯ (ಬಿ) ಬೃಹಚ್ಛತ್ರ

(ಸಿ) ಜ್ಞಾನೇಶ್ವರ (ಡಿ) ಕೋಟ್ಯಧೀಶ್ವರ

16. 'ಸನ್ಮಾನ' ಪದದಲ್ಲಿ ಏರ್ಪಟ್ಟಿರುವ ಸಂಧಿ;

(ಎ) ಯಣ್ (ಬಿ) ಗುಣ

(ಸಿ) ಅನುನಾಸಿಕ (ಡಿ) ವೃದ್ಧಿ

17. 'ಇರುಳಳಿದು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

(ಎ) ಲೋಪ ಸಂಧಿ (ಬಿ) ಆಗಮ ಸಂಧಿ

(ಸಿ) ಆದೇಶ ಸಂಧಿ (ಡಿ) ಯಣ್ ಸಂಧಿ

18. 'ವಧೂಪೇತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ವೃದ್ಧಿ ಸಂಧಿ (ಡಿ) ಲೋಪ ಸಂಧಿ

19. ಗುಣಸಂಧಿಗೆ ಉದಾಹರಣೆಯಾಗಿರುವ ಪದ;

(ಎ) ಗಿರೀಶ (ಬಿ) ಮಹರ್ಷಿ

(ಸಿ) ಮೈದೋರು (ಡಿ) ಷಣ್ಮುಖ

20. 'ಸಂಗ್ರಹಾಲಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ವೃದ್ಧಿ ಸಂಧಿ (ಡಿ) ಅನುನಾಸಿಕ ಸಂಧಿ

## ಕ್ರಿಯಾಪದ

- **ಕ್ರಿಯಾ ಪದ :** ವಾಕ್ಯದಲ್ಲಿಯ ಕ್ರಿಯೆಯ ಅರ್ಥವನ್ನು ಪೂರ್ಣಗೊಳಿಸುವ ಅಥವಾ ಕ್ರಿಯೆಯು ಪೂರ್ಣವಾಗಿರುವುದನ್ನು ತಿಳಿಸುವ ಪದಗಳೇ **ಕ್ರಿಯಾ ಪದಗಳು.**

  **ಉದಾಹರಣೆ :** * ಅವಳು **ಬರೆದಳು.** * ನಾನು **ಹಾಡುತ್ತೇನೆ.**

  * ಅವಳು **ಓಡುತ್ತಾಳೆ.** * ನೀನು **ತಿಂದೆ.**

  ನಿದರ್ಶನ ವಾಕ್ಯದಲ್ಲಿ ಗೆರೆ ಹಾಕಿದ ಪದಗಳು **ಕ್ರಿಯೆಯನ್ನು ಸೂಚಿಸುತ್ತವೆ.**

- **ಕ್ರಿಯಾ ಪದ** = ಧಾತು + ಕಾಲಸೂಚಕ ಪ್ರತ್ಯಯ + ಆಖ್ಯಾತ ಪ್ರತ್ಯಯ

- **ಧಾತು (ಕ್ರಿಯಾ ಪ್ರಕೃತಿ) : ಕ್ರಿಯಾ ಪದದ ಮೂಲ ರೂಪವೇ** ಧಾತು. (ಕ್ರಿಯಾ ಪ್ರಕೃತಿ).

  ಉದಾಹರಣೆ : ಬರೆ, ಓಡು, ತಿನ್ನು, ಇತ್ಯಾದಿಗಳು

- ಧಾತುಗಳಲ್ಲಿ **ಎರಡು** ವಿಧಗಳಿವೆ. 1. ಸಹಜ ದಾತು 2. ಸಾಧಿತ ಧಾತು

- **ಸಹಜ ಧಾತು :** ಭಾಷೆಯಲ್ಲಿ ಸಹಜವಾಗಿರುವ ಮೂಲ ಧಾತುಗಳನ್ನು **'ಸಹಜ ಧಾತು'** ಎನ್ನುವರು.

  **ಉದಾಹರಣೆ :** ಬರೆ, ಓಡು, ತಿನ್ನು, ಇತ್ಯಾದಿಗಳು

- **ಸಾಧಿತ ಧಾತು :** ಧಾತುಗಳಿಗೆ ಬೇರೊಂದು ನಾಮಪ್ರಕೃತಿಯನ್ನೋ, ಪ್ರತ್ಯಯವನ್ನೋ ಸೇರಿಸಿ ಹೊಸ ಧಾತುಗಳನ್ನೂ ರೂಪಿಸಿಕೊಳ್ಳುವುದು ಪದಸೃಷ್ಟಿಯ ಒಂದು ಬಗೆ. ಹೀಗೆ ರೂಪಿಸಿಕೊಂಡ ಧಾತುವಿಗೆ **'ಸಾಧಿತ ಧಾತು'** ಎನ್ನುವರು.

  1. ಧಾತುವಿನ ಹಿಂದೆ ನಾಮಪ್ರಕೃತಿಯನ್ನು ಸೇರಿಸಿ ಹೊಸ ಧಾತುವನ್ನು ಸೃಷ್ಟಿಸಬಹುದು. ಇಂತಹ ಸಾಧಿತ ಧಾತುಗಳು ಬಹುತೇಕ ನುಡಿಗಟ್ಟುಗಳಾಗಿ ಬಳಕೆಯಲ್ಲಿವೆ.

  ಉದಾಹರಣೆ :

| | | | | | |
|---|---|---|---|---|---|
| ಬಾಯಿ + ಬಿಡು | = ಬಾಯಿಬಿಡು | | ಕಣ್ಣು + ಬಿಡು | = ಕಣ್ಣುಬಿಡು | |
| ಕಾಲು + ಎಳೆ | = ಕಾಲೆಳೆ | | ಕಣ್ಕಣ್ಣು + ಬಿಡು | = ಕಣ್ಕಣ್ಣುಬಿಡು | |
| ಹಲ್ಲು + ಕಿಸಿ | = ಹಲ್ಲುಕಿಸಿ | | ಕಣ್ಣು + ಮುಚ್ಚು | = ಕಣ್ಣುಮುಚ್ಚು | |
| ಗೋಳು + ಆಡು | = ಗೋಳಾಡು | | ಕಣ್ಣು + ತೆರೆ | = ಕಣ್ತೆರೆ | |

  ಇನ್ನೂ **ಕಣ್ಣುಬಿಡ್ತಾ** ಇರೋ ಮಗು, ಅದಕ್ಕೇನು ಗೊತ್ತಾಗುತ್ತೆ?

  ಪರೀಕ್ಷೆಯಲ್ಲಿ ಏನು ಉತ್ತರಿಸಬೇಕೋ ಹೊಳೆಯದೆ ರಾಜು **ಕಣ್ಕಣ್ಣು ಬಿಟ್ಟನು.**

  2. ಕೃದಂತ ರೂಪಗಳಿಗೆ ಧಾತು ಸೇರಿಸಿ ಹೊಸ ಧಾತುವನ್ನು ಸೃಷ್ಟಿಸಬಹುದು.

  ಉದಾಹರಣೆ :

| | | | |
|---|---|---|---|
| ಎದ್ದು + ಏಳು | = ಎದ್ದೇಳು | ಬಿಟ್ಟು + ಬಿಡು | = ಬಿಟ್ಟುಬಿಡು |

  3. ಧಾತುವಿಗೆ ಇನ್ನೊಂದು ಧಾತು ಸೇರಿಸಿ ಸಂಯುಕ್ತ ಧಾತುವನ್ನು ಸೃಷ್ಟಿಸಬಹುದು.

  ಉದಾಹರಣೆ :

| | | | |
|---|---|---|---|
| ತೇಲು + ಆಡು | = ತೇಲಾಡು | ಕೂಗು + ಆಡು | = ಕೂಗಾಡು |
| ಓಡು + ಆಡು | = ಓಡಾಡು | | |

  ನಾಮಪ್ರಕೃತಿಗೆ 'ಇಸು' ಪ್ರತ್ಯಯ ಸೇರಿಸಿ ಹೊಸ ಧಾತುಗಳನ್ನು ಸೃಷ್ಟಿಸಬಹುದು.

  ಉದಾಹರಣೆ :

| | | | |
|---|---|---|---|
| ಅಬ್ಬರ + ಇಸು | = ಅಬ್ಬರಿಸು | ಗೌರವ + ಇಸು | = ಗೌರವಿಸು |
| ಪ್ರಾರ್ಥನೆ + ಇಸು | = ಪ್ರಾರ್ಥಿಸು | ಮನ್ನಣೆ + ಇಸು | = ಮನ್ನಿಸು |
| ಚಿಂತೆ + ಇಸು | = ಚಿಂತಿಸು | ನಿಶ್ಚಯ + ಇಸು | = ನಿಶ್ಚಯಿಸು |

4. ಮೂಲದಾತುವಿಗೆ ಪ್ರೇರಣಾರ್ಥದಲ್ಲಿ 'ಇಸು' ಪ್ರತ್ಯಯವನ್ನು ಸೇರಿಸುವುದರಿಂದ ಹೊಸ ಧಾತು ಸೃಷ್ಟಿಸಬಹುದು. ( ಪ್ರೇರಣ ಎಂದರೆ ಇನ್ನೊಬ್ಬರಿಂದ ಕೆಲಸ ಮಾಡಿಸುವುದು ಎಂದರ್ಥ)

**ಉದಾಹರಣೆ :**

| | | | |
|---|---|---|---|
| ಓಡು + ಇಸು | = ಓಡಿಸು | ತಿನ್ನು + ಇಸು | = ತಿನ್ನಿಸು |
| ಮಾಡು + ಇಸು | = ಮಾಡಿಸು | ಮಲಗು + ಇಸು | = ಮಲಗಿಸು |
| ನಗು + ಇಸು | = ನಗಿಸು | ಬರೆ + ಇಸು | = ಬರೆಯಿಸು |

ತಾಯಿ ಮಗುವನ್ನು **ಮಲಗಿಸುತ್ತಾಳೆ.**

ವಿದೂಷಕನು ಎಲ್ಲರನ್ನೂ **ನಗಿಸುತ್ತಾನೆ.**

- **ಧಾತುಗಳ ಎರಡು ರೂಪಗಳು :** 1. ಅಕರ್ಮಕ ಧಾತು 2. ಸಕರ್ಮಕ ಧಾತು
- **ಸಕರ್ಮಕ ಧಾತು :** ಕರ್ಮಪದದ ಆಕಾಂಕ್ಷೆಯುಳ್ಳ ಧಾತುಗಳಿಗೆ **'ಸಕರ್ಮಕ ಧಾತು'** ಎನ್ನುವರು. ಕೆಲವು ಧಾತುಗಳು ಅರ್ಥಪೂರ್ತಿಗೆ ಕರ್ಮಪದವನ್ನು ಅಪೇಕ್ಷಿಸುತ್ತವೆ ಅಂತಹ ಧಾತುಗಳಿಗೆ **'ಸಕರ್ಮಕ ಧಾತು'** ಎನ್ನುವರು.
  ಉದಾಹರಣೆ : ಕೊಡು, ಬಿಡು, ಉಣ್ಣು, ಉಜ್ಜು, ತಿದ್ದು, ಮುಚ್ಚು ಇತ್ಯಾದಿ.
- **ಅಕರ್ಮಕ ಧಾತು :** ಕರ್ಮಪದದ ಆಕಾಂಕ್ಷೆ ಇರದ ಧಾತುಗಳಿಗೆ **'ಅಕರ್ಮಕ ಧಾತು'** ಎನ್ನುವರು. ಕೆಲವು ಧಾತುಗಳು ಅರ್ಥಪೂರ್ತಿಗೆ ಕರ್ಮಪದವನ್ನು ಅಪೇಕ್ಷಿಸುವುದಿಲ್ಲ ಅಂತಹ ಧಾತುಗಳಿಗ **'ಅಕರ್ಮಕ ಧಾತು'** ಎನ್ನುವರು.
  ಉದಾಹರಣೆ : ಮಲಗು, ಓಡು, ಬದುಕು, ಹೋಗು, ನಾಚು ಇತ್ಯಾದಿ.
- ಅಕರ್ಮಕ ಧಾತುಗಳೂ ಸಹ ಪ್ರೇರಣಾರ್ಥದಲ್ಲಿ 'ಇಸು' ಪ್ರತ್ಯಯ ಬಂದಾಗ **'ಸಕರ್ಮಕ ಧಾತು'**ಗಳಾಗುತ್ತವೆ.
  ಉದಾಹರಣೆ :
  ಬೆಳೆ + ಇಸು = ಬೆಳೆಯಿಸು ಮಲಗು + ಇಸು = ಮಲಗಿಸು
- **ಕರ್ತರಿ ಪ್ರಯೋಗ :** ಧಾತುಗಳಿಗೆ ಲಿಂಗವಾಚಕ ಮತ್ತು ವಚನ ವಾಚಕಗಳು ಸೇರಿ ಒಂದು ಪೂರ್ಣವಾಕ್ಯವಾದಾಗ ಅದು **'ಕರ್ತರಿ ಪ್ರಯೋಗದ'** ವಾಕ್ಯವೆನಿಸುತ್ತದೆ.
  ಉದಾಹರಣೆ : ಭೀಮನು ಅನ್ನವನ್ನು ಉಂಡನು.
- **ಕರ್ಮಣಿ ಪ್ರಯೋಗ :** ಸಕರ್ಮಕ ಧಾತುಗಳ ಮೇಲೆ **'ಅಲ್ಪಡು'** ಪ್ರತ್ಯಯ ಸೇರಿ ಕಾಲ ಸೂಚಕ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿದಾಗ **'ಕರ್ಮಣಿ ಪ್ರಯೋಗದ'** ವಾಕ್ಯವೆನಿಸುತ್ತದೆ.
  ಉದಾಹರಣೆ : ಭೀಮನಿಂದ ಅನ್ನವು ಉಣ್ಣಲ್ಪಟ್ಟಿತು.
- **ಕಾಲ ಸೂಚಕ ಪ್ರತ್ಯಯ :** ಕ್ರಿಯೆಯು ನಡೆದ ಕಾಲವನ್ನು ಸೂಚಿಸುವುದಕ್ಕಾಗಿ ಧಾತು ಮತ್ತು ಆಖ್ಯಾತ ಪ್ರತ್ಯಯಗಳ ನಡುವೆ ಬರುವ ಪ್ರತ್ಯಯವನ್ನು **'ಕಾಲ ಸೂಚಕ ಪ್ರತ್ಯಯಗಳು'** ಎನ್ನುವರು.
  1. ಕ್ರಿಯೆಯು ನಡೆದು ಹೋದ (ಹಿಂದಿನ) ಕಾಲವನ್ನು **'ಭೂತಕಾಲ'** ಎನ್ನುವರು.
  ಭೂತ ಕಾಲ ಸೂಚಕ ಪ್ರತ್ಯಯ **'ದ'**
  2. ಕ್ರಿಯೆಯು ಸದ್ಯ ನಡೆಯುತ್ತಿರುವ ಕಾಲವನ್ನು **'ವರ್ತಮಾನಕಾಲ'** ಎನ್ನುವರು.
  ವರ್ತಮಾನ ಕಾಲ ಸೂಚಕ ಪ್ರತ್ಯಯ **'ಉತ್ತ'**
  2. ಕ್ರಿಯೆಯು ಮುಂದೆ ನಡೆಯುವ (ಮುಂದಿನ) ಕಾಲವನ್ನು **'ಭವಿಷ್ಯತ್ ಕಾಲ'** ಎನ್ನುವರು.
  ಭವಿಷ್ಯತ್ ಕಾಲ ಸೂಚಕ ಪ್ರತ್ಯಯ **'ವ'**
- **ಆಖ್ಯಾತ ಪ್ರತ್ಯಯ :** ಕರ್ತೃವಿನ ಲಿಂಗ, ಪುರುಷ ಹಾಗೂ ವಚನಗಳನ್ನು ಸೂಚಿಸುವುದಕ್ಕಾಗಿ ಧಾತುವಿಗೆ ಸೇರುವ ಪ್ರತ್ಯಯಗಳನ್ನು **'ಆಖ್ಯಾತ ಪ್ರತ್ಯಯಗಳು'** ಎನ್ನುವರು.

4. ಆಖ್ಯಾತ ಪ್ರತ್ಯಯಗಳಾವುವು?

| ಕಾಲ ರೂಪ ಆಖ್ಯಾತ ಪ್ರತ್ಯಯಗಳು | | | | |
|---|---|---|---|---|
| ಪುರುಷ | ಸರ್ವ ನಾಮ | ಭೂತ ಕಾಲ | ವರ್ತಮಾನ ಕಾಲ | ಭವಿಷ್ಯತ್ ಕಾಲ |
| ಉತ್ತಮ ಪುರುಷ<br>ಏಕ ವಚನ<br>ಬಹು ವಚನ | <br><br>ನಾನು<br>ನಾವು | <br><br>~ಎನು(ತಿಂದೆನು)<br>~ಎವು(ತಿಂದೆವು) | <br><br>~ಏನೆ(ತಿನ್ನುತ್ತೇನೆ)<br>~ಏವೆ (ತಿನ್ನುತ್ತೇವೆ) | <br><br>~ಎನು(ತಿನ್ನುವೆನು)<br>~ಎವು(ತಿನ್ನುವೆವು) |
| ಮಧ್ಯಮ ಪುರುಷ<br>ಏಕ ವಚನ<br>ಬಹು ವಚನ | <br><br>ನೀನು<br>ನೀವು | <br><br>~ಎ(ತಿಂದೆ)<br>~ಇರಿ(ತಿಂದಿರಿ) | <br><br>~ಈಯೆ(ತಿನ್ನುತ್ತೀಯೆ)<br>~ಈರಿ(ತಿನ್ನುತ್ತೀರಿ) | <br><br>~ಎ(ತಿನ್ನುವೆ)<br>~ಇರಿ(ತಿನ್ನುವಿರಿ) |
| ಪ್ರಥಮ ಪುರುಷ<br>ಏಕ ವಚನ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕ ಲಿಂಗ | <br><br>ಅವನು<br>ಅವಳು<br>ಅದು | <br><br>~ಅನು(ತಿಂದನು)<br>~ಅಳು(ತಿಂದಳು)<br>~ಇತು(ತಿಂದಿತು) | <br><br>~ಆನೆ(ತಿನ್ನುತ್ತಾನೆ)<br>~ಆಳೆ(ತಿನ್ನುತ್ತಾಳೆ)<br>~ಅದೆ(ತಿನ್ನುತ್ತದೆ) | <br><br>~ಅನು(ತಿನ್ನುವನು)<br>~ಅಳು(ತಿನ್ನುವಳು)<br>~ಉದು(ತಿನ್ನುವುದು) |
| ಬಹು ವಚನ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕ ಲಿಂಗ | <br>ಅವರು<br>ಅವರು<br>ಅವು | <br>~ಅರು(ತಿಂದರು)<br>~ಅರು(ತಿಂದರು)<br>~ಅವು(ತಿಂದವು) | <br>~ಆರೆ(ತಿನ್ನುತ್ತಾರೆ)<br>~ಆರೆ(ತಿನ್ನುತ್ತಾರೆ)<br>~ಅವೆ(ತಿನ್ನುತ್ತವೆ) | <br>~ಅರು(ತಿಂದರು)<br>~ಅರು(ತಿಂದರು)<br>~ಉವು(ತಿನ್ನುವುವು) |

## ಅರ್ಥರೂಪ ಕ್ರಿಯಾ ಪದಗಳು

- **ವಿಧ್ಯರ್ಥಕ ರೂಪ ಕ್ರಿಯಾಪದಗಳು :** ವಿಧಿ ಎಂದರೆ ಆಜ್ಞೆ, ಅಪ್ಪಣೆ, ವಿಜ್ಞಾಪನೆ, ಆಶೀರ್ವಾದ, ಹಾರೈಕೆ ಎಂದರ್ಥ. ಈ ಅರ್ಥಗಳನ್ನು ಹೇಳುವ ಕ್ರಿಯಾಪದಗಳನ್ನು 'ವಿಧ್ಯರ್ಥಕ ರೂಪ ಕ್ರಿಯಾಪದಗಳು ಎನ್ನುವರು. ಧಾತುಗಳಿಗೆ ವಿಧ್ಯರ್ಥ ಆಖ್ಯಾತ ಪ್ರತ್ಯಯಗಳು ಸೇರಿ **'ವಿಧ್ಯರ್ಥಕ ರೂಪ ಕ್ರಿಯಾಪದಗಳು'** ಸಿದ್ಧಿಸುತ್ತವೆ.
  **ವಿಧ್ಯರ್ಥಕ ರೂಪ : ಮಾಡಲಿ, ತಿನ್ನಲಿ, ಓದಲಿ.**
- **ಸಂಭಾವನಾರ್ಥಕ ರೂಪ ಕ್ರಿಯಾಪದಗಳು :** ಸಂಭಾವನೆ ಎಂದರೆ ಸಂಶಯ, ಊಹೆ ಅಥವಾ ತರ್ಕ ಎಂದರ್ಥ. ಈ ಅರ್ಥಗಳನ್ನು ಹೇಳುವ ಕ್ರಿಯಾಪದಗಳನ್ನು 'ಸಂಭಾವನಾರ್ಥಕ ರೂಪ ಕ್ರಿಯಾಪದಗಳು' ಎನ್ನುವರು. ಧಾತುಗಳಿಗೆ ಸಂಭಾವನಾರ್ಥಕ ಆಖ್ಯಾತ ಪ್ರತ್ಯಯಗಳು ಸೇರಿ **'ಸಂಭಾವನಾರ್ಥಕ ರೂಪ ಕ್ರಿಯಾಪದಗಳು'** ಸಿದ್ಧಿಸುತ್ತವೆ.
  **ಸಂಭಾವನಾರ್ಥಕ ರೂಪ : ಮಾಡಿಯಾನು, ತಿಂದಾಳು, ಓದಿಯಾರು.**

➢ **ನಿಷೇಧಾರ್ಥಕ ರೂಪ ಕ್ರಿಯಾಪದಗಳು :** ನಿಷೇಧ ಎಂದರೆ ಕ್ರಿಯೆಯು ನಡೆದಿಲ್ಲ ಅಥವಾ ನಡೆಯುವುದಿಲ್ಲ ಎಂದರ್ಥ. ಈ ಅರ್ಥಗಳನ್ನು ಹೇಳುವ ಕ್ರಿಯಾಪದಗಳನ್ನು 'ನಿಷೇಧಾರ್ಥಕ ರೂಪ ಕ್ರಿಯಾಪದಗಳು' ಎನ್ನುವರು. ಧಾತುಗಳಿಗೆ ನಿಷೇಧಾರ್ಥಕ ಆಖ್ಯಾತ ಪ್ರತ್ಯಯಗಳು ಸೇರಿ **'ನಿಷೇಧಾರ್ಥಕ ರೂಪ ಕ್ರಿಯಾಪದಗಳು'** ಸಿದ್ಧಿಸುತ್ತವೆ.

**ನಿಷೇಧಾರ್ಥಕ ರೂಪ : ಮಾಡನು, ತಿನ್ನಳು, ಓದರು.**

| ಅರ್ಥರೂಪ ಆಖ್ಯಾತ ಪ್ರತ್ಯಯಗಳು | | | | |
|---|---|---|---|---|
| **ಪುರುಷ** | **ಸರ್ವ ನಾಮ** | **ವಿಧ್ಯರ್ಥಕ** | **ಸಂಭಾವನಾರ್ಥಕ** | **ನಿಷೇಧಾರ್ಥಕ** |
| **ಉತ್ತಮ ಪುರುಷ** | | | | |
| ಏಕ ವಚನ | ನಾನು | ~ಉವೆ(ತಿನ್ನುವೆ) | ~ಏನು(ತಿಂದೇನು) | ~ಎನು(ತಿನ್ನೆನು) |
| ಬಹು ವಚನ | ನಾವು | ~ಓಣ(ತಿನ್ನೋಣ) | ~ಏವು(ತಿಂದೇವು) | ~ಎವು(ತಿನ್ನೆವು) |
| **ಮಧ್ಯಮ ಪುರುಷ** | | | | |
| ಏಕ ವಚನ | ನೀನು | ~ಧಾತು ರೂಪ(ತಿನ್ನು) | ~ಈಯೆ(ತಿಂದೀಯೆ) | ~ಎ(ತಿನ್ನೆ) |
| ಬಹು ವಚನ | ನೀವು | ~ಇರಿ(ತಿನ್ನಿರಿ) | ~ಈರಿ(ತಿಂದೀರಿ) | ~ಅರಿ(ತಿನ್ನರಿ) |
| **ಪ್ರಥಮ ಪುರುಷ** | | | | |
| ಏಕ ವಚನ | | | | |
| ಪುಲ್ಲಿಂಗ | ಅವನು | ~ಅಲಿ(ತಿನ್ನಲಿ) | ~ಆನು(ತಿಂದಾನು) | ~ಅನು(ತಿನ್ನನು) |
| ಸ್ತ್ರೀಲಿಂಗ | ಅವಳು | ~ಅಲಿ(ತಿನ್ನಲಿ) | ~ಆಳು(ತಿಂದಾಳು) | ~ಅಳು(ತಿನ್ನಳು) |
| ನಪುಂಸಕ ಲಿಂಗ | ಅದು | ~ಅಲಿ(ತಿನ್ನಲಿ) | ~ಈತು(ತಿಂದೀತು) | ~ಅದು(ತಿನ್ನದು) |
| ಬಹು ವಚನ | | | | |
| ಪುಲ್ಲಿಂಗ | ಅವರು | ~ಅಲಿ(ತಿನ್ನಲಿ) | ~ಆರು(ತಿಂದಾರು) | ~ಅರು(ತಿನ್ನರು) |
| ಸ್ತ್ರೀಲಿಂಗ | ಅವರು | ~ಅಲಿ(ತಿನ್ನಲಿ) | ~ಆರು(ತಿಂದಾರು) | ~ಅರು(ತಿನ್ನರು) |
| ನಪುಂಸಕ ಲಿಂಗ | ಅವು | ~ಅಲಿ(ತಿನ್ನಲಿ) | ~ಆವು(ತಿಂದಾವು) | ~ಅವು(ತಿನ್ನವು) |

## ಸಮಾಸಗಳು

- **ಸಮಾಸ :** ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಲೋಪ ಬಾರದ ರೀತಿಯಲ್ಲಿ ಒಟ್ಟು ಸೇರಿ ಒಂದೇ ಪದವಾಗುವುದಕ್ಕೆ **'ಸಮಾಸ'** ಎನ್ನುವರು. ಸಮಾಸವಾದಾಗ ಪದಮಧ್ಯ ವಿಭಕ್ತಿಪ್ರತ್ಯಯಗಳು ಸಹಜವಾಗಿ ಲೋಪವಾಗುವುವು.
- **ವಿಗ್ರಹವಾಕ್ಯ :** ಸಮಾಸ ರಚನೆಯಲ್ಲಿ ಬರುವ ಮೊದಲನೆಯ ಪದವನ್ನು ಪೂರ್ವಪದವೆಂದೂ ಎರಡನೆಯ ಪದವನ್ನು ಉತ್ತರಪದವೆಂದೂ ಸಮಾಸ ಪದವನ್ನು ಬಿಡಿಸಿ ಬರೆಯುವುದನ್ನು **'ವಿಗ್ರಹವಾಕ್ಯ'**ವೆಂದೂ ಕರೆಯುವರು.
  ವಿಗ್ರಹವಾಕ್ಯ = {ಪೂರ್ವಪದ + ಉತ್ತರಪದ = ಸಮಾಸಪದ}
- **ಅರಿ ಸಮಾಸ :** ಸಮಾಸದಲ್ಲಿ ಪೂರ್ವಪದ ಮತ್ತು ಉತ್ತರಪದಗಳೆರಡೂ ಸಂಸ್ಕೃತ ಪದಗಳಾಗಿರಬೇಕು ಅಥವಾ ಕನ್ನಡ ಪದಗಳಾಗಿರಬೇಕು. ಒಂದು ಕನ್ನಡ ಇನ್ನೊಂದು ಸಂಸ್ಕೃತ ಪದವಾದಾಗ ಅದು **'ಅರಿ ಸಮಾಸ'** ಎನಿಸುತ್ತದೆ. ಇದು ನಿಷಿದ್ಧ, ಆದರೆ ಬಿರುದುಗಳಿಗೆ, ಪೂರ್ವಕವಿ ಪ್ರಯೋಗಗಳಿಗೆ, ಕ್ರಿಯಾ ಸಮಾಸ ಹಾಗೂ ಗಮಕ ಸಮಾಸಗಳಲ್ಲಿ ಇದು ಅನ್ವಯಿಸುವುದಿಲ್ಲ.

  **ಉದಾಹರಣೆ :**

  **ಸಂಸ್ಕೃತಪದ + ಕನ್ನಡಪದ = ಅರಿಸಮಾಸ**
  ಮಂಗಳದ + ಆರತಿ = ಮಂಗಳಾರತಿ
  **ಕನ್ನಡಪದ + ಸಂಸ್ಕೃತಪದ = ಅರಿಸಮಾಸ**
  ಮಳೆಯ + ಕಾಲ = ಮಳೆಗಾಲ

- ಸಮಾಸಗಳಲ್ಲಿ ಎಂಟು ವಿಧಗಳಿವೆ.

  1. ತತ್ಪುರುಷ ಸಮಾಸ. 2. ಕರ್ಮಧಾರಯ ಸಮಾಸ. 3. ದ್ವಿಗು ಸಮಾಸ
  4. ಅಂಶಿ ಸಮಾಸ 5. ದ್ವಂದ್ವ ಸಮಾಸ 6. ಕ್ರಿಯಾ ಸಮಾಸ
  7. ಬಹುವ್ರೀಹಿ ಸಮಾಸ 8. ಗಮಕ ಸಮಾಸ

- **ತತ್ಪುರುಷ ಸಮಾಸ :** ಪೂರ್ವಪದ ಮತ್ತು ಉತ್ತರಪದಗಳೆರಡು ನಾಮಪದಗಳಾಗಿದ್ದು, ಉತ್ತರಪದದ ಅರ್ಥಕ್ಕೆ ಪ್ರಾಧಾನ್ಯವಿದ್ದರೆ ಅದನ್ನು **'ತತ್ಪುರುಷ ಸಮಾಸ'** ಎನ್ನುವರು.

  **ಉದಾಹರಣೆ :**

  ಪೂರ್ವಪದ + ಉತ್ತರಪದ = ಸಮಾಸಪದ
  ನಾಮಪದ + ನಾಮಪದ(ಅರ್ಥಪ್ರಧಾನ) = ತತ್ಪುರುಷ ಸಮಾಸ
  ವಯಸ್ಸಿನಿಂದ + ವೃದ್ಧ = ವಯೋವೃದ್ಧ
  ಅರಸನ + ಮನೆ = ಅರಮನೆ
  ರಾಜನ + ಪುತ್ರಿ = ರಾಜಪುತ್ರಿ
  ಕಣ್ಣ + ಪನಿ = ಕಂಬನಿ
  ಬೆಟ್ಟದ + ತಾವರೆ = ಬೆಟ್ಟದಾವರೆ
  ತಲೆಯಲ್ಲಿ + ನೋವು = ತಲೆನೋವು

- **ಕರ್ಮಧಾರಯ ಸಮಾಸ :** ಪೂರ್ವಪದವು ಗುಣವಾಚಕ / ವಿಶೇಷಣವಾಗಿದ್ದು ಉತ್ತರಪದವು ನಾಮಪದ / ವಿಶೇಷ್ಯವಾಗಿದ್ದು ಅವೆರಡೂ ಸೇರಿ ಸಮಾಸವಾದರೆ ಅದನ್ನು **'ಕರ್ಮಧಾರಯ ಸಮಾಸ'** ಎನ್ನುವರು.

  **ಉದಾಹರಣೆ :**

  ಪೂರ್ವಪದ + ಉತ್ತರಪದ = ಸಮಾಸಪದ
  ಗುಣವಾಚಕ(ವಿಶೇಷಣ) +ನಾಮಪದ(ವಿಶೇಷ್ಯ)(ಅರ್ಥಪ್ರಧಾನ) = ಕರ್ಮಧಾರಯಸಮಾಸ.

| | | |
|---|---|---|
| ಕೆಂಪಾದ | + ಅಕ್ಕಿ | = ಕೇಸಕ್ಕಿ |
| ಮೆಲ್ಲಿತು | + ನುಡಿ | = ಮೆಲ್ನುಡಿ |
| ಮೆಲ್ಲಿತು | + ಮಾತು | = ಮೆಲ್ವಾತು |
| ಹೊಸದು | + ಕನ್ನಡ | = ಹೊಸಗನ್ನಡ |
| ಇನಿದು | + ಮಾವು | = ಇಮ್ಮಾವು |

- **ದ್ವಿಗು ಸಮಾಸ :** ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರ ಪದವು ಸಂಖ್ಯಾವಾಚಕ ಅಥವಾ ನಾಮಪದವಾಗಿದ್ದು, ಅವೆರೆಡೂ ಸೇರಿ ಸಮಾಸವಾದಾಗ ಉತ್ತರಪದದ ಅರ್ಥವು ಮುಖ್ಯವಾಗಿದ್ದರೆ ಅದನ್ನು **'ದ್ವಿಗು ಸಮಾಸ'** ಎನ್ನುವರು.

**ಉದಾಹರಣೆ :**

ಪೂರ್ವಪದ + ಉತ್ತರಪದ = ಸಮಾಸ ಪದ

ಸಂಖ್ಯಾವಾಚಕ + ಸಂಖ್ಯಾವಾಚಕ/ನಾಮಪದ(ಅರ್ಥ ಪ್ರಧಾನ) = ದ್ವಿಗು ಸಮಾಸ

| | | |
|---|---|---|
| ಒಂದು | + ಕಟ್ಟು | = ಒಗ್ಗಟ್ಟು |
| ಎರಡು | + ಕೆಲ | = ಇಕ್ಕೆಲ |
| ಮೂರು | + ಮಡಿ | = ಮುಮ್ಮಡಿ |
| ನಾಲ್ಕು | + ಮೊಗ | = ನಾಲ್ಮೊಗ |
| ಏಕ | + ಅಕ್ಷಿ | = ಏಕಾಕ್ಷಿ |
| ಪಂಚ | + ಇಂದ್ರಿಯ | = ಪಂಚೇಂದ್ರಿಯ |
| ಷಟ್ | + ಕೋನ | = ಷಟ್ಕೋನ |
| ಎರಡು | + ಪತ್ತು | = ಇಪ್ಪತ್ತು |
| ಎರಡು | + ಐದು | = ಈರೈದು |
| ಆರು | + ಪತ್ತು | = ಅರವತ್ತು |
| ಮೂರು | + ಗಾವುದ | = ಮೂಗಾವುದ |
| ಮೂರು | + ಕಣ್ಣು | = ಮುಕ್ಕಣ್ಣು |
| ಸಪ್ತ | + ಸ್ವರಗಳು | = ಸಪ್ತಸ್ವರಗಳು |

- **ಅಂಶಿ ಸಮಾಸ :** ಪೂರ್ವಪದವು ಅಂಶಿಯಾಗಿದ್ದು, ಉತ್ತರಪದವು ಅಂಶವಾಗಿದ್ದು, ಪೂರ್ವೋತ್ತರ ಪದಗಳು ಅಂಶಾಂಶಿ ಸಂಬಂಧದಿಂದ ಕೂಡಿದ್ದು ಪೂರ್ವಪದದ ಅರ್ಥವು ಪ್ರಧಾನವಾಗಿದ್ದರೆ ಅದನ್ನು **'ಅಂಶಿ ಸಮಾಸ'** ಎನ್ನುವರು. ಸಮಾಸವಾದಾಗ ಅಂಶವು ಪೂರ್ವಪದವಾಗಿಯೂ ಅಂಶಿಯು ಉತ್ತರಪದವಾಗಿಯೂ ಕಂಡು ಬರುವುದು ಇದರ ವಿಶೇಷತೆಯಾಗಿದೆ.

**ಉದಾಹರಣೆ :**

ಪೂರ್ವಪದ + ಉತ್ತರಪದ = ಸಮಾಸ ಪದ

ಅಂಶಿ (ಅರ್ಥ ಪ್ರಧಾನ) + ಅಂಶ = ಅಂಶಿ ಸಮಾಸ

| | | |
|---|---|---|
| ಕೈಯ | + ಮುಂದು | = ಮುಂಗೈ |
| ಹುಬ್ಬಿನ | + ಕುಡಿ | = ಕುಡಿಹುಬ್ಬು |
| ಮೂಗಿನ | + ತುದಿ | = ತುದಿಮೂಗು |
| ತಲೆಯ | + ಮುಂದು | = ಮುಂದಲೆ |
| ರಾತ್ರಿಯ | + ನಡು | = ನಡುರಾತ್ರಿ |
| ಕಾರಿನ | + ಮುಂದು | = ಮುಂಗಾರು |
| ರಾತ್ರಿಯ | + ಮಧ್ಯ | = ಮಧ್ಯರಾತ್ರಿ |
| ಹಗಲಿನ | + ನಡು | = ನಡುಹಗಲು |

| | | |
|---|---|---|
| ಇರುಳಿನ | + ನಡು | = ನಟ್ಟಿರುಳು |
| ನೆತ್ತಿಯ | + ನಡು | = ನಡುನೆತ್ತಿ |
| ಕುರುಳಿನ | + ಮುಂದು | = ಮುಂಗುರುಳು |
| ಬಾಗಿಲ | + ಮುಂದು | = ಮುಂಬಾಗಿಲು |
| ಬಾಗಿಲ | + ಹಿಂದು | = ಹಿಂಬಾಗಿಲು |
| ಹೊಟ್ಟೆಯ | + ಕೆಳಗು | = ಕಿಬ್ಬೊಟ್ಟೆ |
| ಮನೆಯ | + ನಡು | = ನಡುಮನೆ |
| ಕೈಯ | + ಅಡಿ | = ಅಂಗೈ |
| ತಲೆಯ | + ಹಿಂದು | = ಹಿಂದಲೆ |
| ಕಣ್ಣ | + ಕಡೆ | = ಕಡೆಗಣ್ಣು |

- **ಕ್ರಿಯಾ ಸಮಾಸ :** ಪೂರ್ವಪದವು ನಾಮಪದವಾಗಿದ್ದು ಉತ್ತರ ಪದವು ಕ್ರಿಯಾಪದವಾಗಿದ್ದು ಅವೆರಡು ಸೇರಿ ಸಮಾಸವಾದಾಗ ಉತ್ತರಪದದ ಅರ್ಥಕ್ಕೆ ಪ್ರಧಾನವಾಗಿದ್ದರೆ ಅದನ್ನು **'ಕ್ರಿಯಾ ಸಮಾಸ'** ಎನ್ನುವರು.

**ಉದಾಹರಣೆ :**

| | | |
|---|---|---|
| **ಪೂರ್ವಪದ** | + **ಉತ್ತರಪದ** | = **ಸಮಾಸ ಪದ** |
| **ನಾಮಪದ** | + **ಕ್ರಿಯಾಪದ (ಅರ್ಥ ಪ್ರಧಾನ)** | = **ಕ್ರಿಯಾ ಸಮಾಸ** |
| ಕೈಯನ್ನು | + ಮುಗಿ | = ಕೈಮುಗಿ |
| ಜಲಪಾನಮಂ | + ಗೆಯ್ದು | = ಜಲಪಾನಂಗೆಯ್ದು |
| ತಲೆಯಂ | + ಕೊಡವಿ | = ತಲೆಗೊಡವಿ |
| ಮಣೆಯಂ | + ಇತ್ತು | = ಮಣೆಯಿತ್ತು |
| ಮೈಯನ್ನು | + ತಡವಿ | = ಮೈದಡವಿ |
| ಸುಖವನ್ನು | + ಪಡು | = ಸುಖಪಡು |
| ಮೈಯನ್ನು | + ಮುಚ್ಚು | = ಮೈಮುಚ್ಚು |
| ಕಣ್ಣಂ | + ತೆರೆ | = ಕಣ್ತೆರೆ |
| ಕಣ್ಣು | + ಕೆಡು | = ಕಂಗೆಡು |

- **ದ್ವಂದ್ವ ಸಮಾಸ :** ಎರಡು ಅಥವಾ ಹೆಚ್ಚು ನಾಮಪದಗಳು ಸಹಯೋಗ ತೋರುವಂತೆ ಸೇರಿ ಸಮಾಸವಾದಾಗ ಎಲ್ಲ ಪದಗಳ ಅರ್ಥವೂ ಪ್ರಧಾನವಾಗಿದ್ದರೆ ಅದನ್ನು **'ದ್ವಂದ್ವ ಸಮಾಸ'** ಎನ್ನುವರು.

**ಉದಾಹರಣೆ :**

| | | | |
|---|---|---|---|
| **ಪೂರ್ವಪದ** | + **ಉತ್ತರಪದ** | | = **ಸಮಾಸ ಪದ** |
| **ನಾಮಪದ** | + **ನಾಮಪದ (ಎಲ್ಲ ಪದಗಳ ಅರ್ಥ ಪ್ರಧಾನ)** | | = **ದ್ವಂದ್ವ ಸಮಾಸ** |
| ದೀನನೂ | + ಅನಾಥನೂ | | = ದೀನಾನಾಥರು |
| ಆನೆಯೂ | + ಕುದುರೆಯೂ | + ಒಂಟೆಯೂ | = ಆನೆಕುದುರೆಒಂಟೆಗಳು |
| ಕೆರೆಯೂ | + ಕಟ್ಟೆಯೂ | | = ಕೆರೆಕಟ್ಟೆಗಳು |
| ಗಿಡವೂ | + ಮರವೂ | | = ಗಿಡಮರಗಳು |
| ಗಿರಿಯೂ | + ವನವೂ | + ದುರ್ಗವೂ | = ಗಿರಿವನದುರ್ಗಗಳು |
| ಕರಿಯೂ | + ತುರಗವೂ | + ರಥವೂ | = ಕರಿತುರಗರಥಗಳು |

- **ಬಹುವ್ರೀಹಿ ಸಮಾಸ :** ಎರಡು ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ (ಅನ್ಯಪದದ) ಅರ್ಥವು ಪ್ರಧಾನವಾಗಿದ್ದರೆ ಅದನ್ನು **'ಬಹುವ್ರೀಹಿ ಸಮಾಸ'** ಎನ್ನುವರು.

**ಉದಾಹರಣೆ :**

| | | |
|---|---|---|
| **ಪೂರ್ವಪದ** | **+ ಉತ್ತರಪದ** | **= ಸಮಾಸ ಪದ** |
| **ನಾಮಪದ** | **+ ನಾಮಪದ = (ಅನ್ಯಪದದ ಅರ್ಥ ಪ್ರಧಾನ) ಬಹುವ್ರೀಹಿ ಸಮಾಸ** | |
| ಮೂರು | + ಕಣ್ಣುಗಳನ್ನು ಉಳ್ಳವನು ಆವನೋ ಅವನು | = ಮುಕ್ಕಣ್ಣ (ಶಿವ) |
| ನಾಲ್ಕು | + ಮೊಗ ಉಳ್ಳವನು ಆವನೋ ಅವನು | = ನಾಲ್ಮೊಗ (ಬ್ರಹ್ಮ) |
| ಚಕ್ರವು | + ಪಾಣಿಯಲ್ಲಿ ಉಳ್ಳವನು ಆವನೋ ಅವನು | = ಚಕ್ರಪಾಣಿ(ವಿಷ್ಣು) |
| ಪದ್ಮವು | + ನಾಭಿಯಲ್ಲಿ ಉಳ್ಳವನು ಆವನೋ ಅವನು | = ಪದ್ಮನಾಭ(ವಿಷ್ಣು) |
| ಹಣೆಯಲ್ಲಿ | + ಕಣ್ಣುವುಳ್ಳವನು ಆವನೋ ಅವನು | = ಹಣೆಗಣ್ಣ (ಶಿವ) |
| ಮೂರು | + ಕಣ್ಣುವುಳ್ಳವನು ಆವನೋ ಅವನು | = ಮುಕ್ಕಣ್ಣ (ಶಿವ) |
| ಚಕ್ರವನ್ನು | + ಪಾಣಿಯಲ್ಲುಳ್ಳವನು ಆವನೋ ಅವನು | = ಚಕ್ರಪಾಣಿ(ವಿಷ್ಣು) |

- **ಗಮಕ ಸಮಾಸ :** ಪೂರ್ವಪದದಲ್ಲಿ ಸರ್ವನಾಮ ಅಥವಾ ಕೃದಂತ ಪದಗಳಿದ್ದು, ಉತ್ತರಪದ ನಾಮಪದವಾಗಿದ್ದು, ಉತ್ತರ ಪದದ ಅರ್ಥಕ್ಕೆ ಪ್ರಾಧಾನ್ಯವಿದ್ದರೆ ಅದನ್ನು **'ಗಮಕ ಸಮಾಸ'** ಎನ್ನುವರು.

**ಉದಾಹರಣೆ :**

| | | |
|---|---|---|
| **ಪೂರ್ವಪದ** | **+ ಉತ್ತರಪದ** | **= ಸಮಾಸ ಪದ** |
| **ಸರ್ವನಾಮ/ಕೃದಂತ** | **+ ನಾಮಪದ (ಅರ್ಥ ಪ್ರಧಾನ)** | **= ಗಮಕ ಸಮಾಸ** |
| ಅವನು | + ಹುಡುಗ | = ಆ ಹುಡುಗ |
| ಇವಳು | + ಹುಡುಗಿ | = ಈ ಹುಡುಗಿ |
| ಅದು | + ಬೆಟ್ಟ | = ಆ ಬೆಟ್ಟ |
| ಬೆಂದುದು | + ಬೇಳೆ | = ಬೆಂದಬೇಳೆ |
| ಅದು | + ಕಲ್ಲು | = ಆ ಕಲ್ಲು |
| ಇದು | + ಬೆಕ್ಕು | = ಈ ಬೆಕ್ಕು |
| ನೆಯ್ದುದು | + ವಸ್ತ್ರ | = ನೆಯ್ದವಸ್ತ್ರ |

## ಕೃದಂತಗಳು

- **ಕೃದಂತ :** ಧಾತುವಿಗೆ ಕೃತ್ ಪ್ರತ್ಯಯ ಸೇರಿ ಆದ ಪದವನ್ನು **'ಕೃದಂತ'** ಎನ್ನುವರು.
- ಕೃದಂತದಲ್ಲಿ ಮೂರು ವಿಧಗಳಿವೆ.
  1. ಕೃದಂತನಾಮ 2. ಕೃದಂತ ಭಾವನಾಮ 3. ಕೃದಂತಾವ್ಯಯ
- **ಕೃದಂತನಾಮ :** ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್ ಪ್ರತ್ಯಯ ಸೇರಿ ಆಗುವ ಪದಗಳನ್ನು **'ಕೃದಂತನಾಮಗಳು'** ಎನ್ನುವರು.
  ಉದಾಹರಣೆ : ಮಾಡಿದ, ತಿನ್ನುವ, ನಡೆಯುವ, ಓಡಿದ ಇತ್ಯಾದಿ.
- ಕೃದಂತನಾಮಗಳಲ್ಲಿ ಮೂರು ವಿಧಗಳಿವೆ.
  1. ವರ್ತಮಾನ ಕೃದಂತ 2. ಭೂತ ಕೃದಂತ 3. ನಿಷೇಧ ಕೃದಂತ
- **ವರ್ತಮಾನ ಕೃದಂತನಾಮಗಳು :** ಧಾತು ಹಾಗೂ ಕೃತ್ ಪ್ರತ್ಯಯಗಳ ನಡುವೆ ಭವಿಷ್ಯತ್ ಕಾಲಸೂಚಕ ಪ್ರತ್ಯಯ 'ವ' ಅಥವಾ 'ಉವ' ಪ್ರತ್ಯಯಗಳು ಸೇರಿ ಆದ ಪ್ರಾತಿಪದಿಕಗಳನ್ನು **'ವರ್ತಮಾನ ಕೃದಂತಗಳು'** ಎನ್ನುವರು
  ಉದಾಹರಣೆ :

  ನಡೆ + ಉವ + ಅ = ನಡೆಯುವ
  ಬರೆ + ಉವ + ಅ = ಬರೆಯುವ
  ತಿನ್ನು + ವ + ಅ = ತಿನ್ನುವ
  ಓಡು + ವ + ಅ = ಓಡುವ
  ಬಾಳು + ವ + ಅ = ಬಾಳುವ
- **ಭೂತ ಕೃದಂತನಾಮಗಳು :** ಧಾತು ಹಾಗೂ ಕೃತ್ ಪ್ರತ್ಯಯಗಳ ನಡುವೆ ಭೂತ ಕಾಲಸೂಚಕ ಪ್ರತ್ಯಯ 'ದ' ಪ್ರತ್ಯಯ ಸೇರಿ ಆದ ಪ್ರಾತಿಪದಿಕಗಳನ್ನು **'ಭೂತ ಕೃದಂತಗಳು'** ಎನ್ನುವರು
  ಉದಾಹರಣೆ :

  ಮಾಡು + ದ + ಅ = ಮಾಡಿದ
  ಓಡು + ದ + ಅ = ಓಡಿದ
  ಬಾಳು + ದ + ಅ = ಬಾಳಿದ
  ಬರೆ + ದ + ಅ = ಬರೆದ
- **ನಿಷೇಧ ಕೃದಂತನಾಮಗಳು :** ಧಾತು ಹಾಗೂ ಕೃತ್ ಪ್ರತ್ಯಯಗಳ ನಡುವೆ ನಿಷೇಧಾರ್ಥ ಸೂಚಕ ಪ್ರತ್ಯಯ 'ಅದ' ಪ್ರತ್ಯಯ ಸೇರಿ ಆದ ಪ್ರಾತಿಪದಿಕಗಳನ್ನು **'ನಿಷೇಧ ಕೃದಂತಗಳು'** ಎನ್ನುವರು
  ಉದಾಹರಣೆ :

  ಓಡು + ಅದ + ಅ = ಓಡದ
  ಬಾಳು + ಅದ + ಅ = ಬಾಳದ
  ಬರೆ + ಅದ + ಅ = ಬರೆಯದ
- **ಕೃದಂತಭಾವನಾಮಗಳು :** ಧಾತುಗಳಿಗೆ ಭಾವಾರ್ಥದಲ್ಲಿ ವಿಕೆ, ಇಕೆ, ಇಗೆ, ಗೆ, ತ, ಅಲು, ಎ, ಅಕೆ, ಅತೆ, ವಳಿ, ಟ, ಇತ, ಅವು, ವು, ವುದು, ಕೆ, ತೆ, ಪು, ವಳಿಕೆ, ವಣಿಗೆ ಮುಂತಾದ ಪ್ರತ್ಯಯಗಳು ಸೇರಿ ಆದ ಪ್ರಾತಿಪದಿಕಗಳನ್ನು **'ಕೃದಂತ ಭಾವನಾಮಗಳು'** ಎನ್ನುವರು.
  ಉದಾಹರಣೆ :- ಮಾಟ, ತಿನ್ನುವಿಕೆ, ನಡೆತ, ಓಟ.

  ಧಾತು + ಭಾವಾರ್ಥ ಕೃತ್ ಪ್ರತ್ಯಯ = ಕೃದಂತ ಭಾವನಾಮ
  ಅಂಜು + ಇಕೆ (ಅಂಜುವುದರ ಭಾವ) = ಅಂಜಿಕೆ
  ನಂಬು + ಇಕೆ (ನಂಬುವುದರ ಭಾವ) = ನಂಬಿಕೆ
  ಬಾಳು + ವಿಕೆ (ಬಾಳುವುದರ ಭಾವ) = ಬಾಳುವಿಕೆ

| | | | | |
|---|---|---|---|---|
| ಬರೆ | + | ಇಕೆ (ಬರೆಯುವುದರ ಭಾವ) | = | ಬರೆಯುವಕೆ |
| ತಿನ್ನು | + | ಇಕೆ (ತಿನ್ನುವುದರ ಭಾವ) | = | ತಿನ್ನುವಿಕೆ |
| ಉಡು | + | ಗೆ (ಉಡುವುದರ ಭಾವ) | = | ಉಡುಗೆ |
| ತೊಡು | + | ಗೆ (ತೊಡುವುದರ ಭಾವ) | = | ತೊಡುಗೆ |
| ಕೊರೆ | + | ತ (ಕೊರೆಯುವುದರ ಭಾವ) | = | ಕೊರೆತ |
| ನಡೆ | + | ಅತೆ (ನಡೆಯುವುದರ ಭಾವ) | = | ನಡತೆ |
| ಓಡು | + | ಟ (ಓಡುವುದರ ಭಾವ) | = | ಓಟ |
| ನೋಡು | + | ಟ (ನೋಡುವುದರ ಭಾವ) | = | ನೋಟ |
| ಮಾಡು | + | ಟ (ಮಾಡುವುದರ ಭಾವ) | = | ಮಾಟ |
| ಒಪ್ಪು | + | ಇತ (ಒಪ್ಪುವುದರ ಭಾವ) | = | ಒಪ್ಪಿತ |
| ದಣಿ | + | ವು (ದಣಿಯುವುದರ ಭಾವ) | = | ದಣಿವು |
| ನಗು | + | ವುದು (ನಗುವುದರ ಭಾವ) | = | ನಗುವುದು |
| ತಿನ್ನು | + | ವುದು (ತಿನ್ನುವುದರ ಭಾವ) | = | ತಿನ್ನುವುದು |
| ಮೊಳೆ | + | ಕೆ (ಮೊಳೆಯುವುದರ ಭಾವ) | = | ಮೊಳಕೆ |
| ಅಳೆ | + | ತೆ (ಅಳೆಯುವುದರ ಭಾವ) | = | ಅಳತೆ |
| ನೆನೆ | + | ಪು (ನೆನೆಯುವುದರ ಭಾವ) | = | ನೆನೆಪು |
| ಸಲು | + | ವಳಿ (ಸಲುವುದರ ಭಾವ) | = | ಸಲುವಳಿ |
| ತಿಳಿ | + | ವಳಿಕೆ (ತಿಳಿಯುವುದರ ಭಾವ) | = | ತಿಳಿವಳಿಕೆ |
| ಮರೆ | + | ವಣಿಗೆ(ಮರೆಯುವುದರ ಭಾವ) | = | ಮರೆವಣಿಗೆ |

➢ **ಕೃದಂತಾವ್ಯಯಗಳು :** ಧಾತುಗಳಿಗೆ ಉತ, ಉತ್ತ, ಅದೆ, ದರೆ, ಅಲು, ಅಲಿಕ್ಕೆ, ಅ, ಇ, ದು ಮೊದಲಾದ ಪ್ರತ್ಯಯಗಳು ಸೇರಿ ಆದ ಪದಗಳನ್ನು **'ಕೃದಂತಾವ್ಯಯಗಳು'** ಎನ್ನುವರು.

ಉದಾಹರಣೆ : **ಉಣ್ಣದೆ, ಬರುತ್ತ, ಬರೆದು, ಹೋಗಲಿಕ್ಕೆ,** ಮಾಡಿ, ತಿಂದು, ನಡೆಯುತ್ತ, ಓಡಿ.

| ಧಾತು | + ಅವ್ಯಯಾರ್ಥ ಪ್ರತ್ಯಯ | = ಕೃದಂತಾವ್ಯಯ |
|---|---|---|
| ನಡೆ | + ಉತ್ತ | = ನಡೆಯುತ್ತ |
| ಮಾಡು | + ಉತ್ತ | = ಮಾಡುತ್ತ |
| ಮಾಡು | + ಅದೆ | = ಮಾಡದೆ |
| ಹೋಗು | + ದರೆ | = ಹೋದರೆ |
| ಮಾಡು | + ಅಲು | = ಮಾಡಲು |
| ಮಾಡು | + ಅಲಿಕ್ಕೆ | = ಮಾಡಲಿಕ್ಕೆ |
| ಮಾಡು | + ಅ | = ಮಾಡ |
| ಮಾಡು | + ಇ | = ಮಾಡಿ |
| ಓಡು | + ಇ | = ಓಡಿ |
| ಬರೆ | + ದು | = ಬರೆದು |
| ತಿನ್ನು | + ದು | = ತಿಂದು |

(ಇವುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಲಿಂಗಗಳಿಗನುಗುಣವಾಗಿ ಆಗುವ ಬದಲಾವಣೆಗಳನ್ನು ಗಮನಿಸಿ.)

| | | | |
|---|---|---|---|
| ಓಡುವ + ಅವನು | + ಉ | = | ಓಡುವವನು |
| ಓಡುವ + ಅವನು | + ಇಂದ | = | ಓಡುವವನಿಂದ |
| ಓಡುವ + ಅವಳು | + ಅಲ್ಲಿ | = | ಓಡುವವಳಲ್ಲಿ |
| ಓಡುವ + ಉದು | + ಅನ್ನು | = | ಓಡುವುದನ್ನು |

## ತದ್ಧಿತಾಂತಗಳು

- **ತದ್ಧಿತಾಂತಗಳು :** ನಾಮಪ್ರಕೃತಿಗಳಿಗೆ ಬೇರೆಬೇರೆ ಅರ್ಥಗಳಲ್ಲಿ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ದಗಳನ್ನು **'ತದ್ಧಿತಾಂತಗಳು'** ಎನ್ನುವರು.
- ತದ್ಧಿತಾಂತಗಳಲ್ಲಿ **ಮೂರು** ಬಗೆಗಳಿವೆ.

1. ತದ್ಧಿತಾಂತ ನಾಮ. 2. ತದ್ಧಿತಾಂತ ಭಾವನಾಮ. 3. ತದ್ಧಿತಾಂತ ಅವ್ಯಯ.

- **ತದ್ಧಿತಾಂತ ನಾಮ :** ನಾಮ ಪ್ರಕೃತಿಗಳಿಗೆ ಬೇರೆಬೇರೆ ಅರ್ಥದಲ್ಲಿ ~ಇಗ, ~ಇಕ, ~ಆಡಿಗ, ~ಕಾರ, ~ಕೋರ, ~ಗಾರ, ~ವಂತ, ~ವಾಳ, ~ವಳ, ~ಆಳಿ, ~ಗುಳಿ, ~ಆರ, ~ಅನೆಯ ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ದಗಳನ್ನು **'ತದ್ಧಿತಾಂತನಾಮ'** ಎನ್ನುವರು.

| ಅರ್ಥ | ನಾಮಪ್ರಕೃತಿ | ತದ್ಧಿತ ಪ್ರತ್ಯಯ | ತದ್ಧಿತಾಂತ ನಾಮ |
|---|---|---|---|
| ಕನ್ನಡವನ್ನು ಬಲ್ಲವನು | ಕನ್ನಡ | ಇಗ | ಕನ್ನಡಿಗ |
| ಲೆಕ್ಕವನ್ನು ಬಲ್ಲವನು | ಲೆಕ್ಕ | ಇಗ | ಲೆಕ್ಕಿಗ |
| ಕೇಡನ್ನು ಮಾಡುವವನು | ಕೇಡು | ಇಗ | ಕೇಡಿಗ |
| ಗಂಧವನ್ನು ಮಾರುವವನು | ಗಂಧ | ಇಗ | ಗಂಧಿಗ |
| ಒಕ್ಕಲು ಮಾಡುವವನು | ಒಕ್ಕಲು | ಇಗ | ಒಕ್ಕಲಿಗ |
| ನಾವೆಯನ್ನು ನಡೆಸುವವನು | ನಾವೆ | ಇಕ | ನಾವಿಕ |
| ಹೂವನ್ನು ಮಾರುವವನು | ಹೂವು | ಆಡಿಗ | ಹೂವಾಡಿಗ |
| ಹಾವನ್ನು ಆಡಿಸುವವನು | ಹಾವು | ಆಡಿಗ | ಹಾವಾಡಿಗ |
| ಕೋಲನ್ನು ಹಿಡಿಯುವವನು | ಕೋಲು | ಕಾರ | ಕೋಲುಕಾರ |
| ಓಲೆಯನ್ನು ತರುವವನು | ಓಲೆ | ಕಾರ | ಓಲೆಕಾರ |
| ಚಾಡಿಯನ್ನು ಹೇಳುವವನು | ಚಾಡಿ | ಕೋರ | ಚಾಡಿಕೋರ |
| ಲಂಚವನ್ನು ತೆಗೆದುಕೊಳ್ಳುವವನು | ಲಂಚ | ಕೋರ | ಲಂಚಕೋರ |
| ಬಳೆಯನ್ನು ಮಾರುವವನು | ಬಳೆ | ಗಾರ | ಬಳೆಗಾರ |
| ಬೇಟೆಯನ್ನು ಆಡುವವನು | ಬೇಟೆ | ಗಾರ | ಬೇಟೆಗಾರ |
| ಮಾತನ್ನು ಆಡುವವನು | ಮಾತು | ಗಾರ | ಮಾತುಗಾರ |
| ಮೋಸವನ್ನು ಮಾಡುವವನು | ಮೋಸ | ಗಾರ | ಮೋಸಗಾರ |
| ಮಾಲೆಯನ್ನು ಮಾಡುವವನು | ಮಾಲೆ | ಗಾರ | ಮಾಲೆಗಾರ |
| ಸಾಲವನ್ನು ಮಾಡುವವನು | ಸಾಲ | ಗಾರ | ಸಾಲಗಾರ |
| ಕೊಲೆಯನ್ನು ಮಾಡುವವನು | ಕೊಲೆ | ಗಾರ | ಕೊಲೆಗಾರ |
| ಪಾಲನ್ನು ಉಳ್ಳವನು | ಪಾಲು | ಗಾರ | ಪಾಲುಗಾರ |
| ಛಲವನ್ನು ಉಳ್ಳವನು | ಛಲ | ಗಾರ | ಛಲಗಾರ |
| ಬುದ್ಧಿಯನ್ನು ಉಳ್ಳವನು | ಬುದ್ಧಿ | ವಂತ | ಬುದ್ಧಿವಂತ |
| ಹಣವನ್ನು ಉಳ್ಳವನು | ಹಣ | ವಂತ | ಹಣವಂತ |
| ಸಿರಿಯನ್ನು ಉಳ್ಳವನು | ಸಿರಿ | ವಂತ | ಸಿರಿವಂತ |
| ರೂಪವನ್ನು ಉಳ್ಳವನು | ರೂಪ | ವಂತ | ರೂಪವಂತ |
| ಗುಣವನ್ನು ಉಳ್ಳವನು | ಗುಣ | ವಂತ | ಗುಣವಂತ |
| ಮಡಿಯನ್ನು ಮಾಡುವವನು | ಮಡಿ | ವಾಳ | ಮಡಿವಾಳ |
| ಸಜ್ಜೆಯನ್ನು ಸಿದ್ಧಪಡಿಸುವನು | ಸಜ್ಜೆ | ವಳ | ಸಜ್ಜೆವಳ |
| ಹೆಚ್ಚು ಮಾತನ್ನು ಆಡುವವನು | ವಾಚ | ಆಳಿ | ವಾಚಾಳಿ |

| | ಮಾತು | ಆಳಿ | ಮಾತಾಳಿ |
|---|---|---|---|
| ಲಂಚವನ್ನು ತೆಗೆದುಕೊಳ್ಳುವವನು | ಲಂಚ | ಗುಳಿ | ಲಂಚಗುಳಿ |
| ಕುಂಭವನ್ನು ಮಾಡುವವನು | ಕುಂಭ | ಆರ | ಕುಂಬಾರ |
| ಹತ್ತು ಸಂಖ್ಯೆಯುಳ್ಳದ್ದು | ಹತ್ತು | ಅನೆಯ | ಹತ್ತನೆಯ |

➢ **ಸ್ತ್ರೀಲಿಂಗರೂಪಗಳು**

| ಪುಲ್ಲಿಂಗ ರೂಪ | ಸ್ತ್ರೀವಾಚಕ ಪ್ರತ್ಯಯ | ಸ್ತ್ರೀಲಿಂಗ ರೂಪ |
|---|---|---|
| ಒಕ್ಕಲಿಗ | ಇತ್ತಿ | ಒಕ್ಕಲಿಗಿತ್ತಿ |
| ಹೂವಾಡಿಗ | ಇತ್ತಿ | ಹೂವಾಡಗಿತ್ತಿ |
| ಬೀಗ | ಇತ್ತಿ | ಬೀಗಿತ್ತಿ |
| ಗೊಲ್ಲ | ತಿ | ಗೊಲ್ಲತಿ |
| ಕನ್ನಡಿಗ | ತಿ | ಕನ್ನಡತಿ |
| ಬಳೆಗಾರ | ತಿ | ಬಳೆಗಾರ್ತಿ |
| ಕೋಲುಕಾರ | ತಿ | ಕೋಲುಕಾರ್ತಿ |
| ಗುಣವಂತ | ಎ | ಗುಣವಂತೆ |
| ಸಿರಿವಂತ | ಎ | ಸಿರಿವಂತೆ |

➢ **ತದ್ಧಿತಾಂತ ಭಾವನಾಮಗಳು :** ನಾಮ ಪ್ರಕೃತಿಗಳಿಗೆ ಬೇರೆಬೇರೆ ಭಾವಾರ್ಥದಲ್ಲಿ ~ತನ, ~ಇಕೆ, ~ಉ, ~ಪು, ~ಮೆ, ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ದಗಳನ್ನು **'ತದ್ಧಿತಾಂತ ಭಾವನಾಮಗಳು'** ಎನ್ನುವರು.

| **ಭಾವಾರ್ಥ** | **ನಾಮ ಪ್ರಕೃತಿ** | **ತದ್ಧಿತ ಪ್ರತ್ಯಯ** | **ತದ್ಧಿತಾಂತ ಭಾವನಾಮ** |
|---|---|---|---|
| ದೊಡ್ಡವನ ಭಾವ | ದೊಡ್ಡ | ತನ | ದೊಡ್ಡತನ |
| ಜಾಣನ ಭಾವ | ಜಾಣ | ತನ | ಜಾಣತನ |
| ಬಡವನ ಭಾವ | ಬಡವ | ತನ | ಬಡತನ |
| ಸಿರಿವಂತನ ಭಾವ | ಸಿರಿ | ತನ | ಸಿರಿತನ |
| ಚೆಲುವಿನ ಭಾವ | ಚೆಲುವು | ಇಕೆ | ಚೆಲುವಿಕೆ |
| ಕುರುಡಿನ ಭಾವ | ಕುರುಡು | ಉ | ಕುರುಡು |
| ಬಿಳಿದರ ಭಾವ | ಬಿಳಿ | ಪು | ಬಿಳುಪು |
| ಕರಿದರ ಭಾವ | ಕರಿ | ಪು | ಕಪ್ಪು |
| ಜಾಣನ ಭಾವ | ಜಾಣ | ಮೆ | ಜಾಣ್ಮೆ |
| ಪಿರಿದರ ಭಾವ | ಪಿರಿದು | ಮೆ | ಪೆರ್ಮೆ |
| ಹಿರಿದರ ಭಾವ | ಹಿರಿದು | ಮೆ | ಹಿರಿಮೆ |

➢ **ತದ್ಧಿತಾಂತ ಅವ್ಯಯಗಳು :** ನಾಮ ಪ್ರಕೃತಿಗಳಿಗೆ ~ಅಂತೆ, ~ವೊಲ್, ~ವೊಲು, ~ವೋಲ್, ~ವೋಲು, ~ತನಕ, ~ವರೆಗೆ, ~ಮಟ್ಟಿಗೆ, ~ಓಸ್ಕರ, ~ಇಂತ, ~ಆಗಿ, ~ಓಸುಗ, ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ದಗಳನ್ನು **'ತದ್ಧಿತಾಂತ ಅವ್ಯಯಗಳು'** ಎನ್ನುವರು.

| **ನಾಮ ಪದ** | **ಅವ್ಯಯಾರ್ಥದಲ್ಲಿ ತದ್ಧಿತ ಪ್ರತ್ಯಯ** | **ತದ್ಧಿತಾಂತಾವ್ಯಯ** |
|---|---|---|
| ರಾಮನ | ಅಂತೆ | ರಾಮನಂತೆ |
| ಚಂದ್ರನ | ಅಂತೆ | ಚಂದ್ರನಂತೆ |
| ಅವನ | ಅಂತೆ | ಅವನಂತೆ |

| | | |
|---|---|---|
| ಚಂದ್ರನ | ವೊಲ್ | ಚಂದ್ರನವೊಲ್ |
| ಅವನ | ವೊಲ್ | ಅವನವೊಲ್ |
| ನನ್ನ | ವೊಲು | ನನ್ನವೊಲು |
| ಅವಳ | ವೊಲು | ಅವಳವೊಲು |
| ಮನೆಯ | ವೋಲು | ಮನೆಯವೋಲು |
| ಇದರ | ವೋಲು | ಇದರವೋಲು |
| ಕರಡಿಯ | ವೋಲ್ | ಕರಡಿಯವೋಲ್ |
| ನದಿಯ | ವೋಲ್ | ನದಿಯವೋಲ್ |
| ಮನೆಯ | ತನಕ | ಮನೆಯತನಕ |
| ಹಿಮಾಲಯದ | ತನಕ | ಹಿಮಾಲಯದತನಕ |
| ಶಾಲೆಯ | ವರೆಗೆ | ಶಾಲೆಯವರೆಗೆ |
| ಪಟ್ಟಣದ | ವರೆಗೆ | ಪಟ್ಟಣದವರೆಗೆ |
| ಇವಳ | ಮಟ್ಟಿಗೆ | ಇವಳಮಟ್ಟಿಗೆ |
| ಸುಂದರನ | ಮಟ್ಟಿಗೆ | ಸುಂದರನಮಟ್ಟಿಗೆ |
| ರಾಮನಿಗೆ | ಓಸ್ಕರ | ರಾಮನಿಗೋಸ್ಕರ |
| ನನಗೆ | ಓಸ್ಕರ | ನನಗೋಸ್ಕರ |
| ಬೆಕ್ಕಿಗೆ | ಓಸ್ಕರ | ಬೆಕ್ಕಿಗೋಸ್ಕರ |
| ಅರ್ಜುನನ | ಸಲುವಾಗಿ | ಅರ್ಜುನನ ಸಲುವಾಗಿ |
| ಕಟ್ಟಡದ | ಸಲುವಾಗಿ | ಕಟ್ಟಡದಸಲುವಾಗಿ |
| ರಾಧೆಗೆ | ಇಂತ | ರಾಧೆಗಿಂತ |
| ಅದಕ್ಕೆ | ಇಂತ | ಅದಕ್ಕಿಂತ |
| ನಿನಗೆ | ಆಗಿ | ನಿನಗಾಗಿ |
| ಇದಕ್ಕೆ | ಆಗಿ | ಇದಕ್ಕಾಗಿ |
| ಮದುವೆಗೆ | ಓಸುಗ | ಮದುವೆಗೋಸುಗ |
| ಕಾಗೆಗೆ | ಓಸುಗ | ಕಾಗೆಗೋಸುಗ |

# ಅವ್ಯಯಗಳು

- **ಅವ್ಯಯಗಳು :** ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು **'ಅವ್ಯಯಗಳು'** ಎನ್ನುವರು.
- ಅವ್ಯಯಗಳಲ್ಲಿ **ಆರು** ವಿಧಗಳಿವೆ.
  1. ಸಾಮಾನ್ಯಾವ್ಯಯ
  2. ಅನುಕರಣಾವ್ಯಯ
  3. ಭಾವಸೂಚಕಾವ್ಯಯ (ನಿಪಾತಾವ್ಯಯ)
  4. ಸಂಬಂಧಾರ್ಥಕಾವ್ಯಯ
  5. ಅವಧಾರಣಾರ್ಥಕಾವ್ಯಯ
  6. ಕ್ರಿಯಾರ್ಥಕಾವ್ಯಯ
- **ಸಾಮಾನ್ಯಾವ್ಯಯಗಳು :** ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳನ್ನು **'ಸಾಮಾನ್ಯಾವ್ಯಯಗಳು'** ಎನ್ನುವರು. ಇವು ಕ್ರಿಯೆಗೆ ವಿಶೇಷಣಗಳಾಗಿರುತ್ತವೆ.

  ಉದಾಹರಣೆ :

  ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ ತಟ್ಟನೆ, ತರುವಾಯ, ಹಾಗೆ, ಅಂತು ಬೇರೆ, ಬಳಿಕ, ಕೂಡಲೆ, ಚೆನ್ನಾಗಿ

  ಅವಳು **ಚೆನ್ನಾಗಿ** ಹಾಡಿದಳು. ಅದು **ತಟ್ಟನೆ** ಬಿತ್ತು.

  ನೀನು **ನೆಟ್ಟಗೆ** ಹೋಗು. ಅವನು **ಸುಮ್ಮನೆ** ಹೇಳುತ್ತಾನೆ.
- **ಅನುಕರಣಾವ್ಯಯಗಳು :** ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ಕೇಳಿದಂತೆಯೇ ಮತ್ತೆ ಅನುಕರಣೆ ಮಾಡಿ ಹೇಳುವ ಪದಗಳನ್ನು **'ಅನುಕರಣಾವ್ಯಯಗಳು'** ಎನ್ನುವರು.

  ಉದಾಹರಣೆ :

  ಚಟಚಟ, ಕರಕರ, ಚುರುಚುರು, ಧಗಧಗ ರೊಯ್ಯನೆ ಸುಯ್ಯನೆ ಘುಳುಘುಳು ದಡದಡ ಇತ್ಯಾದಿ

  ನೀರು **ದಬದಬನೆ** ಬಿತ್ತು. ಮಳೆ **ಪಟಪಟನೆ** ಸುರಿಯಿತು.

  ಬೆಂಕಿ **ಧಗಧಗನೆ** ಉರಿಯತ್ತಿದೆ.
- **ಭಾವಸೂಚಕಾವ್ಯಯಗಳು :** ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಕೆಲವು ಅರ್ಥವಿಲ್ಲದ ಪದಗಳನ್ನು **'ಭಾವಸೂಚಕಾವ್ಯಯ ಅಥವಾ ನಿಪಾತಾವ್ಯಯಗಳು'** ಎನ್ನುವರು.

  ಉದಾಹರಣೆ :-

  ಅಹಾ! ಭಳಿರೆ! ಓಹೋ! ಹೋ! ಅಃ! ಆಃ! ಓ!

  **ಅಬ್ಬಾ!** ಎಷ್ಟು ಸೊಗಸಾಗಿದೆ. **ಛೆ!** ಹೀಗಾಗಬಾರದಿತ್ತು.

  **ಥೂ!** ಇದು ಅಸಹ್ಯಕರವಾಗಿದೆ. **ಅಹಹಾ!** ಎಷ್ಟು ಸುಂದರವಾಗಿದೆ.
- **ಸಂಬಂಧಾರ್ಥಕಾವ್ಯಯಗಳು :** ಎರಡು ಅಥವಾ ಅದಕ್ಕಿಂತ ಹೆಚ್ಚು ಪದಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವ ಪದಗಳನ್ನು **'ಸಂಬಂಧಾರ್ಥಕಾವ್ಯಯಗಳು'** ಎನ್ನುವರು.

  **ಉದಾಹರಣೆ :**

  ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ, ಇತ್ಯಾದಿಗಳು.

  ಪದಗಳ ಜೋಡಣೆ :- ರಾಮನೂ ಲಕ್ಷ್ಮಣನೂ ಸೀತೆಯೂ ಕಾಡಿಗೆ ಹೊರಟರು.

  ನೀನೂ ಅವನೂ ಇಬ್ಬರೂ ಹೋಗಿರಿ.

  **ಪದ ಸಮುಚ್ಚಯ ಜೋಡಣೆ :**

  ಅವನು ಬರುವುದೂ ಬೇಡ; ಆ ಕೆಲಸ ಆಗುವುದೂ ಬೇಡ.

ಒಂದು ಮೂಟೆ ಅಕ್ಕಿ **ಅಥವಾ** ಒಂದು ಸಾವಿರ ರೂಪಾಯಿ ಕೊಡು.

**ವಾಕ್ಯಗಳ ಜೋಡಣೆ :**

ಅವನು ಬರಲಿಲ್ಲ **ಆದ್ದರಿಂದ** ನಾನೂ ಬರಲಿಲ್ಲ.

ಮದುವೆಗೆ ನೀನು ಬರಬೇಕು **ಅಲ್ಲದೆ** ಒಂದು ಸಾವಿರ ಊಟದ ಎಲೆ ತರಬೇಕು.

- **ಅವಧಾರಣಾರ್ಥಕಾವ್ಯಯಗಳು :** ಹಲವು ವಸ್ತುಗಳಲ್ಲಿ ಒಂದು ವಸ್ತುವನ್ನು ನಿಶ್ಚಯಿಸುವ ಸಲುವಾಗಿ ನಿಶ್ಚಯಾರ್ಥದಲ್ಲಿ ಬರುವ ಪದಗಳನ್ನು **'ಅವಧಾರಣಾರ್ಥಕಾವ್ಯಯಗಳು'** ಎನ್ನುವರು.

  ಉದಾಹರಣೆ :

  ಅವನೇ, ಅದುವೇ, ಅವಳೇ, ನೀನೇ ಅವರೇ

  **ಅದೇ** ನನ್ನ ಪುಸ್ತಕ. ನಾನೇ ಪುಸ್ತಕ ಕೊಟ್ಟೆ.

- **ಕ್ರಿಯಾರ್ಥಕಾವ್ಯಯಗಳು :** ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು **'ಕ್ರಿಯಾರ್ಥಕ ಅವ್ಯಯಗಳು'** ಎನ್ನುವರು.

  ಉದಾಹರಣೆ :

  ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು ಇತ್ಯಾದಿ.

## ಲೇಖನ ಚಿಹ್ನೆಗಳು

- **ಲೇಖನ ಚಿಹ್ನೆಗಳು :** ಸಾಮಾನ್ಯವಾಗಿ ಬರವಣಿಗೆಯಲ್ಲಿ ಸ್ಪಷ್ಟಾರ್ಥ ಸೂಚಿತ ಭಾವಗಳನ್ನು ತಿಳಿಸುವುದಕ್ಕಾಗಿ ಉಚಿತ ಸ್ಥಳದಲ್ಲಿ ಬಳಸುವ ಲಿಖಿತ ಸಂಕೇತಗಳನ್ನು 'ಲೇಖನ ಚಿಹ್ನೆಗಳು' ಎನ್ನುವರು.
- **ಬರವಣಿಗೆಯಲ್ಲಿ ಬಳಸುವ ಲೇಖನ ಚಿಹ್ನೆಗಳು :**

| | |
|---|---|
| 1. ಪೂರ್ಣವಿರಾಮ ಚಿಹ್ನೆ | ( . ) |
| 2. ಅರ್ಧ ವಿರಾಮ ಚಿಹ್ನೆ | ( ; ) |
| 3. ಅಲ್ಪ ವಿರಾಮ ಚಿಹ್ನೆ | ( , ) |
| 4. ಪ್ರಶ್ನಾರ್ಥಕ ಚಿಹ್ನೆ | ( ? ) |
| 5. ಭಾವಸೂಚಕ ಚಿಹ್ನೆ | ( ! ) |
| 6. ವಿವರಣಾತ್ಮಕ ಚಿಹ್ನೆ | ( :- / : ) |
| 7. ಉದ್ಧರಣ ಚಿಹ್ನೆ | ( “ ” ) |
| 8. ವಾಕ್ಯವೇಷ್ಟನ ಚಿಹ್ನೆ | ( ‘ ’ ) |
| 9. ಆವರಣ ಚಿಹ್ನೆ | ( ) |

- **ಪೂರ್ಣವಿರಾಮ ಚಿಹ್ನೆ :** ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ 'ಪೂರ್ಣವಿರಾಮ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :** ಭೀಮನು ದುಷ್ಟನಾದ ಬಕನನ್ನು ಕೊಂದನು.
- **ಅರ್ಧವಿರಾಮ ಚಿಹ್ನೆ :** ಅನೇಕ ಉಪ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ 'ಅರ್ಧವಿರಾಮ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.
- **ಅಲ್ಪವಿರಾಮ ಚಿಹ್ನೆ :** ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ 'ಅಲ್ಪವಿರಾಮ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :**
  ಬಟ್ಟೆ ಗಿರಣಿ, ರಟ್ಟು, ಪೆನ್ಸಿಲ್, ಬೆಂಕಿ ಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.
- **ಪ್ರಶ್ನಾರ್ಥಕ ಚಿಹ್ನೆ :** ಪ್ರಶ್ನೆಗಳನ್ನು ಕೇಳುವ ಸಂದರ್ಭದಲ್ಲಿ ಪದ ಅಥವಾ ವಾಕ್ಯದ ಅಂತ್ಯದಲ್ಲಿ 'ಪ್ರಶ್ನಾರ್ಥಕ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :** ದಯವಿಟ್ಟು ಕುಳಿತು ಕೊಳ್ಳಿ, ನಿಮಗೆ ಏನಾಗಬೇಕು?
- **ಭಾವಸೂಚಕ ಚಿಹ್ನೆ:** ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ 'ಭಾವಸೂಚಕ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :** ಅಯ್ಯೋ ! ಹೀಗಾಗಬಾರದಿತ್ತು !
- **ವಿವರಣಾತ್ಮಕ ಚಿಹ್ನೆ :** ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ 'ವಿವರಣಾತ್ಮಕ'ಚಿಹ್ನೆಯನ್ನು ಬಳಸಬೇಕು.
  ಉದಾಹರಣೆ : ಭಾಷಾವಿಜ್ಞಾನ : ಭಾಷೆಯ ವೈಜ್ಞಾನಿಕ ಅಧ್ಯಯನ.
- **ಉದ್ಧರಣ ಚಿಹ್ನೆ :** ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ 'ಉದ್ಧರಣ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :** “ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು” ಎಂದು ಸರ್. ಎಂ. ವಿಶ್ವೇಶ್ವರಯ್ಯ ಅವರು ಹೇಳಿದರು.

- **ವಾಕ್ಯವೇಷ್ಟನ ಚಿಹ್ನೆ :** ಬರೆವಣಿಗೆಯಲ್ಲಿ ಪಾರಿಭಾಷಿಕ ಪದ / ಪ್ರಧಾನ / ವಿಶಿಷ್ಟ / ಅನ್ಯಭಾಷೆಯ ಪದಗಳನ್ನು ಬಳಸುವ ಸಂದರ್ಭದಲ್ಲಿ 'ವಾಕ್ಯವೇಷ್ಟನ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :** ಕನ್ನಡದಲ್ಲಿ 'ಇಂಗ್ಲೀಷ್', 'ಪರ್ಷಿಯನ್', 'ಪೋರ್ಚುಗೀಸ್ ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.
- **ಆವರಣ ಚಿಹ್ನೆ :** ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ 'ಆವರಣ ಚಿಹ್ನೆ'ಯನ್ನು ಬಳಸಬೇಕು.
  **ಉದಾಹರಣೆ :** ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್), ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

## ವಾಕ್ಯ ಪ್ರಕಾರಗಳು

- **ವಾಕ್ಯ :** ಪದಗಳ ಕ್ರಮವರಿತ, ಪೂರ್ಣ ಅರ್ಥಕೊಡುವ ಸಂಯೋಜಿತ ರಚನೆಯೇ **ವಾಕ್ಯ.** ನಿಶ್ಚಿತ, ಸ್ಪಷ್ಟ, ಪೂರ್ಣ ಅರ್ಥ ಕೊಡುವ ವ್ಯಾಕರಣಾತ್ಮಕ ರಚನೆಯೇ **ವಾಕ್ಯ.**

  **ಕರ್ತೃ, ಕರ್ಮ ಮತ್ತು ಕ್ರಿಯಾಪದಗಳಿಂದ ಕೂಡಿರುವ ಪದ ಸಮೂಹವೇ ವಾಕ್ಯ ಎಂದೆನಿಸುವುದು.**

  **ಉದಾಹರಣೆ :**

  1. ಭೀಮನು ದುಷ್ಟನಾದ ಬಕನನ್ನು ಕೊಂದನು.
  2. ಮಹಾಶಕ್ತನಾದ ದೇವರು ಸಮಸ್ತಲೋಕಗಳನ್ನು ಪ್ರೀತಿಯಿಂದ ಕಾಪಾಡುವನು.

  **ಆದರೆ ಕೆಲವೊಮ್ಮೆ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ವಿಶೇಷಣಗಳೂ ಸೇರಿಕೊಂಡು ವಾಕ್ಯರಚನೆಯಾಗುವುದುಂಟು. ಹಾಗೆಯೇ ಕರ್ತೃಪದ ಅಥವಾ ಕರ್ಮಪದ ಅಥವಾ ಕ್ರಿಯಾಪದಗಳು ಇಲ್ಲದೆಯೂ ವಾಕ್ಯ ಪೂರ್ಣ ಅರ್ಥವನ್ನು ಕೊಡುವುದರಿಂದ ಅಂತಹ ಪ್ರಯೋಗವೂ ಇದೆ.**

  ಉದಾಹರಣೆ :

  1. ಈಗ ಬಂದನು. (ಕರ್ತೃಪದ ಇಲ್ಲ)
  2. ಅವನು ಈಗತಾನೆ ತಿಂದನು. (ಕರ್ಮಪದ ಇಲ್ಲ)
  3. ಹುಡುಗ ಬುದ್ಧಿವಂತ. (ಕ್ರಿಯಾಪದ ಇಲ್ಲ)

- ವಾಕ್ಯದಲ್ಲಿ <u>**ಮೂರು**</u> ವಿಧಗಳಿವೆ.

  1. ಸಾಮಾನ್ಯ ವಾಕ್ಯ
  2. ಸಂಯೋಜಿತ ವಾಕ್ಯ (ಸಂಯುಕ್ತ ವಾಕ್ಯ)
  3. ಮಿಶ್ರ ವಾಕ್ಯ.

- **ಸಾಮಾನ್ಯ ವಾಕ್ಯ :** ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ, ಖಚಿತ ಅರ್ಥಕೊಡುವ ವಾಕ್ಯ ರಚನೆಯನ್ನು <u>**'ಸಾಮಾನ್ಯ ವಾಕ್ಯ'**</u> ಎನ್ನುವರು.

  **ಉದಾಹರಣೆ :**

  1. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
  2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
  3. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

  **ಸಾಮಾನ್ಯ ವಾಕ್ಯದಲ್ಲಿ ಒಂದು ಕ್ರಿಯಾಪದ ಮಾತ್ರವಿದ್ದು, ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು.**

  **ಉದಾಹರಣೆ :**

  ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

  **ಈ ವಾಕ್ಯದಲ್ಲಿ ಆಯಿತು ಎಂಬ ಒಂದೇ ಕ್ರಿಯಾಪದವಿದ್ದು, ಹಬ್ಬಿ, ಬೀರಿ ಎಂಬ ಸಾಪೇಕ್ಷ ಕ್ರಿಯಾಪದಗಳು ಮಧ್ಯದಲ್ಲಿ ಬಂದಿವೆ. ಹಾಗಾಗಿ ಇದು ಕೂಡ ಸಾಮಾನ್ಯವಾಕ್ಯವೆಂದೇ ಪರಿಗಣಿಸಲ್ಪಡುತ್ತದೆ.**

- **ಸಂಯೋಜಿತ ವಾಕ್ಯ :** ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು **'ಸಂಯೋಜಿತ ವಾಕ್ಯ'** ಎನಿಸುವುದು.

  **ಉದಾಹರಣೆ:** ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.

  **ಈ ವಾಕ್ಯ ಸಮೂಹದಲ್ಲಿ ಮೂರು ಬೇರೆಬೇರೆ ವಾಕ್ಯಗಳಿವೆ. ಆದರೆ ಈ ವಾಕ್ಯಗಳು ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣವಾಕ್ಯವಾಗಿದೆ.**

- **ಮಿಶ್ರ ವಾಕ್ಯ :** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿ ಪೂರ್ಣ ಅರ್ಥವನ್ನು ಕೊಡುವ ವಾಕ್ಯರಚನೆಯು **'ಮಿಶ್ರವಾಕ್ಯ'** ಎನಿಸುವುದು.

  **ಉದಾಹರಣೆ :**

  ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

  ಇಲ್ಲಿ **'ಅವರು ಬಹುವಾಗಿ ಮರುಗಿದರು'** ಎಂಬ ಪ್ರಧಾನ ವಾಕ್ಯಕ್ಕೆ **1. ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರು. 2. ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲ. –** ಎಂಬ ವಾಕ್ಯಗಳು ಉಪವಾಕ್ಯಗಳಾಗಿ ಸೇರಿಕೊಂಡಿವೆ.

## ಛಂದಸ್ಸು

- **ಛಂದಸ್ಸು :** ಪದ್ಯ ರಚನಾ ವಿನ್ಯಾಸವನ್ನು ತಿಳಿಸುವ ಶಾಸ್ತ್ರವನ್ನು **'ಛಂದಸ್ಸು'** ಎನ್ನುವರು.
- **ಛಂದಸ್ಸಿನಲ್ಲಿರುವ ಪ್ರಮುಖ ನಿಯಮಗಳು :** ಛಂದಸ್ಸಿನಲ್ಲಿ **ಪಾದ, ಪ್ರಾಸ, ಯತಿ, ಗಣ ಎಂಬ ನಾಲ್ಕು ಪ್ರಮುಖ** ನಿಯಮಗಳಿವೆ.
- **ಪಾದ ನಿಯಮ :** ಛಂದಸ್ಸಿನ ನಿಯಮಕ್ಕೆ ಅನುಗುಣವಾಗಿ ಕಾವ್ಯ ರಚಿಸುವಾಗ ಬರೆಯುವ ಪ್ರತಿಯೊಂದು ಪದ್ಯದ ಸಾಲನ್ನು **'ಪಾದ'** ಎನ್ನುವರು.
  ಎರಡು ಸಾಲಿನ ಪದ್ಯವನ್ನು **ದ್ವಿಪದಿ** ಎನ್ನುವರು.
  ಮೂರು ಸಾಲಿನ ಪದ್ಯವನ್ನು **ತ್ರಿಪದಿ** ಎನ್ನುವರು.
  ನಾಲ್ಕು ಸಾಲಿನ ಪದ್ಯವನ್ನು **ಚೌಪದಿ** ಎನ್ನುವರು.
  ಆರು ಸಾಲಿನ ಪದ್ಯವನ್ನು **ಷಟ್ಪದಿ** ಎನ್ನುವರು.
- **ಪ್ರಾಸ :** ಪದ್ಯದ ಪ್ರತಿ ಪಾದದ ಆದಿಯಲ್ಲಿ ಅಥವಾ ಮಧ್ಯದಲ್ಲಿ ಅಥವಾ ಅಂತ್ಯದಲ್ಲಿ ಒಂದು ನಿರ್ದಿಷ್ಟ ವ್ಯಂಜನವು ನಿಯತವಾಗಿ ಪುನರಾವರ್ತನೆಯಾಗಿ ಬಂದರೆ ಅದನ್ನು **'ಪ್ರಾಸ'** ಎನ್ನುವರು.
- **ಪ್ರಾಸದ ವಿಧಗಳು :** ಪ್ರಾಸದಲ್ಲಿ ಆದಿಪ್ರಾಸ, ಮಧ್ಯಪ್ರಾಸ ಹಾಗೂ ಅಂತ್ಯಪ್ರಾಸ ಎಂದು **ಮೂರು** ವಿಧಗಳಿವೆ.
- **ಆದಿ ಪ್ರಾಸ :** ಪದ್ಯದ ಪ್ರತಿ ಪಾದದ ಮೊದಲೆರಡು ಸ್ವರಗಳ ನಡುವೆ ಒಂದು ನಿರ್ದಿಷ್ಟ ವ್ಯಂಜನವು ನಿಯತವಾಗಿ ಪುನರಾವರ್ತನೆಯಾಗಿ ಬಂದರೆ ಅದನ್ನು **'ಆದಿ ಪ್ರಾಸ'** ಎನ್ನುವರು.
  **ಉದಾಹರಣೆ :-**
  ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ/
  ಹಿತವಿರಲಿ ವಚನದಲಿ, ಋತವ ಬಿಡದಿರಲಿ/
  ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ/
  ಅತಿಬೇಡವೆಲ್ಲಿಯುಂ – ಮಂಕುತಿಮ್ಮ//
- **ಆದಿಪ್ರಾಸದಲ್ಲಿ ಆರು ವಿಧಗಳಿವೆ.**
  1. **ಸಿಂಹಪ್ರಾಸ :** ಪ್ರಾಸಾಕ್ಷರದ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಅದು ಸಿಂಹಪ್ರಾಸ.
  2. **ಗಜಪ್ರಾಸ :** ಪ್ರಾಸಾಕ್ಷರದ ಹಿಂದಿನ ಸ್ವರವು ದೀರ್ಘವಾಗಿದ್ದರೆ ಅದು ಗಜಪ್ರಾಸ.
  3. **ವೃಷಭಪ್ರಾಸ :** ಪ್ರಾಸಾಕ್ಷರದ ಹಿಂದೆ ಅನುಸ್ವಾರ ವಿದ್ದರೆ ಅದು ವೃಷಭ ಪ್ರಾಸ.
  4. **ಅಜಪ್ರಾಸ :** ಪ್ರಾಸಾಕ್ಷರದ ಹಿಂದೆ ವಿಸರ್ಗವಿದ್ದರೆ ಅದು ಅಜಪ್ರಾಸ.
  5. **ಶರಭಪ್ರಾಸ :** ಬೇರೆಬೇರೆ ಜಾತಿಯ ಎರಡು ಮೂರು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ ಅದು ಶರಭಪ್ರಾಸ.
  6. **ಹಯಪ್ರಾಸ :** ಒಂದೇ ಜಾತಿಯ ಎರಡು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ ಅದು ಹಯಪ್ರಾಸ.
- **ಮಧ್ಯ ಪ್ರಾಸ (ಒಳಪ್ರಾಸ) :** ಪದ್ಯದ ಪ್ರತಿ ಪಾದದ ಮೊದಲೆರಡು ಸ್ವರಗಳ ನಡುವೆ ಬಂದ ನಿರ್ದಿಷ್ಟ ವ್ಯಂಜನವು ಅದೇ ಪಾದದ ಮಧ್ಯ ಭಾಗದಲ್ಲಿ ನಿಯತವಾಗಿ ಪುನರಾವರ್ತನೆಯಾಗಿ ಬಂದರೆ ಅದನ್ನು **'ಮಧ್ಯ ಪ್ರಾಸ' (ಒಳಪ್ರಾಸ)** ಎನ್ನುವರು.
  **ಉದಾಹರಣೆ :-**
  ಸಾಧುಗೆ ಸಾಧು ಮಾಧುರ್ಯನ್ಗೆ ಮಾಧುರ್ಯಂ
  ಬಾಧಿಪ್ಪ ಕಲಿಗೆ ಕಲಿಯುಗ /ವಿಪರೀತನ್/
  ಮಾಧವನೀತನ್ ಪೆರನಲ್ಲ//

➢ **ಅಂತ್ಯ ಪ್ರಾಸ :** ಪದ್ಯದ ಪ್ರತಿ ಪಾದದ ಕೊನೆಯೆರಡು ಅಕ್ಷರಗಳು ಒಂದು ನಿರ್ದಿಷ್ಟ ವ್ಯಂಜನ ಸಹಿತ ಸ್ವರದಿಂದ ಕೂಡಿ ಪುನರಾವರ್ತನೆಯಾಗಿ ಬಂದರೆ ಅದನ್ನು **'ಅಂತ್ಯ ಪ್ರಾಸ'** ಎನ್ನುವರು.

**ಉದಾಹರಣೆ :**

ಅಲರೊಳಡಗಿದ ಪರಿಮಳ**ದಂತೆ,**
ಪತಂಗದೊಳಡಗಿದ ಅನಲ**ನಂತೆ,**
ಶಶಿಯೊಳಡಗಿದ ಷೋಡಶಕಳೆ**ಯಂತೆ,**
ಉಲುಹಡಗಿದ ವಾಯುವಿ**ನಂತೆ,**
ಸಿಡಿಲೊಳಡಗಿದ ಗಾತ್ರದ ತೇಜ**ದಂತೆ,**
ಇರಬೇಕಯ್ಯಾ ಯೋಗ, ಎನ್ನ ಅಜಗಣ್ಣತಂದೆ**ಯಂತೆ.**

➢ **ಯತಿ :** ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸುವ ತಾಣಕ್ಕೆ **'ಯತಿ'** ಎನ್ನುವರು.

➢ **ಗಣ :** ಗಣ ಎಂದರೆ ಗುಂಪು. ಛಂದಸ್ಸಿನಲ್ಲಿ ಪದ್ಯದ ಪ್ರತಿಪಾದಕ್ಕೆ ಪ್ರಸ್ತಾರ ಹಾಕಿ, ನಿರ್ದಿಷ್ಟ ಸಂಖ್ಯೆಗೆ ಅನುಗುಣವಾಗಿ ಅಕ್ಷರಗಳ ಅಥವಾ ಮಾತ್ರೆಗಳ ಅಥವಾ ಅಂಶಗಳ ಆಧಾರದ ಮೇಲೆ ಮಾಡಿದ ಗುಂಪನ್ನು **'ಗಣ'** ಎನ್ನುವರು.

➢ **ಪ್ರಸ್ತಾರ :** ಛಂದಸ್ಸಿನಲ್ಲಿ ಪದ್ಯದ ಪ್ರತಿಪಾದದಲ್ಲಿರುವ ಅಕ್ಷರಗಳಿಗೆ ಲಘು ಅಥವಾ ಗುರು ಚಿಹ್ನೆಯನ್ನು ಹಾಕಿ ಗುರುತಿಸುವ ಕ್ರಿಯೆಯನ್ನು **'ಪ್ರಸ್ತಾರ ಹಾಕುವುದು'** ಎನ್ನುವರು.

➢ **ಲಘು :** ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರವನ್ನು **'ಲಘು'** ಎನ್ನುವರು.

➢ **ಲಘು ಚಿಹ್ನೆಯಿಂದ ಗುರುತಿಸಲ್ಪಡುವ ಅಕ್ಷರಗಳು :** ಹ್ರಸ್ವ ಸ್ವರಾಕ್ಷರವನ್ನು ಅಥವಾ ಹ್ರಸ್ವ ಸ್ವರದಿಂದ ಕೂಡಿದ ವ್ಯಂಜನಾಕ್ಷರವನ್ನು ಲಘು ಚಿಹ್ನೆಯಿಂದ ಗುರುತಿಸಲಾಗುತ್ತದೆ.

U U U U U U
ಹ್ರಸ್ವ ಸ್ವರಾಕ್ಷರಗಳು = ಅ ಇ ಉ ಋ ಎ ಒ

U U U U U U
ಹ್ರಸ್ವ ಸ್ವರದಿಂದ ಕೂಡಿದ ವ್ಯಂಜನಾಕ್ಷರಗಳು = ಕ ಕಿ ಕು ಕೃ ಕೆ ಕೊ

➢ **ಗುರು :** ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರವನ್ನು **'ಗುರು'** ಎನ್ನುವರು.

➢ **ಗುರು ಚಿಹ್ನೆಯಿಂದ ಗುರುತಿಸಲ್ಪಡುವ ಅಕ್ಷರಗಳು :**

* ದೀರ್ಘ ಸ್ವರಾಕ್ಷರಗಳು ಅಥವಾ ದೀರ್ಘ ಸ್ವರದಿಂದ ಕೂಡಿದ ವ್ಯಂಜನಾಕ್ಷರಗಳನ್ನು ಗುರು ಚಿಹ್ನೆಯಿಂದ ಗುರುತಿಸಲಾಗುತ್ತದೆ.

— — — — — — —
ದೀರ್ಘ ಸ್ವರಾಕ್ಷರಗಳು = ಆ ಈ ಊ ಏ ಐ ಓ ಔ

— — — — — — —
ದೀರ್ಘ ಸ್ವರದಿಂದ ಕೂಡಿದ ವ್ಯಂಜನಾಕ್ಷರಗಳು = ಕಾ ಕೀ ಕೂ ಕೇ ಕೈ ಕೋ ಕೌ

* ಸಂಯುಕ್ತಾಕ್ಷರದ ಹಿಂದಿನ ಅಕ್ಷರವನ್ನು ಗುರು ಚಿಹ್ನೆಯಿಂದ ಗುರುತಿಸಲಾಗುತ್ತದೆ.
ವಿಕಲ್ಪವಾಗಿ ಶಿಥಿಲದ್ವಿತ್ವವುಳ್ಳ ಪದ ಅಥವಾ ಪದದ ಆದಿಯಲ್ಲಿ ಬರುವ ಸಂಯುಕ್ತಾಕ್ಷರದ ಹಿಂದಿನ ಅಕ್ಷರವನ್ನು ಗುರು ಚಿಹ್ನೆಯಿಂದ ಗುರುತಿಸಲಾಗುವುದಿಲ್ಲ.

— U — U — U — U
**ಅಕ್ಕ ಚಂದ್ರ ಸೂರ್ಯ ಗಾತ್ರ**

* ಅನುಸ್ವಾರ ಅಥವಾ ವಿಸರ್ಗದಿಂದ ಕುಡಿದ ಅಕ್ಷರಗಳನ್ನು ಗುರು ಚಿಹ್ನೆಯಿಂದ ಗುರುತಿಸಲಾಗುತ್ತದೆ.

—      —    —        —
**ಮಂ**ದಾರ    **ದುಃ**ಖ ಬಂದನು    **ಬಾಂ**ದಳ

* ಸ್ವರ ರಹಿತ ವ್ಯಂಜನಾಕ್ಷರದಿಂದ ಕೂಡಿದ ಅಕ್ಷರಗಳನ್ನು ಗುರು ಚಿಹ್ನೆಯಿಂದ ಗುರುತಿಸಲಾಗುತ್ತದೆ.

—      —
ಮನ**ದೊಳ್**  ಗಾಂಡೀವಿ**ಯೊಳ್**

* ಷಟ್ಪದಿಯ ಮೂರನೇ ಮತ್ತು ಆರನೇ ಪಾದದ ಕೊನೆಯ ಅಕ್ಷರವು ಹ್ರಸ್ವಸ್ವರಾಕ್ಷರ ಅಥವಾ ಹ್ರಸ್ವ ಸ್ವರದಿಂದ ಕೂಡಿದ ವ್ಯಂಜನಾಕ್ಷರವಾಗಿದ್ದರೂ ಗುರು ಚಿಹ್ನೆಯಿಂದ ಗುರುತಿಸಲಾಗುತ್ತದೆ.

➢ ಛಂದಸ್ಸಿನಲ್ಲಿ **ಮೂರು** ವಿಧದ ಗಣಗಳಿವೆ.
1. ಅಕ್ಷರ ಗಣ   2. ಮಾತ್ರಾ ಗಣ   3. ಅಂಶ ಗಣ

➢ **ಅಕ್ಷರ ಗಣದ ಲಕ್ಷಣ :** ಪದ್ಯದ ಪ್ರತಿಪಾದದಲ್ಲಿರುವ ಅಕ್ಷರಗಳನ್ನು ಮೂರು ಮೂರು ಅಕ್ಷರಗಳ ಒಂದೊಂದು ಗುಂಪಾಗಿ ವಿಂಗಡಿಸುವುದನ್ನು **'ಅಕ್ಷರ ಗಣ'** ಎನ್ನುವರು.

➢ ಅಕ್ಷರ ಗಣದಲ್ಲಿ **8** ವಿಧದ ಗಣಗಳಿವೆ.
ಯಮಾತಾರಾಜಭಾನಸಲಗಂ – ಸೂತ್ರದ ಆಧಾರದಿಂದ ಹೀಗೆ ವಿಂಗಡಿಸಲಾಗಿದೆ.

| | | | | |
|---|---|---|---|---|
| 1. ಯಗಣ | = | ಯಮಾತಾ | = | ∪ — — |
| 2. ಮಗಣ | = | ಮಾತಾರಾ | = | — — — |
| 3. ತಗಣ | = | ತಾರಾಜ | = | — — ∪ |
| 4. ರಗಣ | = | ರಾಜಭಾ | = | — ∪ — |
| 5. ಜಗಣ | = | ಜಭಾನ | = | ∪ — ∪ |
| 6. ಭಗಣ | = | ಭಾನಸ | = | — ∪ ∪ |
| 7. ನಗಣ | = | ನಸಲ | = | ∪ ∪ ∪ |
| 8. ಸಗಣ | = | ಸಲಗಂ | = | ∪ ∪ — |
| ಲ | = | ಲಘು | = | ∪ |
| ಗಂ | = | ಗುರು | = | — |

ನಾಗವರ್ಮನು ಛಂದೋಂಬುಧಿಯಲ್ಲಿ ಅಕ್ಷರ ಗಣದ **8** ಗಣಗಳನ್ನು ಗುರುತಿಸಲು ಕೆಳಗಿನ ಪದ್ಯವನ್ನು ರಚಿಸಿದ್ದಾನೆ.

ಗುರು ಲಘು ಮೂರಿರೆ ಮ – ನ – ಗಣ
ಗುರು ಲಘು ಮೊದಲಲ್ಲಿ ಬರಲು ಭ – ಯ – ಗಣಮೆಂಬರ್
ಗುರು ಲಘು ನಡುವಿರೆ ಜ – ರ ಗಣ
ಗುರು ಲಘು ಕೊನೆಯಲ್ಲಿ ಬರಲು ಸ – ತ – ಗಣಮಕ್ಕುಂ

1. ಗುರು ಮೂರಿರೆ **ಮಗಣ**    2. ಲಘು ಮೂರಿರೆ **ನಗಣ**
3. ಗುರು ಮೊದಲಲ್ಲಿ ಬರಲು **ಭಗಣ**    4. ಲಘು ಮೊದಲಲ್ಲಿ ಬರಲು **ಯಗಣ**
5. ಗುರು ನಡುವಿರೆ **ಜಗಣ**    6. ಲಘು ನಡುವಿರೆ **ರಗಣ**
7. ಗುರು ಕೊನೆಯಲ್ಲಿ ಬರಲು **ಸಗಣ**    8. ಲಘು ಕೊನೆಯಲ್ಲಿ ಬರಲು **ತಗಣ**

➢ **ಮಾತ್ರಾ ಗಣ :** ಮಾತ್ರೆಗಳ ಲೆಕ್ಕಾಚಾರದೊಂದಿಗೆ ವಿಭಾಗಿಸಲ್ಪಡುವ ಗಣವನ್ನು ಮಾತ್ರಾಗಣ ಎನ್ನುವರು.

➢ **ಅಂಶಗಣ :** ಅಂಶಗಳ ಆಧಾರದಿಂದ ವಿಭಾಗಿಸಲ್ಪಡುವ ಗಣವನ್ನು ಅಂಶಗಣ ಎನ್ನುವರು. ಅಂಶಗಣದಲ್ಲಿ ಬ್ರಹ್ಮ, ವಿಷ್ಣು ಮತ್ತು ಶಿವ ಎಂಬ ಮೂರು ವಿಧದ ಗಣಗಳಿವೆ.

## ವೃತ್ತಪದ್ಯದಲ್ಲಿ ರಚಿತವಾಗುವ ಪದ್ಯಗಳು

➢ **ವೃತ್ತ ಪದ್ಯದ ಲಕ್ಷಣ :** ಅಕ್ಷರ ಗಣದಲ್ಲಿ ರಚಿತವಾಗುವ ಪದ್ಯಗಳಿಗೆ 'ವೃತ್ತ ಪದ್ಯ' ಎನ್ನುವರು. ವೃತ್ತ ಪದ್ಯದಲ್ಲಿ ನಾಲ್ಕು ಸಮ ಪಾದಗಳಿರುತ್ತವೆ. ಮೊದಲ ಪಾದದಲ್ಲಿರುವ ಗಣ ವಿನ್ಯಾಸವೇ ಉಳಿದ ಮೂರು ಪಾದಗಳಲ್ಲಿರುತ್ತದೆ. ಆದಿ ಪ್ರಾಸವಿರುತ್ತದೆ.

➢ **ಕನ್ನಡದಲ್ಲಿ ಪ್ರಸಿದ್ಧವಾಗಿರುವ ಖ್ಯಾತ ಕರ್ನಾಟಕ ವೃತ್ತ ಪದ್ಯಗಳು**

1. ಉತ್ಪಲಮಾಲಾ ವೃತ್ತ
2. ಚಂಪಕಮಾಲಾ ವೃತ್ತ
3. ಮತ್ತೇಭ ವಿಕ್ರೀಡಿತ ವೃತ್ತ
4. ಶಾರ್ದೂಲ ವಿಕ್ರೀಡಿತ ವೃತ್ತ
5. ಸ್ರಗ್ಧರಾ ವೃತ್ತ
6. ಮಹಾಸ್ರಗ್ಧರಾ ವೃತ್ತ

ನಾಗವರ್ಮನು ಛಂದೋಂಬುಧಿಯಲ್ಲಿ ಖ್ಯಾತ ಕರ್ನಾಟಕ ವೃತ್ತ ಪದ್ಯಗಳ ಲಕ್ಷಣವನ್ನು ತಿಳಿಸಲು ಕೆಳಗಿನ ಪದ್ಯವನ್ನು ರಚಿಸಿದ್ದಾನೆ.

**ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ**
**ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರು ದ್ವಂದ್ವಮಾ**
**ಗಿರೆ ಮತ್ತೇಭ ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ**
**ಹರಿಣಾಕ್ಷೀ, ಲಘುನಾಲ್ಕು ಚಂಪಕಮಿವಾರುಂ ಖ್ಯಾತ ಕರ್ನಾಟಕಂ**

**1. ಗುರುವೊಂದಾದಿಯೊಳುತ್ಪಲಂ** = ( — ᴗᴗ )
ಮೊದಲನೆ ಅಕ್ಷರವು ಗುರುವಾಗಿದ್ದರೆ (ನಂತರದ ಎರಡು ಅಕ್ಷರಗಳು ಲಘುಗಳು) ಅದನ್ನು **'ಉತ್ಪಲಮಾಲಾ ವೃತ್ತ'** ಎನ್ನುವರು.

**2. ಗುರು ಮೊದಲ್ ಮೂರಾಗೆ ಶಾರ್ದೂಲಮ್** = ( — — — , ᴗ ᴗ— )
ಮೊದಲ ಮೂರು ಅಕ್ಷರಗಳು ಗುರುವಾಗಿದ್ದರೆ (ನಂತರದ ಎರಡು ಅಕ್ಷರಗಳು ಲಘು) ಅದನ್ನು **'ಶಾರ್ದೂಲ ವಿಕ್ರೀಡಿತ ವೃತ್ತ'** ಎನ್ನುವರು.

**3. ಆ ಗುರುನಾಲ್ಕಾಗಿರಲಂತು ಸ್ರಗ್ಧರೆ** = ( — — —, — ᴗ— )
ಮೊದಲ ನಾಲ್ಕು ಅಕ್ಷರಗಳು ಗುರುವಾಗಿದ್ದರೆ (ನಂತರದ ಅಕ್ಷರವು ಲಘು) ಅದನ್ನು 'ಸ್ರಗ್ಧರಾ ವೃತ್ತ' ಎನ್ನುವರು.

**4. ಲಘು ದ್ವಂದ್ವಂ ಗುರು ದ್ವಂದ್ವಮಾಗಿರೆ ಮತ್ತೇಭ** = ( ᴗᴗ—, — ᴗ ᴗ )
ಮೊದಲ ಎರಡು ಅಕ್ಷರಗಳು ಲಘುವಾಗಿದ್ದು ಹಾಗೂ ಎರಡು ಅಕ್ಷರಗಳು ಗುರುವಾಗಿದ್ದರೆ (ಆನಂತರದ ಎರಡು ಅಕ್ಷರಗಳು ಲಘು) ಅದನ್ನು **'ಮತ್ತೇಭ ವಿಕ್ರೀಡಿತ ವೃತ್ತ'** ಎನ್ನುವರು.

**5. ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ** = ( ᴗᴗ—, — — ᴗ )
ಮೊದಲ ಎರಡು ಅಕ್ಷರಗಳು ಲಘುವಾಗಿದ್ದು, ನಂತರದ ಮೂರು ಅಕ್ಷರಗಳು ಗುರುವಾಗಿದ್ದರೆ (ಆನಂತರದ ಅಕ್ಷರವು ಲಘು) ಅದನ್ನು **'ಮಹಾ ಸ್ರಗ್ಧರಾ ವೃತ್ತ'** ಎನ್ನುವರು.

**6. ಲಘುನಾಲ್ಕು ಚಂಪಕಮ್** = ( ᴗᴗᴗ, ᴗ— ᴗ )
ಮೊದಲ ನಾಲ್ಕು ಅಕ್ಷರಗಳು ಲಘುವಾಗಿದ್ದರೆ (ನಂತರದ ಅಕ್ಷರ ಗುರು) ಅದನ್ನು **'ಚಂಪಕಮಾಲಾ ವೃತ್ತ'** ಎನ್ನುವರು.
**ಹರಿಣಾಕ್ಷಿ ಇವಾರು ಖ್ಯಾತ ಕರ್ನಾಟಕಂ** = ಹರಿಣಾಕ್ಷಿ ಈ ಆರು ವೃತ್ತಗಳನ್ನು **'ಖ್ಯಾತ ಕರ್ನಾಟಕ ವೃತ್ತಗಳು'** ಎನ್ನುವರು.

➢ **ಮತ್ತೇಭ ವಿಕ್ರೀಡಿತ ವೃತ್ತದ ಲಕ್ಷಣ ತಿಳಿಸಿ.**

**ಸೂತ್ರ :– ಸಭರಂನಂಮಯಲಂಗಮುಂ ಬಗೆಗೊಳಲ್ ಮತ್ತೇಭ ವಿಕ್ರೀಡಿತಂ**

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| ᑌᑌ— | — ᑌ ᑌ | — ᑌ — | ᑌᑌ ᑌ | — — — | ᑌ— — | ᑌ— |
| ಸಭರಂ | ನಂಮಯ | ಲಂಗಮುಂ | ಬಗೆಗೊ | ಳಲ್‌ಮತ್ತೇ | ಭವಿಕ್ರೀ | ಡಿತಂ |

➢ **ಲಕ್ಷಣ :** ಮತ್ತೇಭ ವಿಕ್ರೀಡಿತ ವೃತ್ತದಲ್ಲಿ ನಾಲ್ಕು ಸಮ ಪಾದಗಳಿರುತ್ತವೆ. ಪ್ರತಿ ಪಾದದಲ್ಲಿಯೂ 20 ಅಕ್ಷರಗಳಿರುತ್ತವೆ. ಪ್ರತಿ ಪಾದದಲ್ಲಿಯೂ ಸ, ಭ, ರ, ನ, ಮ, ಯ ಎಂಬ ಆರು ಗಣಗಳು ಹಾಗೂ ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಇರುತ್ತದೆ.

ಉದಾಹರಣೆ : ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸೆಜ್

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| ᑌᑌ — | — ᑌ ᑌ | — ᑌ — | ᑌᑌ ᑌ | — — — | ᑌ — — | ᑌ — |
| ಕೆರೆಯಂ | ಕಟ್ಟಿಸು | ಬಾವಿಯಂ | ಸವೆಸು | ದೇವಾಗಾ | ರಮಂ ಮಾ | ಡಿಸಜ್ |

ಈ ಮೇಲಿನ ಪದ್ಯವು ಅಕ್ಷರ ಗಣದ **'ಮತ್ತೇಭ ವಿಕ್ರೀಡಿತ ವೃತ್ತ'**ದಲ್ಲಿ ರಚಿತವಾಗಿದೆ.

➢ **ಚಂಪಕಮಾಲಾ ವೃತ್ತದ ಲಕ್ಷಣ ತಿಳಿಸಿ.**

**ಸೂತ್ರ :– ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ᑌᑌᑌ | ᑌ— ᑌ | — ᑌᑌ | ᑌ— ᑌ | ᑌ— ᑌ | ᑌ— ᑌ | — ᑌ— |
| **ನಜಭ** | **ಜಜಂಜ** | **ರಂ ಬಗೆ** | **ಗೊಳುತ್ತಿ** | **ರೆಚಂಪ** | **ಕಮಾಲೆ** | **ಯೆಂದಪರ್** |

➢ **ಲಕ್ಷಣ :** ಚಂಪಕಮಾಲಾ ವೃತ್ತದಲ್ಲಿ ನಾಲ್ಕು ಸಮ ಪಾದಗಳಿರುತ್ತವೆ. ಇದರ ಪ್ರತಿ ಪಾದದಲ್ಲಿಯೂ 21 ಅಕ್ಷರಗಳು ಇರುತ್ತವೆ. ಇದರ ಪ್ರತಿ ಪಾದದಲ್ಲಿಯೂ ನ, ಜ, ಭ, ಜ, ಜ, ಜ, ರ ಎಂಬ ಏಳು ಗಣಗಳು ಇರುತ್ತವೆ.

ಉದಾಹರಣೆ : ಎನೆನಸುನಕ್ಕು ಮಾರರಿಪುವಾತನ ಧೈರ್ಯಮನಾತನೇಳ್ಗೆವೆತ್

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ᑌᑌᑌ | ᑌ— ᑌ | — ᑌᑌ | ᑌ— ᑌ | ᑌ— ᑌ | ᑌ— ᑌ | — ᑌ — |
| **ಎನೆನ** | **ಸುನಕ್ಕು** | **ಮಾರರಿ** | **ಪುವಾತ** | **ನ ಧೈರ್ಯ** | **ಮನಾತ** | **ನೇಳ್ಗೆವೆತ್** |

ಈ ಮೇಲಿನ ಪದ್ಯವು ಅಕ್ಷರ ಗಣದ **'ಚಂಪಕ ಮಾಲಾ ವೃತ್ತ'**ದಲ್ಲಿ ರಚಿತವಾಗಿದೆ.

➢ **ಉತ್ಪಲಮಾಲಾ ವೃತ್ತದ ಲಕ್ಷಣ ತಿಳಿಸಿ.**

**ಸೂತ್ರ :– ಉತ್ಪಲಮಾಲೆಯಪ್ಪುದು ಭರಂನಭಭಂರಲಗಂ ನೆಗಳ್ದಿರಲ್**

| **ಭ** | **ರ** | **ನ** | **ಭ** | **ಭ** | **ರ** | **ಲ ಗು** |
|---|---|---|---|---|---|---|
| — ᑌᑌ | — ᑌ— | ᑌ ᑌ ᑌ | — ᑌᑌ | — ᑌᑌ | — ᑌ— | ᑌ — |
| **ಉ ತ್ಪಲ** | **ಮಾಲೆಯ** | **ಪ್ಪುದುಭ** | **ರಂ ನಭ** | **ಭಂ ರಲ** | **ಗಂ ನೆ ಗ** | **ಳ್ದಿ ರಲ್** |

- **ಲಕ್ಷಣ :** ಉತ್ಪಲಮಾಲಾ ವೃತ್ತದಲ್ಲಿ ನಾಲ್ಕು ಸಮ ಪಾದಗಳಿರುತ್ತವೆ. ಇದರ ಪ್ರತಿ ಪಾದದಲ್ಲಿಯೂ 20 ಅಕ್ಷರಗಳಿರುತ್ತವೆ. ಇದರ ಪ್ರತಿ ಪಾದದಲ್ಲಿಯೂ ಭ, ರ, ನ, ಭ, ಭ, ರ ಎಂಬ ಆರು ಗಣಗಳು ಹಾಗೂ ಒಂದು ಲಘು ಮತ್ತು ಒಂದು ಗುರು ಇರುತ್ತವೆ.

**ಉದಾ : ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗಳ್**

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ᴗᴗ | — ᴗ — | ᴗ ᴗ ᴗ | — ᴗᴗ | — ᴗᴗ | — ᴗ — | ᴗ — |
| ಚಾಗದ | ಭೋಗದ | ಕ್ಕರದ | ಗೇಯದ | ಗೊಟ್ಟಿಯ | ಲಂಪಿನಿಂ | ಪುಗಳ್ |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಮಾಲಾ ವೃತ್ತ'ದಲ್ಲಿ ರಚಿತವಾಗಿದೆ.**

**ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಮಾಲಾ ವೃತ್ತ'ದಲ್ಲಿ ರಚಿತವಾಗಿದೆ.**

- **ಸ್ರಗ್ಧರಾ ವೃತ್ತದ ಲಕ್ಷಣ ತಿಳಿಸಿ.**

**ಸೂತ್ರ :– ತೋರಲ್ ಮಂರಂಭನಂ ಮೂಯಗಣಮುಮದೆ ತಾಂ ಸ್ರಗ್ಧರಾವೃತ್ತಮಕ್ಕುಂ**

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| — — — | — ᴗ— | — ᴗ ᴗ | ᴗ ᴗ ᴗ | ᴗ— — | ᴗ— — | ᴗ— — |
| ತೋರಲ್ಮಂ | ರಂಭನಂ | ಮೂಯಗ | ಣಮುಮ | ದೆತಾಂಸ್ರ | ಗ್ಧರಾವೃ | ತ್ತಮಕ್ಕುಂ |

- **ಲಕ್ಷಣ : ಸ್ರಗ್ಧರಾ** ವೃತ್ತದಲ್ಲಿ ನಾಲ್ಕು ಸಮ ಪಾದಗಳಿರುತ್ತವೆ. ಪ್ರತಿ ಪಾದದಲ್ಲಿಯೂ 21 ಅಕ್ಷರಗಳಿರುತ್ತವೆ. ಪ್ರತಿ ಪಾದದಲ್ಲಿಯೂ ಮ, ರ, ಭ, ನ, ಯ, ಯ, ಯ ಎಂಬ ಏಳು ಗಣಗಳು ಇರುತ್ತದೆ.

**ಉದಾಹರಣೆ : ಸೂಳೈಸೆಚ್ಚೆಚ್ಚು ಬಿಲ್ಲಂ ರಥದ ಕುದುರೆಯಂ ಸೂತನಂ ಖಂಡಿಸುತ್ತಾ**

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| — — — | — ᴗ— | — ᴗᴗ | ᴗ ᴗ ᴗ | ᴗ — — | ᴗ— — | ᴗ — — |
| ಸೂಳೈಸೆ | ಚ್ಚೆಚ್ಚುಬಿ | ಲ್ಲಂರಥ | ದಕುದು | ರೆಯಂಸೂ | ತನಂಖಂ | ಖಸುತ್ತಾ |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಸ್ರಗ್ಧರಾ ವೃತ್ತ'ದಲ್ಲಿ ರಚಿತವಾಗಿದೆ.**

- **ಮಹಾಸ್ರಗ್ಧರಾ ವೃತ್ತದ ಲಕ್ಷಣ ತಿಳಿಸಿ.**

**ಸೂತ್ರ :– ಸತತಂ ನಂಸಂರರಂಗಂ ನೆರೆದೆಸೆಯೆ ಮಹಾ ಸ್ರಗ್ಧರಾವೃತ್ತಮಕ್ಕುಂ**

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ᴗᴗ— | — —ᴗ | — — ᴗ | ᴗᴗᴗ | ᴗ ᴗ — | — ᴗ— | — ᴗ— | — |
| ಸತತಂ | ನಂಸಂರ | ರಂಗಂನೆ | ರೆದೆಸೆ | ಯೆಮಹಾ | ಸ್ರಗ್ಧರಾ | ವೃತ್ತಮ | ಕ್ಕುಂ |

- **ಲಕ್ಷಣ : ಮಹಾ ಸ್ರಗ್ಧರಾ** ವೃತ್ತದಲ್ಲಿ ನಾಲ್ಕು ಸಮ ಪಾದಗಳಿರುತ್ತವೆ. ಪ್ರತಿ ಪಾದದಲ್ಲಿಯೂ 22 ಅಕ್ಷರಗಳಿರುತ್ತವೆ. ಪ್ರತಿ ಪಾದದಲ್ಲಿಯೂ ಸ, ತ, ತ, ನ, ಸ, ರ, ರ, ಎಂಬ ಏಳು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರು ಇರುತ್ತದೆ.

**ಉದಾಹರಣೆ : ಇದು ಚಕ್ರವ್ಯೂಹಮೀವ್ಯೂಹಮನೊಡೆವದಟಂ ಪಾರ್ಥನಂ ತಾತನುಂ ಗೆಂ**

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ᴗᴗ— | — —ᴗ | — — ᴗ | ᴗ ᴗ ᴗ | ᴗ ᴗ — | — ᴗ — | — ᴗ — | — |
| ಇದುಚ | ಕ್ರವ್ಯೂಹ | ಮೀವ್ಯೂಹ | ಮನೊಡೆ | ವದಟಂ | ಪಾರ್ಥನಂ | ತಾತನುಂ | ಗೆಂ |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಮಹಾಸ್ರಗ್ಧರಾ ವೃತ್ತ'ದಲ್ಲಿ ರಚಿತವಾಗಿದೆ.**

- **ಶಾರ್ದೂಲ ವಿಕ್ರೀಡಿತ ವೃತ್ತದ ಲಕ್ಷಣ ತಿಳಿಸಿ.**

**ಸೂತ್ರ :– ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ**

| ಮ | ಸ | ಜ | ಸ | ತ | ತ | ಗು |
|---|---|---|---|---|---|---|
| — — — | ᴗ ᴗ — | ᴗ — ᴗ | ᴗ ᴗ — | — — ᴗ | — — ᴗ | — |
| ಕಣ್ಗೊಪ್ಪಲ್ | ಮಸಜಂ | ಸತಂತ | ಗಮುಮಾ | ಶಾರ್ದೂಲ | ವಿ ಕ್ರೀ ಡಿ | ತಂ |

- **ಲಕ್ಷಣ :** ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ನಾಲ್ಕು ಸಮ ಪಾದಗಳಿರುತ್ತವೆ. ಪ್ರತಿ ಪಾದದಲ್ಲಿಯೂ 19 ಅಕ್ಷರಗಳಿರುತ್ತವೆ. ಪ್ರತಿ ಪಾದದಲ್ಲಿಯೂ ಮ, ಸ, ಜ, ಸ, ತ, ತ ಎಂಬ ಆರು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರು ಇರುತ್ತದೆ.

**ಉದಾಹರಣೆ : ಮಾತಂಗಾಸುರ ವೈರಿಯಲ್ಲಿ ಪಡೆದುಂ ಬಿಲ್ಲಂ ಧನುರ್ವಿದ್ಯೆ ಗಂ**

| ಮ | ಸ | ಜ | ಸ | ತ | ತ | ಗು |
|---|---|---|---|---|---|---|
| — — — | ᴗ ᴗ — | ᴗ — ᴗ | ᴗ ᴗ — | — — ᴗ | — — ᴗ | — |
| ಮಾತಂಗಾ | ಸುರವೈ | ರಿಯಲ್ಲಿ | ಪಡೆದುಂ | ಬಿಲ್ಲಂಧ | ನುರ್ವಿದ್ಯೆ | ಗಂ |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಶಾರ್ದೂಲ ವಿಕ್ರೀಡಿತ ವೃತ್ತ'ದಲ್ಲಿ ರಚಿತವಾಗಿದೆ.**

## ಮಾತ್ರಾಗಣದಲ್ಲಿ ರಚಿತವಾಗುವ ಪದ್ಯಗಳು

- **ಕಂದ ಪದ್ಯ :** ಕಂದ ಪದ್ಯವು ನಾಲ್ಕು ಸಾಲಿನ ಪದ್ಯ. ಒಂದನೆಯ ಮತ್ತು ಮೂರನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಮೂರು ಗಣಗಳಿಂದ ಕೂಡಿರುತ್ತದೆ. ಎರಡನೆಯ ಮತ್ತು ನಾಲ್ಕನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಐದು ಗಣಗಳಿಂದ ಕೂಡಿರುತ್ತದೆ. ವಿಷಮ ಗಣ ಸ್ಥಾನದಲ್ಲಿ ಮಧ್ಯ ಗುರುವಿನ ಗಣ ಬರುವುದಿಲ್ಲ. ಆರನೆಯ ಮತ್ತು ಹದಿನಾಲ್ಕನೆಯ ಗಣಗಳು ಸರ್ವಲಘುಗಳ ಗಣ ಅಥವಾ ಮಧ್ಯ ಗುರುವಿನ ಗಣವಾಗಿರುತ್ತದೆ. ಆದಿ ಪ್ರಾಸವು ಇರುತ್ತದೆ. ಕಂದಪದ್ಯದಲ್ಲಿ ಒಟ್ಟು 16 ಗಣಗಳು, 64 ಮಾತ್ರೆಗಳು ಇರುತ್ತದೆ.

  ಉದಾಹರಣೆ :

  ಒಡೆಯಲಜಾಂಡಂ ಕುಲಗಿರಿ
  ಕೆಡೆಯಲ್ ಪಿಳಿಯಲ್ಕೆ ಧಾತ್ರಿ ದಿವಿಜರ್ ನಡುಗ
  ಲ್ಕೊಡರಿಸುವಿನಂ ಜಟಾಸುರ
  ಹಿಡಿಂಬ ಬಕವೈರಿ ಸಿಂಹನಾದಂ ಗೆಯ್ದಂ

| | | |
|---|---|---|
| 4 | 4 | 4 |
| ∪ ∪ — | — — | ∪∪ ∪∪ |
| ಒಡೆಯಲ್ | ಜಾಂಡಂ | ಕುಲಗಿರಿ |

| | | | | |
|---|---|---|---|---|
| 4 | 4 | 4 | 4 | 4 |
| ∪ ∪ — | ∪ ∪ — | ∪ — ∪ | ∪ ∪ — | ∪∪ — |
| ಕೆಡೆಯಲ್ | ಪಿಳಿಯ | ಲ್ಕೆ ಧಾತ್ರಿ | ದಿವಿಜರ್ | ನಡುಗ |

| | | |
|---|---|---|
| 4 | 4 | 4 |
| ∪∪∪∪ | ∪ — ∪ | — ∪∪ |
| ಲ್ಕೊಡರಿಸು | ವಿನಂಜ | ಟಾಸುರ |

| | | | | |
|---|---|---|---|---|
| 4 | 4 | 4 | 4 | 4 |
| ∪ — ∪ | ∪∪ — | ∪ — ∪ | — — | — — |
| ಹಿಡಿಂಬ | ಬಕವೈ | ರಿ ಸಿಂಹ | ನಾದಂ | ಗೆಯ್ದಂ |

- **ಷಟ್ಪದಿಯ ಲಕ್ಷಣ :** ಆರು ಪಾದಗಳುಳ್ಳ ಪದ್ಯವನ್ನು ಷಟ್ಪದಿ ಎನ್ನುವರು. ಇದರ 1, 2, 4, 5 ನೇ ಪಾದಗಳು ಪರಸ್ಪರ ಸಮನಾಗಿರುತ್ತವೆ. ಅದೇ ರೀತಿ 3 ಮತ್ತು 6 ನೇ ಪಾದಗಳು 1 ನೇ ಪಾದದ ಒಂದೂವರೆಯಷ್ಟು ಇದ್ದು, ಅಂತ್ಯದಲ್ಲಿ ಒಂದು ಗುರುವನ್ನು ಹೊಂದಿ ಪರಸ್ಪರ ಸಮನಾಗಿರುತ್ತವೆ. ಪ್ರತಿ ಪದ್ಯದಲ್ಲೂ ಆದಿಪ್ರಾಸ ಇರುತ್ತದೆ.
- ಷಟ್ಪದಿಯಲ್ಲಿ ಆರು ವಿಧಗಳಿವೆ.

  1. ಶರ ಷಟ್ಪದಿ
  2. ಕುಸುಮ ಷಟ್ಪದಿ
  3. ಭೋಗ ಷಟ್ಪದಿ
  4. ಭಾಮಿನಿ ಷಟ್ಪದಿ
  5. ಪರಿವರ್ಧಿನಿ ಷಟ್ಪದಿ
  6. ವಾರ್ಧಕ ಷಟ್ಪದಿ

- **ಭಾಮಿನಿ ಷಟ್ಪದಿಯ ಲಕ್ಷಣ :** ಭಾಮಿನಿ ಷಟ್ಪದಿಯ 1, 2, 4, 5 ನೇ ಪಾದಗಳಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಎರಡೆರಡು ಗಣಗಳು ಇರುತ್ತವೆ. ಅದೇ ರೀತಿ 3 ಮತ್ತು 6 ನೇ ಪಾದಗಳಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಮೂರು ಮೂರು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರುವು ಇರುತ್ತದೆ. ಪ್ರತಿ ಪದ್ಯದಲ್ಲೂ ಆದಿಪ್ರಾಸ ಇರುತ್ತದೆ.

| | | | |
|---|---|---|---|
| 3 | 4 | 3 | 4 |
| — ∪ | — ∪∪ | — ∪ | ∪ ∪ ∪ ∪ |
| ಮಕ್ಕ | ಳೈವರೊ | ಳಾನು | ಹಿರಿಯನು |

| | | | |
|---|---|---|---|
| 3 | 4 | 3 | 4 |
| — ∪ | — ∪ ∪ | — ∪ | — — |
| ತಕ್ಕ | ಮಾತೆಯ | ಮಾತು | ಸಂದೇ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗುರು |
| — ∪ | ∪ ∪ — | ∪ ∪ ∪ | ∪ ∪ — | ∪ ∪ ∪ | ∪ ∪ ∪ ∪ | — |
| ಹಕ್ಕೆ | ನೆಲೆಯಿ | ಲ್ಲದುನಿ | ಲಲಿಧಾ | ರುಣಿಯ | ಬಯಸುವ | ರೆ |

| | | | |
|---|---|---|---|
| 3 | 4 | 3 | 4 |
| — ∪ | — — | — ∪ | ∪ ∪ ∪ ∪ |
| ತಕ್ಕು | ದೇದಾ | ತಾರ | ನರಸಿಯೊ |

| | | | |
|---|---|---|---|
| 3 | 4 | 3 | 4 |
| — ∪ | ∪∪∪∪ | — ∪ | — ∪ ∪ |
| ಳೊಕ್ಕ | ತನವಿರ | ಲಾರು | ಮೆಚ್ಚುವ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗುರು |
| — ∪ | — — | — ∪ | — ∪ ∪ | — ∪ | ∪∪ — | — |
| ರಕ್ಕ | ಹೇಳೌ | ಹೇಸ | ಳೇಜಯ | ಲಕ್ಷ್ಮೀ | ತನಗೆಂ | ದ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ

- **ವಾರ್ಧಕ ಷಟ್ಪದಿಯ ಲಕ್ಷಣ :** ವಾರ್ಧಕ ಷಟ್ಪದಿಯ 1, 2, 4, 5 ನೇ ಪಾದಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು ಇರುತ್ತವೆ. ಅದೇ ರೀತಿ 3 ಮತ್ತು 6 ನೇ ಪಾದಗಳಲ್ಲಿ ಐದು ಮಾತ್ರೆಯ ಆರು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರುವು ಇರುತ್ತದೆ. ಪ್ರತಿ ಪದ್ಯದಲ್ಲೂ ಆದಿಪ್ರಾಸ ಇರುತ್ತದೆ.

| | | | |
|---|---|---|---|
| 5 | 5 | 5 | 5 |
| ᴗᴗᴗ ᴗᴗ | — ᴗ ᴗ ᴗ | ᴗᴗᴗ — | ᴗᴗᴗ ᴗᴗ |
| ಸತಿಮಡಿಸಿ | ನೀಡುವೆಲೆ | ವಿಡಿದಕೈ | ಬಸವಳಿದು |

| | | | |
|---|---|---|---|
| 5 | 5 | 5 | 5 |
| ᴗᴗ — ᴗ | ᴗ ᴗ ᴗ ᴗᴗ | ᴗᴗ — ᴗ | ᴗᴗᴗ — |
| ದತಿಚಿಂತೆ | ಯೊಳುಮರೆದ | ತನುಜೊಮ್ಮ | ವಿಡಿದಪು |

| | | | | | | |
|---|---|---|---|---|---|---|
| 5 | 5 | 5 | 5 | 5 | 5 | ಗು |
| ᴗᴗ — ᴗ | — ᴗ — | — ᴗ — | ᴗᴗ ᴗ ᴗᴗ | — — ᴗ | — ᴗ ᴗᴗ | — |
| ಬ್ಱತಿಭಾರ | ವಾಗಿಕ | ಣ್ಮುಚ್ಚಿತ್ತೋಳ್ | ತೊಡೆಮಿಡುಕೆ | ಸುಯ್ಸೂಸೆ | ನಿದ್ರೆ ಕವಿ | ದು |

| | | | |
|---|---|---|---|
| 5 | 5 | 5 | 5 |
| ᴗᴗᴗ ᴗᴗ | — ᴗ ᴗ ᴗ | — ᴗ — | — — ᴗ |
| ವಿತತಸುಖ | ದಿಂದಿರುತಿ | ರಲ್ಕೆನಾ | ನಾದುಃಖ |

| | | | | | | |
|---|---|---|---|---|---|---|
| 5 | 5 | 5 | 5 | | | |
| ᴗᴗ — ᴗ | — ᴗᴗ ᴗ | — — ᴗ | — ᴗ — | | | |
| ಯುತವಪ್ಪು | ದೊಂದುಕನ | ಸಂಕಂಡು | ನೊಂದುಭೂ | | | |
| 5 | 5 | 5 | 5 | 5 | 5 | ಗು |
| ᴗᴗᴗ ᴗᴗ | — ᴗ — | ᴗᴗ — ᴗ | — ᴗᴗᴗ | — ᴗ ᴗ ᴗ | — — ᴗ | — |
| ಪತಿಬೆದರಿ | ದಂತೆಭೋಂ | ಕೆನಲೆದ್ದು | ಬೆಬ್ಬೆಳಿಸಿ | ನಾಲ್ದೆಸೆಯ | ನಾರಯ್ದು | ನು |

ಈ ಮೇಲಿನ ಪದ್ಯವು ಮಾತ್ರಾ ಗಣದ **'ವಾರ್ಧಕ ಷಟ್ಪದಿ'**ಯಲ್ಲಿ ರಚಿತವಾಗಿದೆ.

- **ರಗಳೆಯ ಲಕ್ಷಣ :** ರಗಳೆ ಮಾತ್ರಾ ಗಣಕ್ಕೆ ಸೇರಿದ ವಿಶಿಷ್ಟ ಪದ್ಯ. ಇದರಲ್ಲಿ ಇಷ್ಟೇ ಪಾದಗಳಿರಬೇಕೆಂಬ ನಿರ್ದಿಷ್ಟ ನಿಯಮವಿಲ್ಲ. ಆದರೆ ಪ್ರತಿಪಾದದಲ್ಲಿಯೂ ಗಣಗಳ ಸಂಖ್ಯೆಯು ಸಮಾನ ವಾಗಿರುವುವು. ಪ್ರತಿ ಎರಡು ಪಾದಗಳಿಗೆ ಆದಿಪ್ರಾಸ ಹಾಗೂ ಕೆಲವೆಡೆ ಅಂತ್ಯ ಪ್ರಾಸವಿರುತ್ತದೆ.
- ರಗಳೆಯಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ.
  1. ಉತ್ಸಾಹ ರಗಳೆ  2. ಮಂದಾನಿಲ ರಗಳೆ  3. ಲಲಿತ ರಗಳೆ
- **ಉತ್ಸಾಹ ರಗಳೆಯ ಲಕ್ಷಣ :** ಉತ್ಸಾಹ ರಗಳೆಯಲ್ಲಿ ಎರಡು ಬಗೆಯಿದೆ. ಮೊದಲನೆಯದರಲ್ಲಿ ಪ್ರತಿಪಾದದಲ್ಲಿಯೂ ಮೂರು ಮಾತ್ರೆಯ ನಾಲ್ಕು ಗಣಗಳಿರುತ್ತವೆ. ಎರಡನೆಯದರಲ್ಲಿ ಪ್ರತಿ ಪಾದದಲ್ಲಿಯೂ ಮೂರು ಮಾತ್ರೆಯ ಮೂರು ಗಣಗಳು ಹಾಗೂ ಒಂದು ಗುರುವೂ ಇರುತ್ತದೆ.

**ಉದಾಹರಣೆ :**
**ಕುಳಿರ್ವ ಪೂಗೊಳಂಗಳಲ್ಲಿ**
**ತಳಿರ ಕಾವಣಂಗಳಲ್ಲಿ**

| | | | |
|---|---|---|---|
| 3 | 3 | 3 | 3 |
| ∪∪∪ | — ∪ | — ∪ | — ∪ |
| ಕುಳಿರ್ವ | ಪೂಗೊ | ಳಂಗ | ಳಲ್ಲಿ |

| | | | |
|---|---|---|---|
| 3 | 3 | 3 | 3 |
| ∪∪∪ | — ∪ | — ∪ | — ∪ |
| ತಳಿರ | ಕಾವ | ಣಂಗ | ಳಲ್ಲಿ |

ಪದ್ಯವು ಮಾತ್ರಾ ಗಣದ **'ಉತ್ಸಾಹ ರಗಳೆ'**ಯಲ್ಲಿ ರಚಿತವಾಗಿದೆ.
**ಮಾವಿನಡಿಯೊಳಾಡುತಂ**
**ಪಾಡನೆಯ್ದೆ ಕೇಳುತಂ**

| | | | |
|---|---|---|---|
| 3 | 3 | 3 | ಗುರು |
| — ∪ | ∪ ∪ ∪ | — ∪ | — |
| ಮಾವಿ | ನಡಿಯೊ | ಳಾಡು | ತಂ |

| | | | |
|---|---|---|---|
| 3 | 3 | 3 | ಗುರು |
| — ∪ | — ∪ | — ∪ | — |
| ಪಾಡ | ನೆಯ್ದ | ಕೇಳು | ತಂ |

ಈ ಪದ್ಯವು ಮಾತ್ರಾ ಗಣದ **'ಉತ್ಸಾಹ ರಗಳೆ'**ಯಲ್ಲಿ ರಚಿತವಾಗಿದೆ.

- **ಮಂದಾನಿಲ ರಗಳೆಯ ಲಕ್ಷಣ :** ಮಂದಾನಿಲ ರಗಳೆಯಲ್ಲಿ ಎರಡು ಬಗೆಗಳಿವೆ. ಮೊದಲನೆಯದರಲ್ಲಿ ಪ್ರತಿಪಾದದಲ್ಲಿಯೂ ನಾಲ್ಕು ಮಾತ್ರೆಯ ನಾಲ್ಕು ಗಣಗಳಿರುತ್ತವೆ. ಎರಡನೆಯದರಲ್ಲಿ ಮೂರು ಮಾತ್ರೆಯ ನಂತರ ಐದು ಮಾತ್ರೆಯ ಎರಡೆರಡು ಗಣಗಳು ಇರುತ್ತವೆ.

  ಉದಾಹರಣೆ :
  ಪಂಕಜದಂತಿರೆ ಪುಟ್ಟಿದಳೊಲವಿಂ
  ಪಂಕವನೆಂದುಂಪೊರ್ದದೆ ನಲವಿಂ

| | | | |
|---|---|---|---|
| 4 | 4 | 4 | 4 |
| — ∪∪ | — ∪∪ | — ∪∪ | ∪∪ — |
| ಪಂಕಜ | ದಂತಿರೆ | ಪುಟ್ಟಿದ | ಳೊಲವಿಂ |

| | | | |
|---|---|---|---|
| 4 | 4 | 4 | 4 |
| — ∪∪ | — — | — ∪∪ | ∪∪ — |
| ಪಂಕವ | ನೆಂದುಂ | ಪೊರ್ದದೆ | ನಲವಿಂ |

ಈ ಪದ್ಯವು ಮಾತ್ರಾಗಣದ '**ಮಂದಾನಿಲ ರಗಳೆ**'ಯಲ್ಲಿ ರಚಿತವಾಗಿದೆ.

**ಉದಾಹರಣೆ :**

**ಸುತ್ತಲುಂ ಪರಿವಜರಿವೊನಲ್ಗಳಿಂ**
**ಎತ್ತಲುಂನಲಿವ ಪೊಸನವಿಲ್ಗಳಿಂ**

| | | | |
|---|---|---|---|
| 3 | 5 | 3 | 5 |
| — ∪ | — ∪∪∪ | ∪ ∪ ∪ | — ∪ — |
| ಸುತ್ತ | ಲುಂ ಪರಿವ | ಜರಿವೊ | ನಲ್ಗಳಿಂ |

| | | | |
|---|---|---|---|
| 3 | 5 | 3 | 5 |
| — ∪ | — ∪∪∪ | ∪ ∪ ∪ | — ∪ — |
| ಎತ್ತ | ಲುಂ ನಲಿವ | ಪೊಸನ | ವಿಲ್ಗಳಿಂ |

ಈ ಪದ್ಯವು ಮಾತ್ರಾಗಣದ ಮಂದಾನಿಲ ರಗಳೆಯಲ್ಲಿ ರಚಿತವಾಗಿದೆ.

- **ಲಲಿತ ರಗಳೆಯ ಲಕ್ಷಣ :** ಲಲಿತರಗಳೆಯಲ್ಲಿ ಪ್ರತಿಪಾದದಲ್ಲಿಯೂ ಐದು ಮಾತ್ರೆಯ ನಾಲ್ಕು ಗಣಗಳಿರುತ್ತವೆ.

**ಉದಾಹರಣೆ :**

**ಸೊಂಪಿನಿಂ ಕಂಪಿಡುವ ಸಂಪಗೆಗಳಂಕೊಂಡು**
**ಹೊಂಪೆಸೆವ ಹೊಂಗೇದಗೆಯ ಹೂಗಳಂಕೊಂಡು**

| | | | |
|---|---|---|---|
| 5 | 5 | 5 | 5 |
| — ∪ — | — ∪∪∪ | — ∪∪∪ | — — ∪ |
| ಸೊಂಪಿನಿಂ | ಕಂಪಿಡುವ | ಸಂಪಗೆಗ | ಳಂಕೊಂಡು |

| | | | |
|---|---|---|---|
| 5 | 5 | 5 | 5 |
| — ∪∪∪ | — — ∪ | ∪ ∪ — ∪ | — — ∪ |
| ಹೊಂಪೆಸೆವ | ಹೊಂಗೇದ | ಗೆಯಹೂಗ | ಳಂಕೊಂಡು |

ಈ ಪದ್ಯವು ಮಾತ್ರಾಗಣದ ಲಲಿತ ರಗಳೆಯಲ್ಲಿ ರಚಿತವಾಗಿದೆ.

## ಅಲಂಕಾರಗಳು

- **ಅಲಂಕಾರ :** ಕಾವ್ಯಕ್ಕೆ ಶೋಭೆ ತರುವ ಧರ್ಮವೇ ಅಲಂಕಾರ. ಮಾತಿನ ಅಥವಾ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ಬಳಸುವ ಶಬ್ದ ಹಾಗೂ ಅರ್ಥ ಚಮತ್ಕಾರಗಳನ್ನು **'ಅಲಂಕಾರ'** ಎನ್ನುವರು.

  **ಉದಾಹರಣೆ :**

  * ಪೂರ್ವದಿಕ್ಕಿನಲ್ಲಿ ಮೂಡಿದ ಸೂರ್ಯನು ಮುತ್ತೈದೆಯ ಹಣೆಯ ಕುಂಕುಮದಂತೆ ಕಂಡನು.
  * ಎಳೆಗಿಳಿಗಳ ಬಳಗಗಳು ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು.

- ಅಲಂಕಾರದಲ್ಲಿ **ಶಬ್ದಾಲಂಕಾರ** ಮತ್ತು **ಅರ್ಥಾಲಂಕಾರಗ**ಳೆಂದು **ಎರಡು** ವಿಧಗಳಿವೆ.
- **ಶಬ್ದಾಲಂಕಾರ :** ಮಾತಿನ ಅಥವಾ ಕಾವ್ಯದ ಸೌಂದರ್ಯವು ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮತ್ಕಾರದಿಂದ ಹೆಚ್ಚಿದರೆ ಅದನ್ನು **'ಶಬ್ದಾಲಂಕಾರ'** ಎನ್ನುವರು.
- ಶಬ್ದಾಲಂಕಾರದಲ್ಲಿ **ಮೂರು** ವಿಧಗಳಿವೆ.

  1. ಅನುಪ್ರಾಸ 2. ಯಮಕ 3. ಚಿತ್ರ ಕವಿತ್ವ.

- **ಅನುಪ್ರಾಸ ಅಲಂಕಾರ :** ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಪುನರಾವರ್ತನೆಯಿಂದ ಹೆಚ್ಚಿದರೆ ಅದನ್ನು **'ಅನುಪ್ರಾಸ'** ಎನ್ನುವರು.
- ಅನುಪ್ರಾಸದಲ್ಲಿ **ವೃತ್ತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂದು **ಎರಡು** ವಿಧಗಳಿವೆ.
- **ವೃತ್ತ್ಯನುಪ್ರಾಸ :** ಮಾತಿನ ಅಥವಾ ಕಾವ್ಯದ ಸೌಂದರ್ಯವು ಒಂದು ಅಥವಾ ಎರಡು ಅಕ್ಷರಗಳು ಪ್ರತಿಪಾದದಲ್ಲಿ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು **'ವೃತ್ತ್ಯನುಪ್ರಾಸ'** ಎನ್ನುವರು.

  **ಉದಾಹರಣೆ :**

  * **ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು.**
  * **ಬಲ್ಲವನೆ ಬಲ್ಲ ಬೆಲ್ಲದ ರುಚಿಯ.**

- **ಛೇಕಾನುಪ್ರಾಸ :** ಮಾತಿನ ಅಥವಾ ಕಾವ್ಯದ ಸೌಂದರ್ಯವು ಎರಡು ಅಕ್ಷರಗಳಿಂದ ಕೂಡಿದ ಪದಗಳು ಪ್ರತಿ ಪಾದದಲ್ಲಿಯೂ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು **'ಛೇಕಾನುಪ್ರಾಸ'** ಎನ್ನುವರು.

  **ಉದಾಹರಣೆ :**

  * ಕೆಲದೊಳ್ ಪುಳಿಂದಿಯಿರೆ ಪೆ
  ರ್ಬುಲಿ ಬಂದೊಡಮಂಜನಳ್ಕಿ **ನೋಡಂನೋಡುತಂ**
  ಚಲದಿಂ **ಕಾಡಂಕಾಡಂ**
  ಸಲೆ ಪಸಿವಂ ಮರೆದು ತಣಿದು **ಬೇಡಂಬೇಡಂ**

  * **ಉಗುಳಿ ಉಗುಳಿ** ರೋಗ ; **ಬಗುಳಿ ಬಗುಳಿ** ರಾಗ.
  * **ಮಾಡಿ ಮಾಡಿ** ಕೆಟ್ಟರು ಮನವಿಲ್ಲದೆ ; **ನೀಡಿ ನೀಡಿ** ಕೆಟ್ಟರು ನಿಜವಿಲ್ಲದೆ.

- **ಯಮಕಾಲಂಕಾರ :** ಮಾತಿನ ಅಥವಾ ಕಾವ್ಯದ ಸೌಂದರ್ಯವು ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳಿಂದ ಕೂಡಿದ ಪದಗಳು ಅಥವಾ ಪದಭಾಗ ಪ್ರತಿ ಪಾದದಲ್ಲಿಯೂ ಆದಿ / ಮಧ್ಯ / ಅಂತ್ಯದಲ್ಲಿ ನಿಯತವಾಗಿ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು **'ಯಮಕಾಲಂಕಾರ'** ಎನ್ನುವರು.

  ಉದಾಹರಣೆ :

  * **ಅಮಳ್ಗಳ್** ನಯವಿಕ್ರಮಗುಣ
  **ದಮಳ್ಗಳ್** ನೃಪಶಾಸ್ತ್ರ ಪರಿಣತರವರವರಂ ॥
  **ಸಮರ**ದೊಳಗಗ್ರ ಶೌರ್ಯಂ
  **ಸಮರಸ** ಸಂಪನ್ನನಾವನುದಾರನಪ್ಪನ್ ॥

*	**ಅಲ್ಲಿಗಲ್ಲಿಗೆ** ಬೆಳೆದ ಬೆಳೆಗಳಿಂ ಮೆಳೆಗಳಿಂ
**ದಲ್ಲಿಗಲ್ಲಿಗೆ** ವನಸ್ಥಳಗಳಿಂ ಕೊಳಗಳಿಂ
**ದಲ್ಲಿಗಲ್ಲಿಗೆ** ರನ್ನದೆರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ
**ಅಲ್ಲಿಗಲ್ಲಿಗೆ** ತೋರ್ಪ ಗಿರಿಗಳಿಂ ಕರಿಗಳಿಂ
**ದಲ್ಲಿಗಲ್ಲಿಗೆ** ನೆರೆದ ಶುಕಗಳಿಂ ಪಿಕಗಳಿಂ
**ದಲ್ಲಿಗಲ್ಲಿಗೆ** ಗವಾಸ್ಪದಗಳಿಮ ನದಿಗಳಿಂದಾದೇಶಮೊಪ್ಪಿದುದು

- **ಚಿತ್ರ ಕವಿತ್ವ :** ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಅಥವಾ ಪದಗಳ ವಿಶಿಷ್ಟವಾದ ಬಳಕೆಯ ಮೂಲಕ ಹೆಚ್ಚಿದರೆ ಅದನ್ನು **'ಚಿತ್ರ ಕವಿತ್ವ'** ಎನ್ನುವರು. ಇದರಲ್ಲಿ ನಿರೋಷ್ಟ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂದ ಇತ್ಯಾದಿ ಪ್ರಕಾರಗಳಿವೆ.

**ಉದಾಹರಣೆ :**

**ನನ್ದನ ನನ್ದನ ನಿನ್ನೊ**
**ನ್ದನ್ದದ ಮೈ ಮುನ್ದೆ ನಿನ್ದುದೆನ್ನದೆ ಮುದದಿ**
**ನ್ದನ್ದಿನ್ದುದ್ದೆನ್ನದೆ ನೀ**
**ನೆನ್ದುಂ ಮನ್ಮನದೆ ನೆಮ್ಮಿನಿನ್ದೀ ಮುದಮಂ**

- **ಅರ್ಥಾಲಂಕಾರ :** ಮಾತಿನ ಅಥವಾ ಕಾವ್ಯ ಸೌಂದರ್ಯವು ಪದಗಳ ಅರ್ಥ ಚಮತ್ಕಾರದಿಂದ ಹೆಚ್ಚಿದರೆ ಅದನ್ನು **'ಅರ್ಥಾಲಂಕಾರ'** ಎನ್ನುವರು.
- **ಅರ್ಥಾಲಂಕಾರದಲ್ಲಿರುವ ಆರು ಪ್ರಮುಖ ಅಲಂಕಾರಗಳು :**

| | |
|---|---|
| 1 ಉಪಮಾಲಂಕಾರ | 2. ರೂಪಕಾಲಂಕಾರ |
| 3. ದೃಷ್ಟಾಂತಾಲಂಕಾರ | 4. ಅರ್ಥಾಂತರ ನ್ಯಾಸಾಲಂಕಾರ |
| 5. ಶ್ಲೇಷಾಲಂಕಾರ | 6. ಉತ್ಪ್ರೇಕ್ಷಾಲಂಕಾರ |

- **ಉಪಮಾಲಂಕಾರದ ಲಕ್ಷಣ :** ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನಗಳಿಗಿರುವ) ಪರಸ್ಪರ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು **'ಉಪಮಾಲಂಕಾರ'** ಎನ್ನುವರು.
- ಉಪಮಾಲಂಕಾರದಲ್ಲಿ ನಾಲ್ಕು ಅಂಶಗಳಿರುತ್ತವೆ.

**1. ಉಪಮೇಯ :-** ಕವಿಯು ಯಾವ ವಸ್ತುವನ್ನು ಕುರಿತು ವರ್ಣಿಸುತ್ತಾನೆಯೋ ಅದನ್ನು **'ವರ್ಣ್ಯ' ಅಥವಾ 'ಉಪಮೇಯ'** ಎನ್ನುವರು.

**2. ಉಪಮಾನ** : ಕವಿಯು ಯಾವ ವಸ್ತುವನ್ನು ಆಧಾರವಾಗಿಟ್ಟುಕೊಂಡು ಅಥವಾ ಮಾನದಂಡವನ್ನಾಗಿಟ್ಟುಕೊಂಡು ವರ್ಣಿಸುತ್ತಾನೆಯೋ ಅದನ್ನು **'ಅವರ್ಣ್ಯ' ಅಥವಾ 'ಉಪಮಾನ'** ಎನ್ನವರು.

3. **ಉಪಮಾ ವಾಚಕ** : ಉಪಮೇಯ ಮತ್ತು ಉಪಮಾನಗಳಿಗೆ ಸಂಬಂಧವನ್ನು ಕಲ್ಪಿಸುವ ಪದವನ್ನು 'ಉಪಮಾ ವಾಚಕ' ಎನ್ನುವರು.

**4. ಸಮಾನ ಧರ್ಮ ;** ಉಪಮೇಯ ಮತ್ತು ಉಪಮಾನಗಳಲ್ಲಿರುವ ಸಮಾನ ಅಥವಾ ಸಾಧಾರಣ ಗುಣಗಳನ್ನು **'ಸಮಾನ ಧರ್ಮ'** ಎನ್ನುವರು.

- **ಪೂರ್ಣೋಪಮಾಲಂಕಾರದ ಲಕ್ಷಣ :** ಉಪಮೇಯ, ಉಪಮಾನ, ಉಪಮಾ ವಾಚಕ ಮತ್ತು ಸಮಾನ ಧರ್ಮ ಎಂಬ ನಾಲ್ಕು ಅಂಶಗಳನ್ನೊಳಗೊಂಡ ಅಲಂಕಾರವನ್ನು **'ಪೂರ್ಣೋಪಮಾಲಂಕಾರ'** ಎನ್ನುವರು.

ಉದಾಹರಣೆ :

* **ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

**ಉಪಮೇಯ** : ಭೀಮ ದುರ್ಯೋಧನರು

**ಉಪಮಾನ** : ಮದಗಜಗಳು

**ಉಪಮಾ ವಾಚಕ** : ಅಂತೆ

**ಸಮಾನ ಧರ್ಮ** : ಹೋರಾಡುವುದು

**ಸಮನ್ವಯ** : ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ (ಉಪಮೇಯ ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು.

➢ **ಲುಪ್ತೋಪಮಾಲಂಕಾರದ ಲಕ್ಷಣ :** ಉಪಮೇಯ, ಉಪಮಾನ, ಉಪಮಾ ವಾಚಕ ಮತ್ತು ಸಮಾನ ಧರ್ಮ ಎಂಬ ನಾಲ್ಕು ಅಂಶಗಳಲ್ಲಿ ಕೆಲವು ಅಂಶಗಳನ್ನು ಹೇಳಲ್ಪಡದೇ ಇರುವ ಅಲಂಕಾರವನ್ನು **'ಲುಪ್ತೋಪಮಾಲಂಕಾರ'** ಎನ್ನುವರು.

* **"ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"**

**ಉಪಮೇಯ** : ನೀಚರಿಗೆ ಮಾಡಿದ ಉಪಕಾರ

**ಉಪಮಾನ** : ಹಾವಿಗೆ ಎರೆದ ಹಾಲು

**ಉಪಮಾ ವಾಚಕ** : ಅಂತೆ

**ಸಮಾನ ಧರ್ಮ** : ಸ್ಪಷ್ಟವಾಗಿಲ್ಲ (ನಿಷ್ಪ್ರಯೋಜಕವಾದುದು)

**ಸಮನ್ವಯ** : ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಹೋಲಿಸಿವರ್ಣಿಸಲಾಗಿದೆ.

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ (ಉಪಮೇಯ ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು.

* **ಮುಳ್ಳಿಡಿದ ಮರನೇರಿದಂತಾದುದು.**

**ಉಪಮೇಯ** : ಸ್ಪಷ್ಟವಾಗಿಲ್ಲ (ಚಂಡಿಯೊಂದಿಗಿನ ಬಾಳುವೆ)

**ಉಪಮಾನ** : ಮುಳ್ಳಿಡಿದ ಮರ

**ಉಪಮಾ ವಾಚಕ** : ಅಂತೆ

**ಸಮಾನ ಧರ್ಮ** : ಸ್ಪಷ್ಟವಾಗಿಲ್ಲ (ಹಿಂಸೆ ಅನುಭವಿಸುವುದು)

**ಸಮನ್ವಯ** : ಇಲ್ಲಿ ಉಪಮೇಯ ಮತ್ತು ಸಮಾನ ಧರ್ಮ ಸ್ಪಷ್ಟವಾಗಿಲ್ಲ. ಉಪಮಾನವಾದ ಮುಳ್ಳಿಡಿದ ಮರಕ್ಕೆ ಹೋಲಿಸಿ ವರ್ಣಿಸಲಾಗಿದೆ.

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ (ಉಪಮೇಯ ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು.

* "ಮಾರಿಗೌತಣವಾಯ್ತು ನಾಳಿನ ಭಾರತವು"

**ಉಪಮೇಯ** : ನಾಳಿನ ಭಾರತ ಯುದ್ಧ

**ಉಪಮಾನ** : ಮಾರಿಯ ಔತಣ

**ಸಮನ್ವಯ** : ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

**ಅಲಂಕಾರ** : ರೂಪಕಾಲಂಕಾರ.

ಲಕ್ಷಣ : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು **'ರೂಪಕಾಲಂಕಾರ'**.

➢ **ದೃಷ್ಟಾಂತಾಲಂಕಾರದ ಲಕ್ಷಣ :** ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು **'ದೃಷ್ಟಾಂತಾಲಂಕಾರ.'** ಎನ್ನುವರು.

**ಉದಾಹರಣೆ** :

* ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**ಸಮನ್ವಯ** : ಇಲ್ಲಿ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಎರಡೂ ವಾಕ್ಯವು ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಎರಡೂ ಒಂದೇ ಎಂಬುದು ಪ್ರತಿಪಾದಿತವಾಗಿದೆ.

**ಅಲಂಕಾರ** : ದೃಷ್ಟಾಂತಾಲಂಕಾರ

➢ **ಉತ್ಪ್ರೇಕ್ಷಾಲಂಕಾರದ ಲಕ್ಷಣ :** ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.

**ಉದಾಹರಣೆ :**

* **ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**

**ಉಪಮೇಯ** : ಅಚ್ಛೋದ ಸರೋವರ

**ಉಪಮಾನ** : ರನ್ನಗನ್ನಡಿ

**ಸಮನ್ವಯ** : ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ.

**ಅಲಂಕಾರ** : ಉತ್ಪ್ರೇಕ್ಷಾಲಂಕಾರ.

**ಲಕ್ಷಣ** : ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.

➢ **.ಶ್ಲೇಷಾಲಂಕಾರದ ಲಕ್ಷಣ :** ಬೇರೆ ಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದನ್ನು **'ಶ್ಲೇಷಾಲಂಕಾರ'** ಎನ್ನುವರು.

ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ 'ಶ್ಲೇಷ ಪದ' ಎನ್ನುವರು. ಇಂತಹ ಶ್ಲೇಷಾರ್ಥಗಳನ್ನು ನೀಡಬಲ್ಲ ಪದಗಳಿರುವ ಅಲಂಕಾರವನ್ನು **'ಶ್ಲೇಷಾಲಂಕಾರ'** ಎನ್ನುವರು.

**ಉದಾಹರಣೆ :**

* ಅತಿಶಯ ಪದಾರ್ಥ ನಿಕರ ।
ಪ್ರತೀತಿಯಂ ಪಡೆದ ಪಾದವಿನ್ಯಾಸಂ ಭೂ ॥
ನುತಮಾಗದಲ್ತೆನಿರ್ದೋಷ ।
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥

| | | |
|---|---|---|
| ಪದ | : ಕವಿಯ ಪರವಾಗಿ (ಉಪಮೇಯ) | ರವಿಯ ಪರವಾಗಿ (ಉಪಮಾನ) |
| ಪದಾರ್ಥ | : ಪದದ ಅರ್ಥ (ಶಬ್ದಾರ್ಥ) | ವಸ್ತು |
| ಪಾದ | : ಪದ್ಯದ ಸಾಲು | ಕಿರಣ |
| ನಿರ್ದೋಷತೆ | : ದೋಷವಿಲ್ಲದಿರುವಿಕೆ | ಕತ್ತಲಿಲ್ಲದಿರುವಿಕೆ (ಹಗಲು) |

ಸಮನ್ವಯ : ಇಲ್ಲಿ ಕವಿ ಮತ್ತು ರವಿ ಒಂದೇ ಬಗೆಯ ಪದಗಳಿಂದ ವರ್ಣಿತರಾಗಿದ್ದಾರೆ. ಈ ವರ್ಣನೆಯಲ್ಲಿ ಪದಾರ್ಥ, ಪಾದ, ನಿರ್ದೋಷತೆ ಎಂಬ ಪದಗಳು ಶ್ಲೇಷಾರ್ಥದಿಂದ ಕೂಡಿವೆ. ಆದ್ದರಿಂದ ಇಲ್ಲಿ ಶ್ಲೇಷಾಲಂಕಾರವಿದೆ.

ಅಲಂಕಾರ : ಶ್ಲೇಷಾಲಂಕಾರ.

- **ಅರ್ಥಾಂತರನ್ಯಾಸಾಲಂಕಾರದ ಲಕ್ಷಣ :** ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ <u>ಅರ್ಥಾಂತರನ್ಯಾಸ ಅಲಂಕಾರ.</u>

**ಉದಾಹರಣೆ :**

* **"ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

**ಉಪಮೇಯ (ವಿಶೇಷ ವಾಕ್ಯ)** : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

**ಉಪಮಾನ (ಸಾಮಾನ್ಯ ವಾಕ್ಯ)** : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**ಸಮನ್ವಯ** : ಇಲ್ಲಿ ಉಪಮೇಯವಾದ "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ "ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?" ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ.

**ಅಲಂಕಾರ** : ಅರ್ಥಾಂತರನ್ಯಾಸಾಲಂಕಾರ

## ವಚನ ದೀಪ

ಅತ್ತಲಿತ್ತ ಹೋಗದಂತೆ ಹೇಳವನ ಮಾಡಯ್ಯಾ ತಂದೆ;
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ;
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು,
ಕೂಡಲಸಂಗಮದೇವಾ. ॥ 59 ॥

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ,
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ,
ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ. ॥ 62 ॥

ನೀನೊಲಿದಡೆ ಕೊರಡು ಕೊನರುವುದಯ್ಯಾ,
ನೀನೊಲಿದಡೆ ಬರಡು ಹಯನಹುದಯ್ಯಾ,
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ.
ನೀನೊಲಿದಡೆ ಸಕಲಪಡಿಪದಾರ್ಥ ಇದಿರಲಿರ್ಪುವು
ಕೂಡಲಸಂಗಮದೇವಾ. ॥ 66 ॥

**– : ಶುಭವಾಗಲಿ : ಬಸವಾದಿ ಶರಣರ ಆಶೀರ್ವಾದವಿರಲಿ : ಶರಣು ಶರಣಾರ್ಥಿಗಳು : –**